# ಅಪ್ಪ ನೆಟ್ಟ ಆಲ

## ಅಂತರ್ಪೀಳಿಗೆಯ ನಡುವೆ ಔದ್ಯೋಗಿಕ ಚಲನಶೀಲತೆಗೆ ಸಂಬಂಧಿಸಿದಂತೆ ಆಗಿರುವ ಬದಲಾವಣೆಗಳ ಬಗ್ಗೆ ಭಾರತದಲ್ಲಿ ನಮಗೆ ಕಾಣಸಿಗುವ ಪುರಾವೆಗಳು

ಶ್ರೀಪಾದ್ ಮೋತಿರಾಮ್, ಆಶಿಶ್ ಸಿಂಘ್

ಭಾರತದಲ್ಲಿ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಯ ನಡುವೆ ಯಾವ ರೀತಿಯ ಔದ್ಯೋಗಿಕ ಚಲನಶೀಲತೆ ಕಾಣಲು ಸಿಗುತ್ತದೆ ಎಂಬುದನ್ನು ಈ ಲೇಖನ ಪರಿಶೀಲಿಸುತ್ತದೆ. ನಮ್ಮಲ್ಲಿ ಈ ವಿಷಯದ ಕುರಿತಂತೆ ವ್ಯವಸ್ಥಿತವಾದ ಮತ್ತು ಆಳವಾದ ಅಧ್ಯಯನಗಳು ಹೆಚ್ಚಿಗೆ ನಡೆದಿಲ್ಲ. ಈ ನಿಟ್ಟಿನಲ್ಲಿ,ಮಾನವ ಅಭಿವೃದ್ಧಿಯನ್ನು ಅಳೆಯಲು 2005ರಲ್ಲಿ ಭಾರತದಾದ್ಯಂತ ಕೈಗೊಂಡ ಸಮೀಕ್ಷೆ (India Human Development Survey 2005)ಯಲ್ಲಿ ದಾಖಲಿಸಲ್ಪಟ್ಟ ದತ್ತಾಂಶಗಳನ್ನು ಆಧಾರವಾಗಿಟ್ಟುಕೊಂಡು ಈ ಅಧ್ಯಯನ ಲೇಖನವನ್ನು ಬರೆಯಲಾಗಿದೆ. ಇದರಲ್ಲಿ ಜನರನ್ನು ಗ್ರಾಮೀಣ, ನಗರ ಮತ್ತು ಅಖಿಲ ಭಾರತ ಮಟ್ಟದಲ್ಲಿ ಮತ್ತು ಹಾಗೆಯೇ ವಿವಿಧ ಜಾತಿವಾರು ಗುಂಪುಗಳನ್ನಾಗಿ ವರ್ಗೀಕರಿಸಿ, ಇಲ್ಲಿ ಕಂಡುಬರುವ ಚಲನಶೀಲತೆಯ ಮಾದರಿಗಳನ್ನು ದಾಖಲಿಸಲಾಗಿದೆ. ಈ ಅಧ್ಯಯನದ ಮೂಲಕ ನಮಗೆ ವಿಶೇಷವಾಗಿ ಹೆಚ್ಚಿನ ಕೌಶಲ್ಯದ ಅಗತ್ಯ ಇಲ್ಲದಿರುವ ಮತ್ತು ಕಡಮೆ-ವೇತನದ ಉದ್ಯೋಗಗಳಲ್ಲಿ ತೊಡಗಿಕೊಂಡಿರುವ ಸಮುದಾಯಗಳಲ್ಲಿ ಚಲನಶೀಲತೆಯ ಕೊರತೆ ಕಂಡುಬರುತ್ತದೆ. ಉದಾಹರಣೆಗೆ, ಕೃಷಿ ಕಾರ್ಮಿಕರ ಅರ್ಧದಷ್ಟು ಮಕ್ಕಳು ತಲತಲಾಂತರದಿಂದ ಕೃಷಿ ಕಾರ್ಮಿಕರಾಗಿಯೇ ಉಳಿದಿದ್ದಾರೆ. ಈ ಅಧ್ಯಯನವು ಜಾತಿ ಗುಂಪುಗಳ ನಡುವಿನ ವ್ಯತ್ಯಾಸಗಳನ್ನು ಸಹ ದಾಖಲಿಸುತ್ತದೆ. ಒಟ್ಟಂದದಲ್ಲಿ, ಈ ಅಧ್ಯಯನದಿಂದ ಕಂಡುಕೊಂಡ ಫಲಿತಾಂಶಗಳು ಭಾರತದಲ್ಲಿ ಉದ್ಯೋಗಾವಕಾಶಗಳಲ್ಲಿ ಇರುವ ಗಣನೀಯ ಅಸಮಾನತೆಯನ್ನು ಸೂಚಿಸುತ್ತವೆ.

ಈ ಲೇಖನದ ಹಿಂದಿನ ಆವೃತ್ತಿಗೆ ಎಸ್. ಚಂದ್ರಶೇಖರ್, ಎಸ್. ಸುಬ್ರಮಣಿಯನ್, ವಂಶಿ ವಕುಲಾಭರಣಂ, ಟಾಮ್ ವೈಸ್‌ಕಾಫ್ ಮತ್ತು ಹೈದರಾಬಾದ್ ವಿಶ್ವವಿದ್ಯಾಲಯ ಮತ್ತು ಹೆಲ್ಸಿಂಕಿಯ ವರ್ಲ್ಡ್ ಇನ್‌ಸ್ಟಿಟ್ಯೂಟ್ ಫಾರ್ ಡೆವಲಪ್‌ಮೆಂಟ್ ಎಕನಾಮಿಕ್ಸ್ ರಿಸರ್ಚ್(World Institute for Development Economics Research, Helsinki)ನಲ್ಲಿ ಆಯೋಜಿಸಲಾದ ಸೆಮಿನಾರಿನಲ್ಲಿ ಭಾಗವಹಿಸಿದ ಅನೇಕರು ತಮ್ಮ ಟಿಪ್ಪಣಿಗಳನ್ನು ಒದಗಿಸಿದ್ದಾರೆ. ಅವರಿಗೆ ನಮ್ಮ ಧನ್ಯವಾದಗಳು. ಹಾಗೆಯೇ ಈ ಅಧ್ಯಯನಕ್ಕೆ ಪೂರಕಾಗಿ ನಿಶ್ಚಲತೆಯ ಮಾಪನ(measures of immobility)ಗಳ ಕುರಿತು ತಮ್ಮ ಅಧ್ಯಯನ ಲೇಖನವನ್ನು ಒದಗಸಿದ ಪಾಲ್ ಸೋಮರ್ಸ್‌ಗೆ ಕೂಡ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಶ್ರೀಪಾದ್ ಮೋತಿರಾಮ್ WIDER ನಲ್ಲಿ ಸಂದರ್ಶಕರಾಗಿದ್ದಾಗ ಈ ಅಧ್ಯಯನ ಲೇಖನವನ್ನು ಬರೆಯಲಾಗಿದ್ದು,ಈ ಅವಧಿಯಲ್ಲಿ WIDER ಅವರಿಗೆ ನೀಡಿದ ಬೆಂಬಲಕ್ಕಾಗಿ ಅವರು WIDERಗೆ ಋಣಿಯಾಗಿದ್ದಾರೆ.

ಶ್ರೀಪಾದ್ ಮೋತಿರಾಮ್ (sripad@igidr.ac.in) ಮುಂಬೈನ ಇಂದಿರಾ ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ರಿಸರ್ಚ್(Indira Gandhi Institute of Development Research, Mumbai)ನಲ್ಲಿ ಪ್ರಾಧ್ಯಾಪಕರಾಗಿದ್ದಾರೆ ಮತ್ತು ಆಶಿಶ್ ಸಿಂಘ್ (ashishsingh@igidr.ac.in) ಮುಂಬೈನ IGIDR ನಲ್ಲಿ ಸಂಶೋಧನಾ ವಿದ್ವಾಂಸರಾಗಿದ್ದಾರೆ.

### ಪ್ರಸ್ತಾವನೆ

ಸಮಾಜದಲ್ಲಿ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಯಾವ ರೀತಿಯ ಪರಿವರ್ತನೆಗಳು ನಡೆಯುತ್ತವೆ ಎಂಬುದು ಒಂದು ಮೂಲಭೂತವಾದ ಅಧ್ಯಯನಯೋಗ್ಯವಿಷಯವಾಗಿದೆ. ಮಕ್ಕಳು ತಮ್ಮ ಹೆತ್ತವರು ಬದುಕಿದ ಜಗತ್ತಿಗಿಂತ ತೀರ ಭಿನ್ನವಾದ ಜಗತ್ತಿನಲ್ಲಿ ಬದುಕುತ್ತಿದ್ದಾರೆಯೇ? ತಮ್ಮ ಹೆತ್ತವರು ತೊಡಗಿಸಿಕೊಂಡಿದ್ದಂತಹ ಉದ್ಯೋಗಗಳಿಗಿಂತ ಉತ್ತಮವೆಂದೆನಿಸುವ ಉದ್ಯೋಗಗಳಲ್ಲಿದ್ದಾರೆಯೇ? ತಮ್ಮ ಹೆತ್ತವರಿಗಿಂತ ಉತ್ತಮ ವಿದ್ಯಾಭ್ಯಾಸ ಪಡೆದಿದ್ದಾರೆಯೇ? ಈ ಪರಿವರ್ತನೆಯ ಪ್ರಕ್ರಿಯೆಯುಸಮಾಜದಲ್ಲಿ ಸಮಾನವಾಗಿ, ನ್ಯಾಯಯುತವಾಗಿನಡೆದಿದೆಯೇ?...ಎಂಬಿತ್ಯಾದಿ ಪ್ರಶ್ನೆಗಳು ನಮ್ಮ ಮುಂದೆ ಬರುತ್ತವೆ. 1980ರ ದಶಕದ ಮಧ್ಯಭಾಗದಿಂದ ಭಾರತದಲ್ಲಿ 'ಅಸಾಧಾರಣ ಅಭಿವೃದ್ಧಿ'ನಡೆಯುತ್ತಿದೆ ಮತ್ತು ಇದು ಜಗತ್ತಿನಲ್ಲಿ ಒಂದು ನೂತನ ವ್ಯವಸ್ಥೆಗೆ ನಾಂದಿ ಹಾಡುತ್ತಿದೆ ಎಂಬ ಗ್ರಹಿಕೆ ಹೆಚ್ಚುತ್ತಿರುವ ಕಾರಣಕ್ಕೆ ಇತ್ತೀಚಿನ ದಿನಗಳಲ್ಲಿ ಅದನ್ನು ಕುರಿತಂತೆ ಅಧ್ಯಯನಾಸಕ್ತಿ ಕೂಡ ಬಲವಾಗಿದೆ.[2] ಆದರೂ, ತುಲನಾತ್ಮಕವಾಗಿ ಹೇಳುವುದಾದರೆ, ಮೇಲಿನ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಹೆಚ್ಚಿನ ಪರಿಶ್ರಮದ ಕೆಲಸ ನಡೆದಿಲ್ಲವೆಂದೇ ಹೇಳಬಹುದು. ಈ ಅಧ್ಯಯನ ಲೇಖನವು ಈ ಕೊರತೆಯನ್ನು ಪರಿಹರಿಸುವ ಒಂದು ಸಣ್ಣ ಪ್ರಯತ್ನ. ಇದಕ್ಕೆ ಅಧಾರವಾಗಿ ನಾವು India Human Development Survey(IHDS) 2005ರ ದತ್ತಾಂಶಗಳನ್ನು ಬಳಸಿಕೊಂಡಿದ್ದೇವೆ. ಭಾರತದಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಕಂಡುಬರುವ ಅಸಮಾನತೆಯು ನಮ್ಮ ದೇಶದೊಳಗೆ ಮಾತ್ರವಲ್ಲದೆ ವಿದೇಶಗಳಲ್ಲಿಯೂ, ವಿದ್ವಾಂಸರಿಗೆ ಮಾತ್ರವಲ್ಲದೆ ಚಿಂತನಾ ಸಾಮರ್ಥ್ಯವುಳ್ಳ ಜನಸಾಮಾನ್ಯರಿಗೂ ಕೂಡ ಅಗಾಧವಾದ ಅಧ್ಯಯನಾಸಕ್ತಿಯ ವಿಷಯವಾಗಿದೆ. ಭಾರತದಲ್ಲಿ ನಡೆಯುತ್ತಿರುವ ಅಭಿವೃದ್ಧಿಯ ಹಂಚಿಕೆಯಲ್ಲಿ ಅಸಮಾನತೆ ಇದೆ ಎಂಬುದು ಈ ಕಾಳಜಿಯ ಹಿಂದಿನ ಭಾಗಶಃ ಕಾರಣವಾಗಿದ್ದರೆ, ಮುಂದುವರಿದು,ಹೆಚ್ಚಿನ ಮತ್ತು/ಅಥವಾ ಹೆಚ್ಚುತ್ತಿರುವ ಅಸಮಾನತೆಯು ಅಭಿವೃದ್ಧಿಯ ಹಳಿತಪ್ಪಿಸಬಹುದೆಂಬ ಭಯ ಇನ್ನೊಂದು ಕಾರಣವಾಗಿದೆ.[3]ಈ ಕಾಳಜಿ ಮತ್ತು ಭಯ ಎಷ್ಟಿದೆಯೆಂದರೆ, ಪ್ರಮುಖ ಚಿಂತಕರೊಬ್ಬರು (ಗುಹಾ 2011),'ಇಂದು ಅಸಮಾನತೆಯು (ಭ್ರಷ್ಟಾಚಾರ ಮತ್ತು ಪರಿಸರ ನಾಶ ಸೇರಿದಂತೆ) 'ಬಹುತ್ವ ಮತ್ತು ಎಲ್ಲರ ಒಳಗೊಳ್ಳುವಿಕೆ' ಎಂಬ ತತ್ತ್ವದ ಆಧಾರದ ಮೇಲೆ ಕಟ್ಟಿರುವ 'ಭಾರತದಕಲ್ಪನೆ'(idea of India)ಗೆ ಒಂದು 'ಐಹಿಕ ಮತ್ತು ಪ್ರಾಪಂಚಿಕ'(materialist and mundane) ಸವಾಲನ್ನು ಒಡ್ಡುತ್ತದೆ,' ಎಂದು ವಾದಿಸುತ್ತಾರೆ. ಅಷ್ಟೇ ಅಲ್ಲದೆ, 1990-91ರಿಂದ ಭಾರತದಲ್ಲಿಜಾರಿಗೆ ಬಂದಿರುವ ಆರ್ಥಿಕ ಸುಧಾರಣೆಗಳ ಬಗ್ಗೆ ಕೂಡ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ ಮತ್ತು ಈ ಚರ್ಚೆಯಲ್ಲಿ ಅಸಮಾನತೆಒಂದು ಪ್ರಮುಖ ವಿಷಯವಾಗಿದೆ. ಈ ನಿಟ್ಟಿನಲ್ಲಿ, ಭಾರತದಲ್ಲಿನ ಅಸಮಾನತೆಗಳನ್ನು ಕುರಿತು ಸಾಕಷ್ಟು ಅಧ್ಯಯನಗಳು (ಉದಾ.,Jayadev et al 2007; Vakulabharanam 2010; Sarkar and Mehta 2010; Krishna and Setupathy 2011; Motiram and Sarma 2011; Motiram and Vakulabharanam 2011; Weisskopf 2011)ನಡೆದಿವೆ. ಆದರೆ, ಇವುಗಳ ಪೈಕಿ ಹೆಚ್ಚಿನ ಅಧ್ಯಯನಗಳು ಯಾವುದೋ ಒಂದು ಅಂಶವನ್ನು (outcome variable) ಕುರಿತು (ಬಳಕೆಯ ವೆಚ್ಚ, ವೇತನ, ಸಂಪತ್ತು, ಇತ್ಯಾದಿ) ಹೆಚ್ಚು ಗಮನ ಹರಿಸಿವೆ. ಈ ವಿಷಯಗಳಿಗೆ ಸಂಬಂಧಿಸಿದಂತೆ ಇರುವ ಅಸಮಾನತೆಕಾಲಾಂತರದಲ್ಲಿ ಹೇಗೆ ಬದಲಾಗಿದೆ ಎಂಬುದನ್ನು ಅನ್ವೇಷಿಸುವಾಗ, ಈಗಿನ ತಲೆಮಾರಿನ ಮೇಲೆ ಅದರ ಪರಿಣಾಮವನ್ನು ಕುರಿತಾಗಲಿ, ಅಥವಾ ಅಂತರ್ಪೀಳಿಗೆಯ ನಡುವಿನ ಚಲನಶೀಲತೆಯನ್ನು ಕುರಿತಾಗಲಿ ಹೆಚ್ಚಿನ ಅಧ್ಯಯನಗಳು ನಡೆದಿರುವುದು ಕಂಡುಬರುವುದಿಲ್ಲ.[4]

ಚಲನಶೀಲತೆಯನ್ನು (ಅಂತರ್ಪೀಳಿಗೆ ಅಥವಾ ಪರಸ್ಪರ)ಏಕೆ ಅಧ್ಯಯನ ಮಾಡಬೇಕು?ವಿವಿಧ ಕಾರಣಗಳಿಗಾಗಿ ಹುಟ್ಟಿಕೊಳ್ಳುವ ಚಲನಶೀಲತೆಯಲ್ಲಿನ ವ್ಯತ್ಯಯಗಳು ವಿಭಿನ್ನ ಪರಿಣಾಮಗಳಿಗೆ, ಅದರಲ್ಲೂ ವಿಶೇಷವಾಗಿ ವಿಭಿನ್ನ ಅಭಿವೃದ್ಧಿ ಪ್ರಮಾಣಗಳಿಗೆ ಕಾರಣವಾಗಬಹುದು. ಪ್ರತಿಭೆಯು ವಿವಿಧ ಸಾಮಾಜಿಕ-ಆರ್ಥಿಕ ಗುಂಪುಗಳಲ್ಲಿ ಸಮಾನವಾಗಿ ಹಂಚಿಕೆಯಾಗಿರುತ್ತದೆ ಎಂದು ನಾವು ಅಂದುಕೊಳ್ಳಬಹುದಾದರೆ, ಹೆಚ್ಚಿನ ಚಲನಶೀಲ ಸಮಾಜವು ಅದರ ಸದಸ್ಯರ ಪ್ರತಿಭೆಯನ್ನು ಉತ್ತಮವಾಗಿ ಬಳಸಿಕೊಳ್ಳುವ ಮೂಲಕ ವೇಗವಾಗಿ ಬೆಳೆಯಲು ಸಾಧ್ಯವಾಗುತ್ತದೆ (Weil 2009: 432).ಅಷ್ಟೇ ಅಲ್ಲದೆ, ಕೆಲಸ ಮಾಡಲು ಜನರಿಗೆ ಇರುವ ಪ್ರೇರಣೆಯು ಕೂಡ ಇದೇ ರೀತಿಯ ಪರಿಣಾಮಗಳಿಗೆ ಕಾರಣವಾಗುತ್ತದೆ -ಒಂದು

ಸಮಾಜದಲ್ಲಿ ಬಡವರು ಮತ್ತು ಶ್ರೀಮಂತರು (ಮತ್ತು ಅವರ ಮಕ್ಕಳು) ಯಶಸ್ವಿಯಾಗುವ ಅಥವಾ ವಿಫಲರಾಗುವ ಸಾಧ್ಯತೆ ಸಮಾನವಾಗಿರುವಾಗ, ಈ ಎರಡೂ ಗುಂಪಿಗೆ ಸೇರಿದ ಜನರು ಕಷ್ಟಪಟ್ಟು ಕೆಲಸ ಮಾಡಲು ಹೆಚ್ಚಿನ ಉತ್ತೇಜನವನ್ನು ಹೊಂದಿರುತ್ತಾರೆ (Bourguignon et al2007). ಅಲ್ಲದೆ, ಹೆಚ್ಚಿನ ಚಲನಶೀಲತೆ (ನೈಜ ಅಥವಾ ಇದೆಯೆಂದು ಗ್ರಹಿಸಲ್ಪಡುವ) ಆರ್ಥಿಕ ಅಭಿವೃದ್ಧಿಯ ಮೇಲೆ ದುಷ್ಪರಿಣಾಮಬೀರುವ ಸಾಮಾಜಿಕ ಸಂಘರ್ಷಗಳನ್ನು ಮತ್ತು ಪುನರ್ವಿತರಣಾ ನೀತಿಗಳ ಮೇಲಿನ ಒತ್ತಡಗಳನ್ನು ಕಡಮೆ ಮಾಡಬಹುದು.[5] ಅಂತಿಮವಾಗಿ ಹೇಳುವುದಾದರೆ, ಚಲನಶೀಲತೆಯು ಅವಕಾಶಗಳ ಅಸಮಾನ ಹಂಚಿಕೆಗಳೊಂದಿಗೆ ನಿಕಟ ಸಂಬಂಧ ಹೊಂದಿದೆ. ಅವಕಾಶಗಳ ಅಸಮಾನತೆಯನ್ನು ಕುರಿತಂತೆ ಅರ್ಥಶಾಸ್ತ್ರ, ನೀತಿಶಾಸ್ತ್ರ ಮತ್ತು ರಾಜಕೀಯ ತತ್ತ್ವಶಾಸ್ತ್ರ ಸೇರಿದಂತೆ ಹಲವಾರು ಅಧ್ಯಯನ ವಿಭಾಗಗಳಲ್ಲಿ ವಿಫುಲ ಸಾಹಿತ್ಯ ಲಭ್ಯವಿದೆ. ಹಾಗಾಗಿ ನಾವು ಇದರ ಮೂಲಕವಾಗಿ ವಿಷಯ ಪ್ರವೇಶ ಮಾಡುತ್ತಿಲ್ಲ. ಆದಾಗ್ಯೂ, ಅವಕಾಶಗಳ ಅಸಮಾನತೆಯನ್ನು ಕುರಿತಂತೆ ಪ್ರಭಾವಶಾಲಿಯಾದ ಮತ್ತು (ನಮ್ಮ ಅಭಿಪ್ರಾಯದಲ್ಲಿ) ಸಮಂಜಸವಾದ ಒಂದು ದೃಷ್ಟಿಕೋನದ ಪ್ರಕಾರ (Roemer 1998, 2006), ವಿಶಾಲ ನೆಲೆಯಲ್ಲಿ ಹೇಳುವುದಾದರೆ, ಜನರಿಗೆ ತಮ್ಮ ಜೀವನದಲ್ಲಿ ಏನನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂಬುದು ಎರಡು ಅಂಶಗಳ ಮೇಲೆ ಅವಲಂಬಿತವಾಗಿದೆ: ಒಂದು, ಅವರ ನಿಯಂತ್ರಣದಲ್ಲಿ ಇರುವ ಅಂಶಗಳು ('ಅವರ ಪ್ರಯತ್ನಗಳು'), ಇನ್ನೊಂದು, ಅವರ ನಿಯಂತ್ರಣದಲ್ಲಿ ಇಲ್ಲದ ಅಂಶಗಳು ('ಅವರ ಸಂದರ್ಭಗಳು', ಉದಾ, ಲಿಂಗ, ಜಾತಿ, ಜನಾಂಗ, ಇತ್ಯಾದಿ). ಇಲ್ಲಿ ನಾವು ಜನರನ್ನು ಮೊದಲಿನ ಅಂಶಕ್ಕೆ ಸಂಬಂಧಿಸಿದಂತೆ ಜವಾಬ್ದಾರರನ್ನಾಗಿಸಬಹುದೇ ಹೊರತು ಎರಡನೆಯದಕ್ಕೆ ಅಲ್ಲ. ಅಂತರ್ಪೀಳಿಗೆಯ ನಡುವೆ ಕಡಮೆ ಚಲನಶೀಲತೆ ಇರುವ ಸಮಾಜಗಳಲ್ಲಿ, ಒಬ್ಬ ವ್ಯಕ್ತಿಯ ಕೌಟುಂಬಿಕ ಹಿನ್ನೆಲೆ (ಉದಾಹರಣೆಗೆ, ಪೋಷಕರ ಶಿಕ್ಷಣ, ಪೋಷಕರ ಉದ್ಯೋಗ), ಆ ವ್ಯಕ್ತಿಗೆ ಲಭ್ಯವಾಗುವ ಜೀವನಾವಕಾಶಗಳಲ್ಲಿ ಬಹಳ ದೊಡ್ಡ ಪಾತ್ರವನ್ನು ವಹಿಸುತ್ತದೆ. ಮೇಲಿನ ದೃಷ್ಟಿಕೋನದಿಂದ ನೋಡುವುದಾದರೆ, (ನಾವು ಯಾವ ಕುಟುಂಬದಲ್ಲಿ ಹುಟ್ಟುತ್ತೇವೆ ಎಂಬುದನ್ನು ನಾವು ಆಯ್ಕೆ ಮಾಡಲು ಸಾಧ್ಯವಿಲ್ಲದ ಕಾರಣ), ಇಂತಹ ಸಮಾಜಗಳು ಅವಕಾಶಗಳ ಅಸಮಾನತೆಯ ನೆಲೆಯಲ್ಲಿ ನಿರೂಪಿಸಲ್ಪಡುತ್ತವೆ.

ಈ ಮೇಲಿನ ಅಂಶಗಳನ್ನು ಪರಿಗಣಿಸಿ, ನಮ್ಮ ಅಧ್ಯಯನದಲ್ಲಿ ಅಂತರ್ಪೀಳಿಗೆಗಳ ನಡುವಿನ ಔದ್ಯೋಗಿಕ ಚಲನಶೀಲತೆಯ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸಿದ್ದೇವೆ. ಒಬ್ಬ ವ್ಯಕ್ತಿಯ ಉದ್ಯೋಗವು ಆತನ/ಆಕೆಯ ಜೀವನವನ್ನು ನಿರ್ಧರಿಸುತ್ತದೆ ಎಂಬುದು ಈ ಅಂಶದೆಡೆಗೆ ನಾವು ನಮ್ಮ ಗಮನವನ್ನು ಕೇಂದ್ರೀಕರಿಸಲು ಇರುವ ಮುಖ್ಯ ಕಾರಣ. ಈ ಅಂಶವನ್ನು ಸಮಾಜಶಾಸ್ತ್ರಜ್ಞರು ಇನ್ನೂ ಬಲವಾಗಿ ಮಂಡಿಸಿದ್ದಾರೆ:

> ... ಒಬ್ಬ ವ್ಯಕ್ತಿಯು ಸಾಮಾಜಿಕ ಸ್ಥಾನಮಾನ, ಜೀವನಾವಕಾಶಗಳು ಮತ್ತು ಭೌತಿಕ ಸೌಕರ್ಯಗಳನ್ನು ಪಡೆಯುವ ನಿಟ್ಟಿನಲ್ಲಿಉದ್ಯೋಗವು ಅತ್ಯಂತ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ... ಒಂದೇ ರೀತಿಯ ಉದ್ಯೋಗದಲ್ಲಿರುವ ವ್ಯಕ್ತಿಗಳು ಸಾಮಾನ್ಯವಾಗಿ ಒಂದೇ ರೀತಿಯ ಸಾಮಾಜಿಕ ಅನುಕೂಲತೆಅಥವಾ ಅನನುಕೂಲತೆಗಳನ್ನು ಅನುಭವಿಸುತ್ತಾರೆ, ಅವರ ಜೀವನಶೈಲಿಯಲ್ಲಿ ಸಾಮ್ಯತೆ ಇರುತ್ತದೆ ಮತ್ತು ಜೀವನದಲ್ಲಿ ಅವರಿಗೆ ಸಾಮಾನ್ಯವಾಗಿ ಒಂದೇ ತೆರನಾದ ಅವಕಾಶಗಳು ದೊರೆಯುತ್ತವೆ... (Giddens2009: 443).

**ಔದ್ಯೋಗಿಕ ಚಲನಶೀಲತೆಯ ಅಧ್ಯಯನ**

ಈ ಅಂಶವನ್ನು ಅನೇಕ ಅರ್ಥಶಾಸ್ತ್ರಜ್ಞರು ಒಪ್ಪಿಕೊಂಡಿದ್ದಾರೆ. ಪ್ರಾಯೋಗಿಕ ಪುರಾವೆಗಳನ್ನು ಆಧರಿಸಿ, ಅರ್ಥಶಾಸ್ತ್ರ ಕ್ಷೇತ್ರದಲ್ಲಿ ಇತ್ತೀಚೆಗೆ ಪ್ರಕಟವಾಗಿರುವ ಸಾಹಿತ್ಯವು,ನಾವು ತೊಡಗಿಸಿಕೊಂಡಿರುವ ಉದ್ಯೋಗಗಳು, ನಮ್ಮ ನಂಬಿಕೆಗಳು, ಮೌಲ್ಯಗಳು ಮತ್ತು ಆದ್ಯತೆಗಳ ಮೇಲೆ ಪ್ರಭಾವ ಬೀರುವ ಮೂಲಕ ನಮ್ಮ ಆಯ್ಕೆಗಳನ್ನು ನಿರ್ದೇಶಿಸುತ್ತವೆ ಎಂದು ವಾದಿಸುತ್ತದೆ.[6]ಅಷ್ಟೇ ಅಲ್ಲದೆ, ಭಾರತದಂತಹ ದೇಶಗಳಲ್ಲಿ ಔದ್ಯೋಗಿಕ ಸಂರಚನೆಯಲ್ಲಿನ ಬದಲಾವಣೆಯು ಯಾವ ರೀತಿಯಾಗಿ ಬಡತನ ನಿರ್ಮೂಲನೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂಬುದರ ಮೇಲೆ ಬೆಳಕು ಚೆಲ್ಲುವಔದ್ಯೋಗಿಕ

ಚಲನಶೀಲತೆಯ ಅಧ್ಯಯನವು, ಕಡಮೆ-ಕೌಶಲ್ಯದ/ಕಡಮೆ ವೇತನದ ಉದ್ಯೋಗಗಳಿಂದ ಉತ್ತಮ ಉದ್ಯೋಗಗಳನ್ನು ಪಡೆಯಲು ಜನರಿಗೆ ಎದುರಾಗುವ ಅಡೆತಡೆಗಳನ್ನು ಅರ್ಥಮಾಡಿಕೊಳ್ಳಲು ಸರ್ಕಾರಿ ನೀತಿ ನಿರೂಪಕರಿಗೆ ಮತ್ತು ಯೋಜನಾಕಾರರಿಗೆ ಅಗತ್ಯವಾದ ಒಳನೋಟಗಳನ್ನು ನೀಡುತ್ತದೆ(ಚಕ್ರವರ್ತಿ 1987). ಔದ್ಯೋಗಿಕ ಚಲನಶೀಲತೆಯ ಅಧ್ಯಯನವು ಇತರ ರೀತಿಯ ಚಲನಶೀಲತೆ (ಉದಾಹರಣೆಗೆ, ಆದಾಯ, ವೇತನ, ಶಿಕ್ಷಣ)ಯಅಧ್ಯಯನಕ್ಕೆ ಪೂರಕವಾಗಿದೆ. ನಾವು ಕೆಳಗೆ ವಿವರಿಸುವಂತೆ, ನಾವು ಬಳಸುವ ದತ್ತಾಂಶಗಳು ಶೈಕ್ಷಣಿಕ ಮತ್ತು ಔದ್ಯೋಗಿಕ ಚಲನಶೀಲತೆಯನ್ನು ವಿಶ್ಲೇಷಿಸಲು ಸೂಕ್ತವಾಗಿವೆ ಮತ್ತು ಇದನ್ನು ಬಳಸಿಕೊಂಡು ಶೈಕ್ಷಣಿಕ ಚಲನಶೀಲತೆಯನ್ನು ಕೂಡ ಅಧ್ಯಯನ ಮಾಡಲಾಗಿದೆ. ಶೈಕ್ಷಣಿಕ ಚಲನಶೀಲತೆಯನ್ನು ಔದ್ಯೋಗಿಕ ಚಲನಶೀಲತೆಗೆ ಪೂರಕವಾಗಿ ಅಧ್ಯಯನ ಮಾಡುವುದು ಮುಖ್ಯ ಏಕೆಂದರೆ, ಶಿಕ್ಷಣವು ಭಾಗಶಃವಾಗಿಯಾದರೂ ಉದ್ಯೋಗಕ್ಕೆ ಒಂದು 'ದಾರಿ'ಯಾಗಿದೆ. ಆದರೆ ಆಡಳಿತ ನೀತಿಗಳು, ಕಾರ್ಮಿಕ ಮಾರುಕಟ್ಟೆಯ ಪರಿಸ್ಥಿತಿಗಳು, ಸಾಮಾಜಿಕ ನಿಯಮಗಳು, ತಾರತಮ್ಯ, ಮತ್ತುಔದ್ಯೋಗಿಕ ಅವಕಾಶಗಳ ಜಾಲಗಳೊಂದಿಗೆ ಇರುವ ಸಂಪರ್ಕಾವಕಾಶ, ಇತ್ಯಾದಿ ಅಂಶಗಳು ಸ್ವತಂತ್ರವಾಗಿ (ಅಂದರೆ, ಶೈಕ್ಷಣಿಕ ಅರ್ಹತೆಗಳ ಆಧಾರದ ಮೇಲೆ) ಉದ್ಯೋಗವನ್ನು ಪಡೆಯುವ ವ್ಯಕ್ತಿಯ ಸಾಮರ್ಥ್ಯದ ಮೇಲೆ ಪ್ರಭಾವ ಬೀರುವುದರಿಂದ ಔದ್ಯೋಗಿಕ ಚಲನಶೀಲತೆಯನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವುದು ಮುಖ್ಯವಾಗಿದೆ. ಮೇಲಿನ ಅಂಶಗಳೆಲ್ಲವನ್ನು ಗಮನಿಸಿದರೆ, ರೈತನ ಮಗ ರೈತನಾಗಿಯೇ ಮುಂದುವರಿಯುತ್ತಾನೆಯೇ ಎಂಬಂತಹ ಪ್ರಶ್ನೆಗಳಿಗೆ ಹೆಚ್ಚಿನ ಪ್ರಾಮುಖ್ಯವನ್ನು ಕೊಡುವುದು ಅಗತ್ಯ ಎಂದು ನಾವು ನಂಬುತ್ತೇವೆ.

ಔದ್ಯೋಗಿಕ ಚಲನಶೀಲತೆಯನ್ನು ಸಮಾಜಶಾಸ್ತ್ರಜ್ಞರು ವ್ಯಾಪಕವಾಗಿ ಅಧ್ಯಯನ ಮಾಡಿದ್ದಾರೆ (ಉದಾಹರಣೆಗೆ,Erikson and Goldthorpe 1992; Ganzeboom and Treiman1996; ವಿವರವಾದ ಸಮೀಕ್ಷೆಗಾಗಿ Björklund and Jantti2000 ನೋಡಿ).ಇವರು ಮಾರ್ಕ್ಸ್ ಮತ್ತು ವೆಬರ್‌ಪರಿಕಲ್ಪನೆಗಳನ್ನು, 'ಸಾಮಾಜಿಕ ವರ್ಗಗಳು'ಅಥವಾ ಸ್ಥಾನಮಾನ/ಪ್ರತಿಷ್ಠೆಯ' ಗುಂಪು(status/prestige groups)ಗಳನ್ನು ಪರಿಕಲ್ಪಿಸಲು ವ್ಯಕ್ತಿಯ ಉದ್ಯೋಗವನ್ನು ಮಾನದಂಡವಾಗಿ ಬಳಸಿಕೊಂಡಿದ್ದಾರೆ. ಔದ್ಯೋಗಿಕ ಚಲನಶೀಲತೆಯಅಧ್ಯಯನ ಎಷ್ಟರ ಮಟ್ಟಿಗೆ ನಡೆದಿದೆ ಎಂಬುದನ್ನು ತುಲನಾತ್ಮಕವಾಗಿ ನೋಡುವುದಾದರೆ ಇದಕ್ಕೆ ಅರ್ಥಶಾಸ್ತ್ರಜ್ಞರು ಕೊಟ್ಟ ಗಮನ ಕಡಮೆಯೆಂದೇ ಹೇಳಬಹುದು. ಅವರು ಅಧ್ಯಯನ ಕೈಗೊಂಡ ಸಂದರ್ಭದಲ್ಲಿ ಕೂಡ ನಿರ್ದಿಷ್ಟವಾಗಿ ಸೈದ್ಧಾಂತಿಕ ಆಧಾರಗಳಿರದ ವರ್ಗೀಕರಣಗಳನ್ನು ಬಳಸಿಕೊಂಡಿದ್ದಾರೆ (ಉದಾಹರಣೆಗೆ, 'ವೈಟ್-ಕಾಲರ್ ಕೆಲಸ', 'ಬ್ಲೂ ಕಾಲರ್ ಕೆಲಸ,'ಇತ್ಯಾದಿಯಾಗಿ ಮನೆ ಮನೆ ಸಮೀಕ್ಷೆಗಳ ಆಧಾರದಲ್ಲಿ ರೂಪಿಸಿದ ಔದ್ಯೋಗಿಕ ಸಂಕೇತಗಳ ಸಂಯೋಜನೆ(combinations of occupational codes)ಗಳನ್ನು ಬಳಸಿಕೊಂಡಿದ್ದಾರೆ). ಇದು Roemer (1982)ಮತ್ತು ಅವರ ಸಂಶೋಧನೆಗಳನ್ನು ಆಧಾರವಾಗಿಟ್ಟುಕೊಂಡು (ಸಾಲದ ಇತಿಮಿತಿಗಳಿಗೆ ಸಂಬಂಧಪಟ್ಟಂತೆ, Bowles 2006, ಅಧ್ಯಾಯ 10 ನೋಡಿ) ಇತರ ಅರ್ಥಶಾಸ್ತ್ರಜ್ಞರು ಮಾಡಿದ ಕೆಲಸ ಮತ್ತು ಯಾವ ರೀತಿಯಾಗಿ ಒಂದು ಸೂಕ್ಷ್ಮ ಆರ್ಥಿಕ ಮಾದರಿಯ ಸಂದರ್ಭದೊಳಗೆ ಅಂತರಿಕವಾಗಿಔದ್ಯೋಗಿಕ ಗುಂಪುಗಳು/ವರ್ಗಗಳು ಹುಟ್ಟಿಕೊಳ್ಳುತ್ತವೆ ಎಂಬುದನ್ನು ತೋರಿಸಿರುವುದರ ಹೊರತಾಗಿ ಕೂಡ. ಆಧುನಿಕ ಸಮಾಜಗಳನ್ನು ಅರ್ಥಮಾಡಿಕೊಳ್ಳುವಲ್ಲಿ ವರ್ಗವು (ವರ್ಗ ಎಂಬುದನ್ನು ನಾವು ಯಾವ ಎಲ್ಲ ರೀತಿಯಲ್ಲಿ ಕಲ್ಪಿಸಿಕೊಳ್ಳಬಹುದೋ ಆ ಎಲ್ಲ ರೀತಿಗಳಲ್ಲೂ) ಅಗಾಧವಾದ ವಿಶ್ಲೇಷಣಾತ್ಮಕ ಪ್ರಾಮುಖ್ಯವನ್ನು ಹೊಂದಿದೆ ಎಂಬ ಪುರಾವೆಗಳು ಇರುವುದರಿಂದ ನಾವು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ್ದೇವೆ.[7] ಹಾಗಾಗಿ ನಾವು ವ್ಯಕ್ತಿಗಳನ್ನು ಸಾಮಾಜಿಕ ವರ್ಗಗಳು ಅಥವಾ ಸ್ಥಾನಮಾನ ಆಧಾರಿತ ಗುಂಪುಗಳು ಎಂದು ವಿಶ್ಲೇಷಿಸಬಹುದಾದ ಗುಂಪುಗಳಾಗಿ ವಿಂಗಡಿಸಿದ್ದೇವೆ. ಈ ವರ್ಗಗಳನ್ನು ಬಳಸಿಕೊಂಡು, ಪರಿವರ್ತನೆಯ ಮಾತೃಕೆ (transition matrices)ಗಳನ್ನು ರಚಿಸಿ, ಚಲನಶೀಲತೆಯ ಪ್ರಮಾಣವನ್ನು ಲೆಕ್ಕ ಮಾಡುವ ಮೂಲಕ ನಾವು ಅಂತರ್ಪೀಳಿಗೆಗಳ ನಡುವಿನ ಚಲನಶೀಲತೆಯನ್ನು ಪರಿಶೀಲಿಸುತ್ತೇವೆ. ಭಾರತದಲ್ಲಿ ಅಂತರ್ಪೀಳಿಗೆಗಳ ನಡುವಿನ ಚಲನಶೀಲತೆಯನ್ನು ಕುರಿತು ಇತ್ತೀಚೆಗೆ ಕೆಲವು ರಾಷ್ಟ್ರವ್ಯಾಪಿ ಅಧ್ಯಯನಗಳಾಗಿವೆ ಮತ್ತು ನಮ್ಮ ಅಧ್ಯಯನ ಲೇಖನವು

ಅದರ ವ್ಯಾಪ್ತಿಗೆ[8] ಬಂದರೂ ಕೂಡ, ನಾವು ಬಳಸಿರುವ ದತ್ತಾಂಶಗಳು, ವಿಧಾನ ಮತ್ತು ಗಮನ ಕೇಂದ್ರೀಕರಿಸಿರುವ ಅಂಶಗಳು ತೀರ ವಿಭಿನ್ನವಾಗಿರುವುದರಿಂದ ನಮ್ಮ ಈ ಅಧ್ಯಯನ ಲೇಖನವನ್ನು ಈ ಅಧ್ಯಯನಗಳಿಗೆ ಪೂರಕವಾಗಿ ಪರಿಗಣಿಸಬಹುದು. ಈ ಅಧ್ಯಯನಗಳ ಪೈಕಿ ಎರಡು ಅಧ್ಯಯನಗಳಲ್ಲಿ ಸಂಶೋಧಕರು (Majumdar 2010; Hnatkovska et al 2011) ರಾಷ್ಟ್ರೀಯ ಮಾದರಿ ಸಮೀಕ್ಷೆ(National Sample Surveys)ಯ ದತ್ತಾಂಶಗಳನ್ನು ಬಳಸಿದ್ದಾರೆ. NSS (ಮತ್ತು ಅದರ ದತ್ತಾಂಶದ ಆಧಾರದ ಮೇಲೆ ನಡೆದ ಅಧ್ಯಯನಗಳು) ಕೆಲವು ನಿರ್ದಿಷ್ಟ ಪ್ರಯೋಜನಗಳನ್ನು ಹೊಂದಿದ್ದರೂ, ಅಂತರ್ಪೀಳಿಗೆಯ, ಅದರಲ್ಲೂ ನಿರ್ದಿಷ್ಟವಾಗಿ ಅಂತರ್ಪೀಳಿಗೆಯ ನಡುವಿನ ಔದ್ಯೋಗಿಕಚಲನಶೀಲತೆಯನ್ನು ಅಧ್ಯಯನ ಮಾಡಲು ಕೆಲವು ಇತಿಮಿತಿಗಳನ್ನು ಒಡ್ಡುತ್ತವೆ. ಈ ಮಿತಿಗಳನ್ನು ನಾವು ಮುಂದಿನ ವಿಭಾಗದಲ್ಲಿ ಚರ್ಚಿಸಲಿದ್ದೇವೆ.

ನಮ್ಮ ಅಧ್ಯಯನ ಲೇಖನವು Centre for the Study of Developing Societies (CSDS)ನಿಂದ ಪಡೆದುಕೊಂಡ ಮತದಾರರ ದತ್ತಾಂಶಗಳನ್ನು ಆಧರಿಸಿ, Kumar et al (2002a, 2002b) ಕೈಗೊಂಡ ಅಧ್ಯಯನಕ್ಕೆ ಕೂಡ ಪೂರಕವಾಗಿದೆ. ಭಾರತೀಯ ಮತದಾರರನ್ನು ಕುರಿತು ಯಾದೃಚ್ಛಿಕವಾಗಿ ಕುಮಾರ್ ಮತ್ತಿತರು ಸಂಗ್ರಹಿಸಿದ ಮಾಹಿತಿಯು ಸಾಕಷ್ಟು ಹಳೆಯದಾಗಿದೆ (1971 ಮತ್ತು 1996). ಅಷ್ಟೇ ಅಲ್ಲದೆ, ಸಂಗ್ರಹಿಸಿದ ಮಾಹಿತಿಯ ಮಾದರಿಯ ಗಾತ್ರಕೂಡ ತುಲನಾತ್ಮಕವಾಗಿ ಚಿಕ್ಕದಾಗಿದೆ ಮತ್ತು ವಿಶ್ಲೇಷಣೆಯನ್ನು ಒಂದು ಪ್ರಶ್ನೆಗಷ್ಟೆ, ಅಂದರೆ ಒಬ್ಬ ವ್ಯಕ್ತಿಯ ಮತ್ತು ಆತನ ತಂದೆಯ ಮುಖ್ಯ ಉದ್ಯೋಗಕ್ಕಷ್ಟೆ ಸೀಮಿತಗೊಳಿಸಲಾಗಿದೆ. ಇದು ಕೆಲವು ಮಿತಿಗಳಿಗೆ ಕಾರಣವಾಗುತ್ತದೆ (ಉದಾಹರಣೆಗೆ, ಉದ್ಯೋಗದ ವಿವರಣೆಯ ಕೊರತೆ; ಉದ್ಯೋಗ ಮತ್ತು ಔದ್ಯೋಗಿಕ ಸ್ಥಾನಮಾನದ ನಡುವಿನ ವ್ಯತ್ಯಾಸವನ್ನು ಗುರುತಿಸುವಲ್ಲಿ ತೊಡಕು). ಇದರ ಹೊರತಾಗಿ, ನಮ್ಮ ಅಧ್ಯಯನವು ಭಾರತದಲ್ಲಿ ಅಂತರ್ಪೀಳಿಗೆಗಳ ನಡುವೆ ಶಿಕ್ಷಣದ ಪ್ರಸರಣವನ್ನು ಪರೀಕ್ಷಿಸಿದ ಕೆಲವು ಅಧ್ಯಯನಗಳೊಂದಿಗೂ ತಾಳೆಯಾಗುತ್ತದೆ (Jalan and Murgai 2008; Maitra and Sharma 2009); ಅದರಲ್ಲೂ ಮುಖ್ಯವಾಗಿ ಮೈತ್ರಾ ಮತ್ತು ಶರ್ಮಾ (2009) ಅವರ ಅಧ್ಯಯನದೊಂದಿಗೆ. ಅವರು ಭಾರತದಲ್ಲಿ ಗ್ರಾಮೀಣ ಮತ್ತು ನಗರ ವಲಯಗಳಲ್ಲಿ ಮತ್ತು ಪುರುಷರು ಮತ್ತು ಮಹಿಳೆಯರ ನಡುವೆ ಪ್ರತ್ಯೇಕವಾಗಿ ಶಾಲಾ ಶಿಕ್ಷಣ ಮತ್ತು ಅಂತರ್ಪೀಳಿಗೆಗಳ ನಡುವೆ ಮಾನವ ಬಂಡವಾಳದ ಪ್ರಸರಣವನ್ನು ವಿಶ್ಲೇಷಿಸಲು IHDS (2005) ದತ್ತಾಂಶವನ್ನು ಬಳಸುತ್ತಾರೆ. ಚಲನಶೀಲತೆಗೆ ಸಂಬಂಧಿಸಿದಂತೆ ಒಟ್ಟಂದದಲ್ಲಿ ಅವರ ಅಧ್ಯಯನದಿಂದ ಮಿಶ್ರ ಫಲಿತಾಂಶಗಳು ಲಭ್ಯವಾಗುತ್ತವೆ.[9] ಅಷ್ಟೇ ಅಲ್ಲದೆ, ನಮ್ಮ ಅಧ್ಯಯನ ಲೇಖನವು ಭಾರತದಲ್ಲಿ ಕಂಡುಬರುವ ಅವಕಾಶದ ಅಸಮಾನತೆಯನ್ನು ಕುರಿತು ಬಹಳ ವಿರಳವಾಗಿ ಲಭ್ಯವಾಗುವ ಸಾಹಿತ್ಯಕ್ಕೆ ಸಂಬಂಧಿಸಿದೆ ಕೂಡ; (ಉದಾ, Asadullah and Yalonetzky 2012; Singh 2011);ಅದರಲ್ಲೂ ವಿಶೇಷವಾಗಿ ಸಿಂಘ್ (2011) ಅವರು ನಾವು ಮೇಲೆ ಉಲ್ಲೇಖಿಸಿದ ರೋಮರ್ (1998, 2006) ಅವರ ಚೌಕಟ್ಟನ್ನು ಬಳಸುತ್ತಾರೆ. ಅವರು ಭಾರತದಲ್ಲಿಅವಕಾಶಗಳ ಗಣನೀಯ ಅಸಮಾನತೆಯನ್ನು ದಾಖಲಿಸಲು IHDS 2005 ದತ್ತಾಂಶಗಳನ್ನು ಬಳಸುತ್ತಾರೆ -ಇಲ್ಲಿ ವಯಸ್ಕ ಪುರುಷರ ವೇತನ ಮತ್ತು ಬಳಕೆಯ ವೆಚ್ಚದಲ್ಲಿ ಇರುವ ಅಸಮಾನತೆಯ ದೊಡ್ಡ ಪಾಲನ್ನು ಪೋಷಕರ ಗುಣಲಕ್ಷಣಗಳ ಆಧಾರದ ಮೇಲೆ ವಿವರಿಸಲಾಗಿದೆ.

ನಮ್ಮ ವಿಶ್ಲೇಷಣೆಯ ವಿವರಗಳಿಗೆ ಹೋಗುವ ಮೊದಲು, ನಮ್ಮ ಮುಖ್ಯಸಂಶೋಧನೆಗಳನ್ನು ಪ್ರಸ್ತುತಪಡಿಸುವುದು ಉಚಿತವಾಗಿದೆ: ನಾವು ಪೀಳಿಗೆಯಿಂದ ಪೀಳಿಗೆಗೆ ಬಹಳಷ್ಟು ಮಟ್ಟಿಗೆ ಒಂದೇ ರೀತಿಯ ಉದ್ಯೋಗದ ಮುಂದುವರಿಕೆಯನ್ನು ಕಂಡುಕೊಂಡಿದ್ದೇವೆ - ಎಲ್ಲ ರೀತಿಯ ಔದ್ಯೋಗಿಕ ವರ್ಗಗಳಲ್ಲಿ ನೋಡುವುದಾದರೂ ತಂದೆಯ ಉದ್ಯೋಗದ ವರ್ಗದಲ್ಲೇ ಮಗ ಇರುವುದು ನಮಗೆ ಕಾಣಸಿಗುತ್ತದೆ(ಉದಾಹರಣೆಗೆ, ಈ ಸಾಧ್ಯತೆ ಕೃಷಿ ಕಾರ್ಮಿಕರಲ್ಲಿ ಸುಮಾರು ಅರ್ಧಕ್ಕಿಂತಲೂ ಹೆಚ್ಚಿದೆ). ಆದರೆ, ನಮಗೆ ಔದ್ಯೋಗಿಕ ವರ್ಗಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ - ಮಗ ತಂದೆ ಮಾಡುತ್ತಿದ್ದ ಕೆಲಸವನ್ನೇ ಮುಂದುವರಿಸುವ ಸಂಭವನೀಯತೆ ನಮಗೆ ಕಡಮೆ ಕೌಶಲ್ಯ/ಕಡಮೆ ಸಂಬಳದ ಉದ್ಯೋಗಗಳಲ್ಲಿ ಹೆಚ್ಚು ಕಂಡುಬರುತ್ತದೆ.ಹಾಗೆಯೇ ವ್ಯತ್ಯಾಸಗಳು ನಮಗೆ ವಿವಿಧ ಔದ್ಯೋಗಿಕ ಕ್ಷೇತ್ರಗಳಲ್ಲಿಯೂ ಕಂಡುಬರುತ್ತವೆ. ನಿರೀಕ್ಷೆಯಂತೆ, ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿ ಚಲನಶೀಲತೆ ಹೆಚ್ಚಿದೆ. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ

ಪಂಗಡಗಳು (SC/ST) ಮತ್ತು SC/STಗಳಲ್ಲದವರ ನಡುವಿನ ಚಲನಶೀಲತೆಯಹೋಲಿಕೆ ಮಾಡುವಾಗ ನಮಗೆ ಅಸ್ಪಷ್ಟ ಫಲಿತಾಂಶಗಳು ದೊರೆಯುತ್ತವೆ. ಆದಾಗ್ಯೂ, ನಾವು SC/ST ಸಮುದಾಯಗಳಲ್ಲಿ ಗಣನೀಯ ಪ್ರಮಾಣದ ಕೆಳಮುಖ ಚಲನೆಯನ್ನು ಕಾಣುತ್ತೇವೆ ಮತ್ತು ಇದು SC/STಗಳೇತರ ಸಮುದಾಯಗಳಲ್ಲಿ ಕಾಣಸಿಗುವ ಪ್ರಮಾಣಕ್ಕಿಂತ ಹೆಚ್ಚಾಗಿದೆ ಎಂಬುದು ದಾಖಲೆಗೆ ಸಿಗುತ್ತದೆ. ಹಾಗೆಯೇ SC/STಗಳಲ್ಲಿ ಕಡಮೆ-ಕುಶಲತೆ /ಕಡಮೆ ವೇತನದ ಉದ್ಯೋಗಗಳಲ್ಲಿ ಹೆಚ್ಚು ಕಾಲ ಮುಂದುವರಿಯುವುದನ್ನು (SC/ST ಅಲ್ಲದವರಿಗೆ ಹೋಲಿಸಿದರೆ) ಗಮನಿಸುತ್ತೇವೆ. ಒಟ್ಟಾರೆಯಾಗಿ, ನಾವು ನಮ್ಮ ಅಧ್ಯಯನದಿಂದ ಏನು ತೀರ್ಮಾನಕ್ಕೆ ಬಂದೆವು ಎಂಬುದನ್ನು ಹೇಳಬೇಕಾದರೆ, ಅದಕ್ಕೆ ಒಂದು ಜನಪ್ರಿಯ ಜರ್ಮನ್ ಗಾದೆಮಾತನ್ನು[10] ಬಳಸಿ, 'ಸೇಬಿನ ಹಣ್ಣು ಸೇಬಿನ ಮರದ ಬುಡದಲ್ಲಿಯೇ ಬೀಳುತ್ತದೆ' ಅಂದರೆ,'ತಂದೆಯಂತೆ ಮಗ' ಅಥವಾ 'ಅಪ್ಪ ನೆಟ್ಟ ಆಲಕ್ಕೆ ಜೋತು ಬೀಳುವುದು,' ಎಂಬರ್ಥದಲ್ಲಿ ಹೇಳಬಹುದಾಗಿದೆ. ವಿಶಾಲವಾಗಿ ಹೇಳುವುದಾದರೆ, ನಮ್ಮ ಫಲಿತಾಂಶಗಳು ತೋರಿಸುವಂತೆ, ಸಾಮಾಜಿಕ ವರ್ಗಗಳಿಗೆ ಸಂಬಂಧಿಸಿದ ಸ್ಥಾನಮಾನಗಳಲ್ಲಿ, ಅದರಲ್ಲೂ ವಿಶೇಷವಾಗಿ ಕೆಳವರ್ಗದ ಸಮುದಾಯಗಳಲ್ಲಿ ಗಣನೀಯ ಪ್ರಮಾಣದ ಚಲನಶೀಲತೆಯ ಕೊರತೆಇದೆ ಎಂದು ನಮಗನ್ನಿಸುತ್ತದೆ. ಒಟ್ಟಂದದಲ್ಲಿನಮ್ಮ ಅಧ್ಯಯನವನ್ನು ವಿಶ್ಲೇಷಿಸಿ ಹೇಳುವುದಾದರೆ, ಭಾರತದಲ್ಲಿ ಬಹಳಷ್ಟು ಪ್ರಮಾಣದಲ್ಲಿ ಅವಕಾಶಗಳ ಅಸಮಾನತೆ ಇದೆ. IHDS ಸಮೀಕ್ಷೆಯಲ್ಲಿ ಶ್ರೀಮಂತರ ಪ್ರಾತಿನಿಧ್ಯ ಕಡಮೆ ಇರುವ ಸಾಧ್ಯತೆ ಇರುವುದರಿಂದ (ಇದು NSS ಸೇರಿದಂತೆ ಇತರ ಸಮೀಕ್ಷೆಗಳಲ್ಲೂ ಕೂಡ ಹೀಗೇ ಇರುತ್ತದೆ) ಮತ್ತು ಶ್ರೀಮಂತರ ಮಕ್ಕಳು ಸಾಕಷ್ಟು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವಂತೆ ತೋರುತ್ತಿರುವುದರಿಂದ (ಕನಿಷ್ಠ ಮಾಧ್ಯಮ ವರದಿಗಳ ಪ್ರಕಾರ), ಅವಕಾಶಗಳ ಅಸಮಾನತೆ ನಾವು ದಾಖಲಿಸಿದ್ದಕ್ಕಿಂತ ಹೆಚ್ಚಿಗೆ ಇದೆ ಎಂದು ನಾವು ಹೇಳಬಹುದು.

ಈ ಅಧ್ಯಯನ ಲೇಖನದ ಉಳಿದ ಭಾಗವನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಮುಂದಿನ ವಿಭಾಗವು ಸಾಂದರ್ಭಿಕ ಹಿನ್ನೆಲೆ, ಅಂತರ್ಪೀಳಿಗೆಯ ನಡುವಿನ ಔದ್ಯೋಗಿಕ ಚಲನಶೀಲತೆಯ ಅಧ್ಯಯನಕ್ಕೆ ಸಂಬಂಧಿಸಿದ ಕೆಲವು ಅಂಶಗಳು ಮತ್ತು IHDS ದತ್ತಾಂಶಗಳ ವಿವರಣೆಯನ್ನು ಪ್ರಸ್ತುತಪಡಿಸುತ್ತದೆ. ಮೂರನೇ ವಿಭಾಗವು ನಮ್ಮ ವಿಶ್ಲೇಷಣೆ ಮತ್ತು ಫಲಿತಾಂಶಗಳನ್ನು ಪ್ರಸ್ತುತಪಡಿಸುತ್ತದೆ ಮತ್ತು ಅಂತಿಮ ವಿಭಾಗವು ನಮ್ಮ ಸಂಶೋಧನೆಗಳ ಚರ್ಚೆಯೊಂದಿಗೆ ಮುಕ್ತಾಯಗೊಳ್ಳುತ್ತದೆ.

## 2. ಸಂದರ್ಭ, ಸಮಸ್ಯೆಗಳು ಮತ್ತು ದತ್ತಾಂಶಗಳು

ಮಕ್ಕಳು ತಮ್ಮ ಪೋಷಕರಿಗಿಂತ ಭಿನ್ನವಾದ ಅವಕಾಶಗಳನ್ನು ಹೇಗೆ ಪಡೆಯುತ್ತಾರೆ ಎಂಬುದಕ್ಕೆ ಮನೆಯ ಒಳಗಿನ (ಉದಾಹರಣೆಗೆ, ಪೋಷಕರ ಹಿನ್ನೆಲೆ, ಕುಟುಂಬದ ಗಾತ್ರ, ಕುಟುಂಬದ ಸಂಯೋಜನೆ, ಜಾತಿ, ಇತ್ಯಾದಿ) ಮತ್ತು ಮನೆಯ ಹೊರಗಿನ (ಉದಾಹರಣೆಗೆ, ಶೈಕ್ಷಣಿಕ ಅವಕಾಶಗಳ ಲಭ್ಯತೆ, ಸಾಲ ಸೌಲಭ್ಯ ಒದಗಿಸುವ ಮಾರುಕಟ್ಟೆ ವ್ಯವಸ್ಥೆ, ಕಾರ್ಮಿಕ ಮಾರುಕಟ್ಟೆ ಪರಿಸ್ಥಿತಿಗಳು, ತಾರತಮ್ಯ, ಇತ್ಯಾದಿ)ಅಂಶಗಳುಕಾರಣವಾಗುತ್ತವೆ. ಆದ್ದರಿಂದ, ಅಂತರ್ಪೀಳಿಗೆ ನಡುವಿನ ಚಲನಶೀಲತೆಯನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಲು ವಿಶೇಷವಾಗಿಮತ್ತು ಎಚ್ಚರಿಕೆಯಿಂದ ವಿನ್ಯಾಸಗೊಳಿಸಿದ ಸಮೀಕ್ಷೆಗಳ ಅಗತ್ಯವಿದೆ. ಭಾರತದಲ್ಲಿ ಗಣನೀಯವಾದ ಔದ್ಯೋಗಿಕ, ಜನಸಂಖ್ಯಾ, ಪ್ರಾದೇಶಿಕ ಮತ್ತು ಸಾಂಸ್ಕೃತಿಕ ವೈವಿಧ್ಯ ಇರುವುದರಿಂದ ಇದು ನಮಗೆ ನಿರ್ದಿಷ್ಟವಾದ ಸವಾಲುಗಳನ್ನು ಒಡ್ಡುತ್ತದೆ. ಬಡತನ, ಅಸಮಾನತೆ, ಉದ್ಯೋಗ/ನಿರುದ್ಯೋಗ ಮತ್ತು ಜೀವನ ಪರಿಸ್ಥಿತಿಗಳಿಗೆ (ಉದಾಹರಣೆಗೆ, ವಸತಿ) ಸಂಬಂಧಿಸಿದ ಸಮಸ್ಯೆಗಳನ್ನು ಕುರಿತು ಭಾರತದಲ್ಲಿ ಕೆಲಸ ಮಾಡುವ ಸಂಶೋಧಕರು National Sample Survey Officeನಡೆಸುವ ಸಮೀಕ್ಷೆಗಳನ್ನು ಹೆಚ್ಚು ವ್ಯಾಪಕವಾಗಿ ಬಳಸುತ್ತಾರೆ. ಅದರಲ್ಲಿಯೂ ಮಾಸಿಕ ಬಳಕೆಯ ವೆಚ್ಚ ಮತ್ತು ಉದ್ಯೋಗ/ನಿರುದ್ಯೋಗ ಕುರಿತಾಗಿನ ಸಮೀಕ್ಷೆಗಳು ವಿಶೇಷ

ಪ್ರಾಮುಖ್ಯವನ್ನು ಪಡೆದಿದ್ದು, ಅವುಗಳನ್ನು ಬಳಸುವಲ್ಲಿ ಕೆಲವು ಪ್ರಯೋಜನಗಳಿವೆ. ಈ ಸಮೀಕ್ಷೆಗಳ ಗಾತ್ರ ದೊಡ್ಡದು ಮತ್ತು ಇವು ರಾಷ್ಟ್ರೀಯ ಪ್ರಾತಿನಿಧಿಕ ಸಮೀಕ್ಷೆಗಳಾಗಿದ್ದು, ಎಲ್ಲರಿಗೂ ಚಿರಪರಿಚಿತವಾಗಿವೆ. ಇವು ಪ್ರಾತಿನಿಧಿಕ - ನಮೂನೆಯ ಸಮೀಕ್ಷೆಗಳಾಗಿದ್ದರೂ, ಅವುಗಳನ್ನು ನಿಯಮಿತವಾಗಿ ನಡೆಸಲಾಗುವುದರಿಂದ, ಕಾಲಾಂತರದಲ್ಲಿ ಅವುಗಳ ಫಲಿತಾಂಶಗಳನ್ನು ಹೋಲಿಸುವುದರಿಂದ ನಮಗೆ ಒಂದು ಮಟ್ಟಿನ ಸ್ಪಷ್ಟ ಚಿತ್ರಣ ದೊರಕುವ ಸಾಧ್ಯತೆ ಇರುತ್ತದೆ.[11] ಆದರೆ, ಇವುಗಳನ್ನು ನಿರ್ದಿಷ್ಟವಾಗಿ ಅಂತರ್ಪೀಳಿಗೆಯ ಚಲನಶೀಲತೆಯ ಅಧ್ಯಯನಕ್ಕಾಗಿ ವಿನ್ಯಾಸಗೊಳಿಸಿಲ್ಲವಾದ ಕಾರಣ, ಈ ಉದ್ದೇಶಕ್ಕಾಗಿ ಬಳಸುವಾಗ ನಮಗೆ ಕೆಲವು ಇತಿಮಿತಿಗಳು ಎದುರಾಗುತ್ತವೆ.

ಮೊದಲನೆಯದಾಗಿ, NSSನಲ್ಲಿ, ನಮಗೆ ಒಬ್ಬ ವ್ಯಕ್ತಿಯನ್ನು ಕುರಿತು ಮತ್ತು ಆ ವ್ಯಕ್ತಿಗೆ ಅವರು ಇರುವ ಮನೆಯ ಮುಖ್ಯಸ್ಥರೊಂದಿಗಿನಸಂಬಂಧದ ಕುರಿತು ಮಾಹಿತಿ ಲಭ್ಯವಾಗುತ್ತದೆ. ಈ ಎರಡು ಮಾಹಿತಿಯ ತುಣುಕುಗಳನ್ನು ಬಳಸಿಕೊಂಡು, ನಾವು ವ್ಯಕ್ತಿಯ ಉದ್ಯೋಗವನ್ನು ಅವನ/ಅವಳ ಪೋಷಕರ ಉದ್ಯೋಗದೊಂದಿಗೆ ಹೋಲಿಸಲು ಪ್ರಯತ್ನಿಸಬಹುದು. ಆದರೆ ಒಬ್ಬ ವ್ಯಕ್ತಿ ಮತ್ತು ಅವನ/ಅವಳ ಪೋಷಕರು (ಗಳು) ಒಂದೇ ಮನೆಯಲ್ಲಿ ವಾಸಿಸುತ್ತಿದ್ದರೆ ಮಾತ್ರ ನಮಗೆ ಇದನ್ನು ಮಾಡಲು ಸಾಧ್ಯವಾಗುತ್ತದೆ. ಇದರಿಂದಾಗಿ ಏಕ-ಸದಸ್ಯ ಕುಟುಂಬಗಳು, ಎರಡು ಸದಸ್ಯರ ಕುಟುಂಬಗಳು (ಗಂಡ ಮತ್ತು ಹೆಂಡತಿ) ಮತ್ತು ವಿಭಕ್ತ ಕುಟುಂಬಗಳು (ಗಂಡ, ಹೆಂಡತಿ ಮತ್ತು ಚಿಕ್ಕ ಮಕ್ಕಳು) ಲೆಕ್ಕಕ್ಕೆ ಸಿಗದೆ, ವಿಶ್ಲೇಷಣೆಯ ವ್ಯಾಪ್ತಿಯಿಂದ ಹೊರಗುಳಿಯುತ್ತಾರೆ. ಇದಲ್ಲದೆ, ಮನೆಯ ಮುಖ್ಯಸ್ಥರು (ಅವರ ಮಕ್ಕಳ ತರಹ),ಅವರಪೋಷಕರು ಇರುವ ಮನೆಯಲ್ಲೇ ವಾಸಿಸುತ್ತಿದ್ದರೆ ಮಾತ್ರ ವಿಶ್ಲೇಷಣೆಯ ವ್ಯಾಪ್ತಿಗೆ ಬರುತ್ತಾರೆ ಮತ್ತು ಈ ಸಮೀಕ್ಷೆಗಳಲ್ಲಿ ಪೋಷಕರನ್ನು ಮನೆಯ ಮುಖ್ಯಸ್ಥ ಎಂದು ನಿರೂಪಿಸಲಾಗಿಲ್ಲದಿರುವುದು ಇನ್ನೊಂದು ಕೊರತೆಯಾಗಿದೆ. ಈ ತೆರನಾದ ಮಾದರಿಗಳು ನಮಗೆ ಕೆಲವು ಭೌಗೋಳಿಕ ಪ್ರದೇಶಗಳಲ್ಲಿ ಅಥವಾ ಸಾಮಾಜಿಕ-ಆರ್ಥಿಕ ಗುಂಪುಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ (ಉದಾಹರಣೆಗೆ, ನಗರ ಮಧ್ಯಮ ವರ್ಗಗಳು ಮತ್ತು ವಿಭಕ್ತ ಕುಟುಂಬಗಳಲ್ಲಿ ವಾಸಿಸುವ ಶ್ರೀಮಂತರು), ಅದರೆ ಸಮೀಕ್ಷೆಯಲ್ಲಿ ಅವರ ಪ್ರಾತಿನಿಧ್ಯವಿರದೆ, ಅವರು ವ್ಯವಸ್ಥಿತವಾಗಿ ವಿಶ್ಲೇಷಣೆಯ ವ್ಯಾಪ್ತಿಯ ಆಚೆಗುಳಿಯುತ್ತಾರೆ. ಹಾಗೆಯೇ, ಇಂತಹ ವರ್ಗಗಳು ಕಡಮೆ ಇರುವ ಪ್ರದೇಶಗಳು ಅಥವಾ ಗುಂಪುಗಳು ವ್ಯವಸ್ಥಿತವಾಗಿ ಅತಿಯಾಗಿ ಪ್ರತಿನಿಧಿಸಲ್ಪಡುತ್ತವೆ. ಎರಡನೆಯದಾಗಿ, ಅವಕಾಶದ ಅಸಮಾನತೆ (ಇದು ಅಂತರ್ಪೀಳಿಗೆಯ ಚಲನಶೀಲತೆಯನ್ನು ಅಧ್ಯಯನ ಮಾಡಲು ಇರುವ ಪ್ರಮುಖ ಪ್ರೇರಣೆ)ಯ ದೃಷ್ಟಿಕೋನದಿಂದ, ಅದರಲ್ಲೂ ವಿಶೇಷವಾಗಿ ಚಲನಶೀಲತೆಗೆ ಸಂಬಂಧಿಸಿದಂತೆ ಹಿಂದಿನ ಪೀಳಿಗೆಯ ಸಾಮಾನ್ಯ/ಜೀವಮಾನದ ಉದ್ಯೋಗಹೆಚ್ಚು ಪ್ರಸ್ತುತವಾಗಿದೆ.ಆದರೆ NSSನಲ್ಲಿ ನಮಗೆ ಲಭ್ಯವಾಗುವುದು ಹಿಂದಿನ ತಲೆಮಾರಿನವರು ಈಗ ಪ್ರಸ್ತುತ ತೊಡಗಿಸಿಕೊಂಡಿರುವ ಉದ್ಯೋಗದ ಮಾಹಿತಿಯಷ್ಟೆ. ಪ್ರಸ್ತುತ ಉದ್ಯೋಗವು (ವಲಸೆ, ತಾತ್ಕಾಲಿಕ ಆಘಾತಗಳು, ಬಡ್ತಿಗಳು, ನಿವೃತ್ತಿ, ಇತ್ಯಾದಿಗಳ ಕಾರಣದಿಂದಾಗಿ) ಭಿನ್ನವಾಗಿದ್ದ ಪಕ್ಷದಲ್ಲಿ ಇದು ತೊಡಕಾಗುತ್ತದೆ. ಇದೇ ಕಾರಣಕ್ಕಾಗಿ ಅಂತರ್ಪೀಳಿಗೆಯ ನಡುವಿನ ಚಲನಶೀಲತೆಯನ್ನು ಅಧ್ಯಯನ ಮಾಡಲು ಎಚ್ಚರಿಕೆಯಿಂದ ವಿನ್ಯಾಸಗೊಳಿಸಲಾದ ಸಮೀಕ್ಷೆಗಳು ಪೋಷಕರ ಉದ್ಯೋಗ ಇತಿಹಾಸವನ್ನು ಕುರಿತದತ್ತಾಂಶಗಳನ್ನು ಸಂಗ್ರಹಿಸುವ ಪ್ರಯತ್ನ ಮಾಡುತ್ತವೆ (ಉದಾಹರಣೆಗಳಿಗಾಗಿ Björklund and Jantt (2000) ನೋಡಿ).

ಈ ಮೇಲಿನ ಅಂಶಗಳನ್ನು ಪರಿಗಣಿಸುವಾಗ ಯಾವ ರೀತಿಯಾಗಿ ಪೂರ್ವಗ್ರಹ ಒಳನುಸುಳುತ್ತದೆ ಎನ್ನುವುದನ್ನು ಕುರಿತು ನಿಚ್ಚಳವಾಗಿ ತಿಳಿಯದೆ ಹೋದರೂ, ಅದರ ಬಗ್ಗೆ ಎಚ್ಚರದಿಂದಿರುವುದು ಮುಖ್ಯವೆಂದು ನಾವು ನಂಬಿದ್ದೇವೆ. ಇದನ್ನು ಗಮನದಲ್ಲಿಟ್ಟುಕೊಳ್ಳುವುದು ನಾವುNSSನ ಹಲವು ಸುತ್ತುಗಳ ದತ್ತಾಂಶಗಳನ್ನು ಬಳಸುತ್ತಿದ್ದರೆ ಇನ್ನೂ ಮುಖ್ಯವಾಗುತ್ತದೆ, ಏಕೆಂದರೆ ಈ ಪೂರ್ವಗ್ರಹವು ಕಾಲಾಂತರದಲ್ಲಿ ಹೆಚ್ಚುತ್ತಿದೆಯೇ, ಕಡಮೆಯಾಗುತ್ತಿದೆಯೇ ಅಥವಾ ಸ್ಥಿರವಾಗಿದೆಯೇ ಎಂಬುದು ನಮಗೆ ಗೊತ್ತಾಗುವುದು ಕಷ್ಟ. ಜನಸಂಖ್ಯೆಯನ್ನು ಕುರಿತಂತೆ ತೀರ್ಮಾನಗಳನ್ನು ಕೈಗೊಳ್ಳಲು ವ್ಯಾಪಕವಾಗಿ ಬಳಸಲಾಗುವ ಜನಗಣತಿಯ ದತ್ತಾಂಶಗಳು ಈ ಮೇಲಿನ ಅಂಶಗಳನ್ನು ಪರಿಗಣಿಸುವುದು ಮುಖ್ಯಎಂಬುದನ್ನು ಸೂಚಿಸುತ್ತವೆ: (ಎ) ಭಾರತದಲ್ಲಿಕುಟುಂಬಗಳ ಗಾತ್ರ 2001ರಲ್ಲಿ ಗಣನೀಯ ಪ್ರಮಾಣದಲ್ಲಿ (ಸುಮಾರು 43%)ಸಣ್ಣದಾಗಿತ್ತು (ನಾಲ್ಕು ಸದಸ್ಯರು

ಅಥವಾ ಕಡಮೆ) ಮತ್ತು ಇದು1981ಕ್ಕಿಂತ (ಸುಮಾರು 40%)ಹೆಚ್ಚಾಗಿದೆ.[12] (ಬಿ) 1981ರಿಂದ 2001ರ ಅವಧಿಯಲ್ಲಿ ಸರಾಸರಿ ಮನೆಯ ಸದಸ್ಯರ ಸಂಖ್ಯೆ ಕಡಮೆಯಾಗಿದೆ. ಇದು ಗ್ರಾಮೀಣ ಪ್ರದೇಶಗಳಲ್ಲಿ (5.6 ರಿಂದ 5.4)ಕ್ಕೆ ಇಳಿದರೆ, ನಗರ ಪ್ರದೇಶಗಳಲ್ಲಿ (5.4 ರಿಂದ 5.1) ಮತ್ತು ಅಖಿಲ ಭಾರತ ಮಟ್ಟದಲ್ಲಿ (5.5.ರಿಂದ 5.3)ಕ್ಕೆ ಇಳಿದಿದೆ. ಈ ವಿದ್ಯಾಮಾನವನ್ನು ಹಲವಾರು ವೀಕ್ಷಕರು (ಉದಾಹರಣೆಗೆ, ಜನಗಣತಿ 2001a), ಕುಟುಂಬಗಳು, ವಿಶೇಷವಾಗಿ ನಗರ ಪ್ರದೇಶಗಳಲ್ಲಿ, ಹೆಚ್ಚುಹೆಚ್ಚಾಗಿ ವಿಭಕ್ತೀಕರಣದ ಕಡೆಗೆ ಸಾಗುತ್ತಿರುವ ಸಂಕೇತವಾಗಿ ನೋಡಿದ್ದಾರೆ, (ಸಿ) ಕುಟುಂಬದ ಗಾತ್ರ ವಿತರಣೆ ಮತ್ತು ಸರಾಸರಿ ಮನೆಯ ಗಾತ್ರಕ್ಕೆ ಸಂಬಂಧಿಸಿದ್ದಂತೆ ಸಾಮಾಜಿಕ-ಆರ್ಥಿಕ ಗುಂಪುಗಳು ಮತ್ತು ಭೌಗೋಳಿಕ ಪ್ರದೇಶಗಳ ನಡುವೆ ವ್ಯತ್ಯಾಸಗಳಿವೆ. ಉದಾಹರಣೆಗೆ, ಭಾರತದಲ್ಲಿ ಅಖಿಲ ಭಾರತ ಮಟ್ಟದಲ್ಲಿ SC ಮತ್ತು ST ಸಮುದಾಯಗಳಲ್ಲಿ, ಮತ್ತು ಒಟ್ಟು ಜನಸಂಖ್ಯೆಯಲ್ಲಿ ಎರಡು ಸದಸ್ಯರು ಇರುವ ಕುಟುಂಬಗಳ ಶೇಕಡಾವಾರು ಪ್ರಮಾಣ ಕ್ರಮವಾಗಿ 8.2%, 8.8% ಮತ್ತು 9.1% (ಜನಗಣತಿ 2001a); ರಾಜ್ಯಗಳ ನಡುವಿನ ವ್ಯತ್ಯಾಸಗಳಿಗಾಗಿ, ಜನಗಣತಿ (2001b) ಅನ್ನು ನೋಡಿ, ಮತ್ತು SC, ST ಮತ್ತು ಇಡೀ ಜನಸಂಖ್ಯೆಯ ಸರಾಸರಿ ಮನೆಯ ಗಾತ್ರಗಳಿಗಾಗಿ, ಜನಗಣತಿ (2001a) ನೋಡಿ.

ನಾವು ಬಳಸುತ್ತಿರುವ ದತ್ತಾಂಶಗಳಿಗೆ ತನ್ನದೇ ಆದ ಮಿತಿಗಳಿದ್ದರೂ, ಅಂತರ್ಪೀಳಿಗೆಯ ನಡುವಿನ ಚಲನಶೀಲತೆಯನ್ನು ಅಧ್ಯಯನ ಮಾಡುವಲ್ಲಿ ಅದು ಕೆಲವು ವಿಶಿಷ್ಟ ಅನುಕೂಲತೆಗಳನ್ನು ಒದಗಿಸುತ್ತದೆ. ಅದಕ್ಕಾಗಿಯೇ ನಾವು ನಮ್ಮ ಅಧ್ಯಯನವನ್ನು ಇತರ ದತ್ತಾಂಶಮೂಲಗಳನ್ನು (NSSಒಳಗೊಂಡಂತೆ) ಆಧರಿಸಿ ಕೈಗೊಂಡ ಇತರ ಅಧ್ಯಯನಗಳಿಗೆ ಪೂರಕವಾಗಿದೆ ಎಂದು ಹೇಳುತ್ತಿದ್ದೇವೆ.ನಾವು ಇನ್ನು ಎರಡು ಹೆಚ್ಚಿನ ಅಂಶಗಳತ್ತ ನಿಮ್ಮ ಗಮನ ಸೆಳೆಯಲು ಇಚ್ಛಿಸುತ್ತೇವೆ: ಮೊದಲನೆಯದಾಗಿ, ದತ್ತಾಂಶದ ವಿಭಿನ್ನ ಮೂಲಗಳಿಗೆ ತಮ್ಮದೇ ಆದ ಸಂಗ್ರಹ/ವಿಶ್ಲೇಷಣಾ ವಿಧಾನಗಳು, ಉಪಯೋಗಗಳು ಮತ್ತು ಮಿತಿಗಳು ಇರುವುದರಿಂದ, ಒಂದೇ ವಿಷಯವನ್ನುಈ ವಿಭಿನ್ನ ದತ್ತಾಂಶ ಮೂಲಗಳನ್ನು ಆಧರಿಸಿ ಪರೀಕ್ಷಿಸುವುದು, ವಿಶ್ಲೇಷಿಸುವುದು ಮತ್ತು ಅವುಗಳ ಆಧಾರದ ಮೇಲೆ ಮಾಡಿದ ತೀರ್ಮಾನಗಳನ್ನು ಹೋಲಿಸುವುದು ಮುಖ್ಯವಾಗಿದೆ. ಎರಡನೆಯದಾಗಿ, ಮತ್ತು ಹೆಚ್ಚು ಮುಖ್ಯವಾಗಿ, ಚಲನಶೀಲತೆಯ ಅಧ್ಯಯನವು (ಅಂತರ-ಪೀಳಿಗೆ ಮತ್ತು ಪರಸ್ಪರ ಎರಡೂ) ಒಂದು ಗಂಭೀರವಾದ ಮತ್ತು ಪ್ರಮುಖವಾದ ಅಧ್ಯಯನವಾಗಿದ್ದು, ಅದಕ್ಕೆ ವಿಶೇಷವಾಗಿ ವಿನ್ಯಾಸಗೊಳಿಸಿದ ಮತ್ತು ಎಚ್ಚರಿಕೆಯಿಂದ ನಿರ್ವಹಿಸಲ್ಪಟ್ಟ ಸಮೀಕ್ಷೆಗಳ ಅಗತ್ಯವಿದೆ. ಆದರೆ ಇಂತಹ ಸಮೀಕ್ಷೆಗಳ ಲಭ್ಯತೆಯ ಕೊರತೆಯಿಂದ ಭಾರತದ ಸ್ಥಿತಿಗತಿಗಳನ್ನು ಕುರಿತು ಕೆಲಸ ಮಾಡುವ ಸಂಶೋಧಕರು ತೀವ್ರವಾಗಿ ಹಿನ್ನಡೆ ಅನುಭವಿಸುತ್ತಾರೆ. ನಮಗೆ ತಿಳಿದಮಟ್ಟಿಗೆ, ಈ ಉದ್ದೇಶಕ್ಕೆ ಸೂಕ್ತವಾಗುವಂತಹ ಯಾವುದೇ ದೊಡ್ಡ ಮತ್ತು ರಾಷ್ಟ್ರೀಯ (ಗ್ರಾಮೀಣ ಮತ್ತು ನಗರ ಎರಡೂ ಸೇರಿದಂತೆ) ಪ್ರಾತಿನಿಧಿಕ ಸಮೀಕ್ಷೆಸಾರ್ವಜನಿಕವಾಗಿ ಲಭ್ಯವಿಲ್ಲ.ಈ ನಿಟ್ಟಿನಲ್ಲಿಹಿಂದೆ ನಡೆದಿರುವ ಅಧ್ಯಯನಗಳ ಜೊತೆಗೆ ನಮ್ಮ ಅಧ್ಯಯನವು ಕೂಡ ಮುಂದಕ್ಕೆಇಂತಹ ದತ್ತಾಂಶಗಳ ಸಂಗ್ರಹಕ್ಕೆ ಪ್ರೇರಣೆ ನೀಡುವುದು ಎಂಬುದು ನಮ್ಮ ಆಶಯ. ಈ ವಿಷಯವನ್ನು ಕುರಿತು ವಿಶೇಷ ಸಮೀಕ್ಷೆಗಳನ್ನು ನಡೆಸಲು ಅಥವಾ ಅವರ ನಿಯಮಿತ ಸಮೀಕ್ಷೆಗಳಲ್ಲಿ ಚಲನಶೀಲತೆಗೆ ಸಂಬಂಧಿಸಿದ ಕನಿಷ್ಠ ಒಂದು ಮಾಡ್ಯೂಲ್ ಪರಿಚಯಿಸಲು ನಾವು ಕೇಂದ್ರೀಯ ಅಂಕಿಅಂಶ ಕಚೇರಿ (Central Statistical Office)ಗೆ ಈ ಮೂಲಕ ಮನವಿ ಮಾಡಿಕೊಳ್ಳುತ್ತೇವೆ (ನಮ್ಮ ಅಭಿಪ್ರಾಯದಲ್ಲಿ, ಈ ಸಂಸ್ಥೆ ಭಾರತದ ಸಂದರ್ಭಕ್ಕೆ ತಕ್ಕಂತೆ ಸಮೀಕ್ಷೆಗಳನ್ನು ಕೈಗೊಳ್ಳಲು ಅತ್ಯುತ್ತಮವಾಗಿ ಸಜ್ಜುಗೊಂಡಿರುವ ಮತ್ತು ಹೆಚ್ಚು ಮನ್ನಣೆಯನ್ನು ಹೊಂದಿರುವ ಸಂಸ್ಥೆಯಾಗಿದೆ).

ನಾವೀಗ ನಾವು ಬಳಸುತ್ತಿರುವ ದತ್ತಾಂಶಗಳನ್ನು ವಿವರಿಸುವ ಪ್ರಯತ್ನ ಮಾಡುತ್ತೇವೆ. ನಾವು ಬಳಸಿರುವ IHDSಸಮೀಕ್ಷೆಯ ದತ್ತಾಂಶಗಳ ಪ್ರಮುಖ ವಿವರಗಳನ್ನು (ಸಮೀಕ್ಷೆಯ ವಿಧಾನವನ್ನು ಒಳಗೊಂಡಂತೆ) Desai et al (2010)ಆಗಲೇ ಮಂಡಿಸಿದ್ದಾರೆ; ನಾವು ಇಲ್ಲಿ ಕೇವಲ ಅದರ ಸಾರಾಂಶವನ್ನು ಮಾತ್ರ ಪ್ರಸ್ತುತಪಡಿಸುತ್ತಿದ್ದೇವೆ. IHDS ಒಂದು ರಾಷ್ಟ್ರೀಯ ಪ್ರಾತಿನಿಧಿಕ ಸಮೀಕ್ಷೆಯಾಗಿದ್ದು, ಇದನ್ನು ನವೆಂಬರ್ 2004ರಿಂದ ಅಕ್ಟೋಬರ್ 2005ರ ಅವಧಿಯಲ್ಲಿ National Council

for Applied Economic Research(NCAER) ಮೇಲ್ವಿಚಾರಣೆಯಲ್ಲಿ ಮೇರಿಲ್ಯಾಂಡ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಕೈಗೊಳ್ಳಲಾಯಿತು. ಅಂಡಮಾನ್ ಮತ್ತು ನಿಕೋಬಾರ್ ಮತ್ತು ಲಕ್ಷದ್ವೀಪಗಳನ್ನು ಹೊರತುಪಡಿಸಿ ಭಾರತದ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಸಮೀಕ್ಷೆಯನ್ನು ನಡೆಸಲಾಗಿತ್ತು ಮತ್ತು 2001ರ ರಾಷ್ಟ್ರೀಯ ಜನಗಣತಿಯಲ್ಲಿನ 612 ಜಿಲ್ಲೆಗಳ ಪೈಕಿ ಒಟ್ಟು 382 ಜಿಲ್ಲೆಗಳು ಈ ಸಮೀಕ್ಷೆಯ ವ್ಯಾಪ್ತಿಗೆ ಒಳಪಟ್ಟಿದ್ದವು. 27,010 ಗ್ರಾಮೀಣ ಕುಟುಂಬಗಳು (1,503 ಹಳ್ಳಿಗಳಲ್ಲಿ) ಮತ್ತು 13,126 ನಗರ ಕುಟುಂಬಗಳನ್ನು (971 ನಗರ ಬ್ಲಾಕ್‌ಗಳಲ್ಲಿ) ಒಳಗೊಂಡ ಮಾದರಿಯನ್ನು ಪಡೆಯಲು ಎರಡು-ಹಂತದ ಶ್ರೇಣೀಕೃತ ಸಮೀಕ್ಷಾ ಮಾದರಿ ವಿನ್ಯಾಸ(stratified sampling design)ವನ್ನು ಅನುಸರಿಸಲಾಗಿತ್ತು.

IHDS ಒಂದು ವಿಶಿಷ್ಟವಾದ ಸಮೀಕ್ಷೆಯಾಗಿದ್ದು, ಅದನ್ನು ಶಿಕ್ಷಣ, ಆರೋಗ್ಯ, ಉದ್ಯೋಗ, ಆರ್ಥಿಕ ಸ್ಥಿತಿ, ಮದುವೆ, ಸಂತಾನ ಸಾಮರ್ಥ್ಯ, ಲಿಂಗ ಸಂಬಂಧಗಳು ಮತ್ತು ಸಾಮಾಜಿಕ ಬಂಡವಾಳಇತ್ಯಾದಿ ಅಂಶಗಳನ್ನು ಗುರಿಯಾಗಿಟ್ಟುಕೊಂಡು ಮಾನವ ಅಭಿವೃದ್ಧಿಯ ವಿವಿಧ ಆಯಾಮಗಳನ್ನು ಅಳೆಯಲು ವಿನ್ಯಾಸಗೊಳಿಸಲಾಗಿದೆ. ಇದರಲ್ಲಿ ಪೋಷಕರ ಉದ್ಯೋಗಕ್ಕೆ ಸಂಬಂಧಿಸಿದಂತೆ ಕಲೆಹಾಕಿದ ಮಾಹಿತಿಯು ಈ ಸಂಶೋಧನಾ ಲೇಖನದ ಉದ್ದೇಶಕ್ಕೆಹೆಚ್ಚು ಪ್ರಸ್ತುತವಾಗಿದೆ.ಕುಟುಂಬದ ಮುಖ್ಯಸ್ಥರಾಗಿರುವ ಪ್ರತಿಯೊಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ, ಈ ಸಮೀಕ್ಷೆಯು ಅವನ/ಅವಳ ತಂದೆ ತಮ್ಮ ಜೀವನದ ಹೆಚ್ಚಿನ ವರ್ಷಗಳು ತೊಡಗಿಸಿಕೊಂಡ ವೃತ್ತಿಯ ವಿವರಗಳನ್ನು ನೀಡುತ್ತದೆ (ಉದಾಹರಣೆಗೆ, ರೈತ, ಕೃಷಿ ಕಾರ್ಮಿಕ, ವಿಜ್ಞಾನಿ, ಹಳ್ಳಿಯ ಅಧಿಕಾರಿ, ಇತ್ಯಾದಿ). ಮನೆಯ ಮುಖ್ಯಸ್ಥನಲ್ಲದ ವ್ಯಕ್ತಿಗೆ ಸಂಬಂಧಿಸಿದಂತೆ, ನಾವು ಅವನ/ಅವಳ ತಂದೆಯ ಉದ್ಯೋಗವನ್ನು ಕುರಿತು ಮಾಹಿತಿ ಪಡೆಯುವ ಪರೋಕ್ಷ ಮಾರ್ಗ ಇಲ್ಲಿ ಲಭ್ಯವಿದೆ. ಪ್ರತಿಯೊಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ, ಈಸಮೀಕ್ಷೆಯು ಮನೆಯ ಮುಖ್ಯಸ್ಥನೊಂದಿಗೆ ಅವನ/ಅವಳ ಸಂಬಂಧವನ್ನು ದಾಖಲಿಸುತ್ತದೆ; ಆದ್ದರಿಂದ ಕುಟುಂಬದ ಮುಖ್ಯಸ್ಥನ ಮಗ ಅಥವಾ ಮಗಳಿಗೆ ಸಂಬಂಧಿಸಿದಂತೆ, ಆತನ/ಆಕೆಯ ತಂದೆಯ ಉದ್ಯೋಗವೇಕುಟುಂಬದ ಮುಖ್ಯಸ್ಥನ ಉದ್ಯೋಗ ಎಂದು ನಾವು ಪರಿಗಣಿಸಲು ಸಾಧ್ಯವಾಗುತ್ತದೆ.

ಸಮೀಕ್ಷೆಗೆ ಒಳಪಟ್ಟ ಮಹಿಳೆಯರ ಪೈಕಿ ಬಹುಪಾಲು ವಿವಾಹಿತ ಮಹಿಳೆಯರೇ ಇರುವ ಸಂದರ್ಭದಲ್ಲಿ, ದುರದೃಷ್ಟವಶಾತ್,ಅವರ ತಂದೆಯ ಉದ್ಯೋಗದ ಬಗ್ಗೆ ಮಾಹಿತಿಯು ಈ ಸಮೀಕ್ಷೆಯಲ್ಲಿ ಲಭ್ಯವಾಗುವುದಿಲ್ಲ. ನಮಗೆ ತಿಳಿದಿರುವಂತೆ, ಭಾರತದಲ್ಲಿ, ವಿವಾಹಿತ ಮಹಿಳೆಯರು ವಿಭಕ್ತ ಕುಟುಂಬಗಳಲ್ಲಿ ಅಥವಾ ಅವರ ಪತಿ ಮತ್ತು ಅವರ ಪೋಷಕರೊಂದಿಗೆ ಅವಿಭಕ್ತ ಕುಟುಂಬಗಳಲ್ಲಿ ವಾಸಿಸುತ್ತಾರೆ. ಇದರರ್ಥ ನಾವು ಇಲ್ಲಿ ಪರೋಕ್ಷ ವಿಧಾನವನ್ನು ಬಳಸಲಾಗುವುದಿಲ್ಲ, ಏಕೆಂದರೆ ಅವರು ಕುಟುಂಬದ ಮುಖ್ಯಸ್ಥನ ಹೆಂಡತಿಅಥವಾ ಸೊಸೆ ಆಗಿರುತ್ತಾರೆ. ಇದಲ್ಲದೆ, ಮನೆಯ ಮುಖ್ಯಸ್ಥರಾಗಿರುವ ಮಹಿಳೆಯರಿಗೆ ಸಂಬಂಧಿಸಿದಂತೆ, ಸಮೀಕ್ಷೆಯು ಅವರ ತಂದೆಯ ಉದ್ಯೋಗದ ಬದಲಿಗೆ ಅವರ ಗಂಡನ ಉದ್ಯೋಗವನ್ನು ದಾಖಲಿಸುತ್ತದೆ. ಅನೇಕ ವಯಸ್ಕ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಈ ಸಮೀಕ್ಷೆಯು ತಾಯಿಯ ಉದ್ಯೋಗದ ಬಗ್ಗೆ ಮಾಹಿತಿ ನೀಡುವುದಿಲ್ಲ. ಇಷ್ಟೇ ಅಲ್ಲದೆ, ಪೋಷಕರ ಆದಾಯ ಅಥವಾ ಆಸ್ತಿಯನ್ನು ಕುರಿತಂತೆ (ಉದಾ, ಭೂಹಿಡುವಳಿಗಳು) ಯಾವುದೇ ಚಾರಿತ್ರಿಕ ಮಾಹಿತಿ ಲಭ್ಯವಿಲ್ಲದ ಕಾರಣ, ನಾವು ವಿವರವಾದ ಸಾಮಾಜಿಕ ವರ್ಗಗಳವಿಶ್ಲೇಷಣೆಯನ್ನು (ಉದಾ, ದೊಡ್ಡ ರೈತರು, ಸಣ್ಣ ರೈತರು, ಇತ್ಯಾದಿ) ಅಥವಾ ಸಾಮಾಜಿಕ ಸ್ಥಾನಮಾನ/ಪ್ರತಿಷ್ಠೆ ಆಧಾರಿತ ಗುಂಪುಗಳನ್ನು(ಉದಾ, ಶಿಕ್ಷಣ, ಆದಾಯ ಮತ್ತು ಉದ್ಯೋಗವನ್ನು ಒಟ್ಟಿಗಿಟ್ಟು ನೋಡುವ ಮೂಲಕ) ಬಳಸಿಕೊಂಡು ಚಲನಶೀಲತೆಯನ್ನು ವಿಶ್ಲೇಷಿಸಲು ಸಾಧ್ಯವಾಗುವುದಿಲ್ಲ. ಈ ಮಿತಿಗಳ ಹೊರತಾಗಿಯೂ, ನಾವು ಕೆಳಗೆ ತೋರಿಸಲಿರುವಂತೆ, ಭಾರತದಲ್ಲಿ ಅಂತರ್ಪೀಳಿಗೆಯ ನಡುವಿನ ಔದ್ಯೋಗಿಕ ಚಲನಶೀಲತೆಯ ಮೇಲೆ ನಾವು ಅರ್ಥಪೂರ್ಣ ಮತ್ತು ಒಳನೋಟವುಳ್ಳ ತೀರ್ಮಾನಗಳನ್ನು ಮಾಡಲು ಈ ಸಮೀಕ್ಷೆ ಒದಗಿಸಿದ ದತ್ತಾಂಶಗಳಿಂದ ಸಾಧ್ಯವಾಗುತ್ತದೆ. ಇದಲ್ಲದೆ, ಮೇಲಿನ ಕೆಲವು ಮಿತಿಗಳು ಸಾಕಷ್ಟು ಮಟ್ಟಿಗೆ ಸಾಮಾನ್ಯ ಮಿತಿಗಳೇ ಆಗಿದ್ದು, ಅಂತರ್ಪೀಳಿಗೆ ನಡುವಿನ ಚಲನಶೀಲತೆಗೆ ಸಂಬಂಧಿಸಿದ ಇತರ ಅನೇಕ ಅಧ್ಯಯನಗಳು (ಉದಾಹರಣೆಗೆ, ನಾವು ಮೇಲೆ ಉಲ್ಲೇಖಿಸಿರುವಂತಹವುಗಳನ್ನು ನೋಡಿ)

ಕೂಡ ಮಹಿಳೆಯರ ಬಗ್ಗೆ ಅಗತ್ಯ ದತ್ತಾಂಶಗಳನ್ನು ಒದಗಿಸುವಲ್ಲಿ ಸೋತು, ಅವುಗಳು ತಮ್ಮ ಅಧ್ಯಯನವನ್ನು ಕೇವಲ ಪುರುಷರಿಗಷ್ಟೆ (ಅಂದರೆ,ಪುತ್ರರು ಮತ್ತು ತಂದೆ) ಸೀಮಿತಗೊಳಿಸುತ್ತವೆ.

ಮೇಲಿನ ಅಂಶಗಳನ್ನು ಪರಿಗಣಿಸಿ, ನಾವು ಈ ಅಧ್ಯಯನದಲ್ಲಿ ಕೇವಲ ವಯಸ್ಕ ಪುರುಷರ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸಿದ್ದೇವೆ ಮತ್ತು ಅವರ ಉದ್ಯೋಗವನ್ನು ಅವರ ತಂದೆಯ ಉದ್ಯೋಗದೊಂದಿಗೆ ಹೋಲಿಸಿದ್ದೇವೆ.[13]ನಾವು 20 ರಿಂದ 65 ವರ್ಷ ವಯಸ್ಸಿನ ಪುರುಷರನ್ನು ಅಧ್ಯಯನಕ್ಕೆ ಪರಿಗಣಿಸಿದ್ದೇವೆ. ವ್ಯಕ್ತಿಗಳಿಗೆ ಸಂಬಂಧಿಸಿದಂತೆ (ಅಂದರೆ, ಪುತ್ರರಿಗೆ), ಅವರು ವಾರಕ್ಕೆ ಎಷ್ಟು ದಿನಗಳು ಮತ್ತು ದಿನಕ್ಕೆ ಎಷ್ಟು ಗಂಟೆಗಳ ಕಾಲ ಬೇರೆಯವರಿಗಾಗಿ ದುಡಿಯುತ್ತಾರೆ ಎಂಬುದನ್ನು ಮತ್ತು ಅವರಕೆಲಸದ ಸ್ವರೂಪ (ಉದಾ, ಕೃಷಿ ಕಾರ್ಮಿಕ, ಶಿಕ್ಷಕ), ಅವರು ಸ್ವಂತ ಜಮೀನಿನಲ್ಲಿ ಕೆಲಸ ಮಾಡುತ್ತಾರೆಯೇಅಥವಾ ಸ್ವಂತ ವ್ಯವಹಾರದಲ್ಲಿ ತೊಡಗಿಕೊಂಡಿದ್ದಾರೆಯೇ ಎಂಬುದನ್ನು ದಾಖಲಿಸಿದ್ದೇವೆ. ನಾವು ಈ ಮಾಹಿತಿಯನ್ನು ಉದ್ಯೋಗ ವರ್ಗಗಳಿಗೆ ಅನುವಾಗುವಂತೆ, ವ್ಯಕ್ತಿಗಳನ್ನು ವರ್ಗೀಕರಿಸಲು ಮತ್ತು ಅಂತರ್ಪೀಳಿಗೆಯ ನಡುವಿನ ಪ್ರಸರಣ ನಕ್ಷೆ ಮಾಡಲು ಬಳಸಿದ್ದೇವೆ. ಇದರ ವಿವರವಾದ ವಿಶ್ಲೇಷಣೆಯನ್ನು ಮುಂದಿನ ವಿಭಾಗದಲ್ಲಿ ಕೊಡಲಾಗಿದೆ.

### 3. ವಿಶ್ಲೇಷಣೆ ಮತ್ತು ಫಲಿತಾಂಶಗಳು[14]

ನಾವು ಮೊದಲು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ವ್ಯಕ್ತಿಗಳ ಮೇಲೆ ಗಮನ ಕೇಂದ್ರೀಕರಿಸಿ, ಅವರನ್ನು ವಿವಿಧ ಔದ್ಯೋಗಿಕ ವರ್ಗಗಳಾಗಿ ವಿಂಗಡಿಸೋಣ. ಈ ವರ್ಗೀಕರಣ ಮಾಡುವ ಸಂದರ್ಭದಲ್ಲಿ ನಾವು ಜನರು ಮಾಡುವ ಕೆಲಸಗಳ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು, ಅವರನ್ನು ವಿವಿಧ ವಿಶಾಲ ಸಾಮಾಜಿಕ ವರ್ಗಗಳು ಅಥವಾ ಸ್ಥಾನಮಾನಗಳ ಗುಂಪುಗಳಾಗಿ ನೋಡುವ ಪ್ರಯತ್ನ ಮಾಡುತ್ತೇವೆ. ನಾವು ವ್ಯಕ್ತಿಗಳನ್ನು:ರೈತರು (ಅಂದರೆ, ಸ್ವಂತ ಕೃಷಿಕೆಲಸದಲ್ಲಿ ತೊಡಗಿಸಿಕೊಂಡವರು, ಇವರು ಮುಖ್ಯವಾಗಿ ತಮ್ಮ ಸ್ವಂತ ಜಮೀನಿನಲ್ಲಿ ದುಡಿಯುತ್ತಾರೆ); ಕೃಷಿಯೇತರ (ಮುಖ್ಯವಾಗಿ ಸ್ವಂತ ವ್ಯಾಪಾರ ವಹಿವಾಟು ಇಟ್ಟುಕೊಂಡವರು),ಹೊರಗಿನ ಕೆಲಸದಲ್ಲಿ ತೊಡಗಿಸಿಕೊಂಡವರು ಮತ್ತು ಕಾರ್ಮಿಕರು (ಇವರು ಮುಖ್ಯವಾಗಿ ಇತರರ ಸೇವೆಯಲ್ಲಿ ನಿರತರಾಗಿರುತ್ತಾರೆ) ಎಂದು ವರ್ಗೀಕರಿಸಿದ್ದೇವೆ.[15]ಕಾರ್ಮಿಕರಪೈಕಿ ಪ್ರಮುಖ ವರ್ಗವೆಂದರೆ ಕೃಷಿ ಕಾರ್ಮಿಕರು, ಆದ್ದರಿಂದ ನಾವು ಕಾರ್ಮಿಕರನ್ನು ಕೃಷಿ ಕಾರ್ಮಿಕರು ಮತ್ತು ಇತರ ಕಾರ್ಮಿಕರರು ಎಂದು ವರ್ಗೀಕರಿಸಿದ್ದೇವೆ. ಇತರ ಕಾರ್ಮಿಕರ ಪ್ರಮಾಣ ನಗಣ್ಯವಾಗಿರುವುದರಿಂದ, ನಾವು ಈ ವರ್ಗವನ್ನು ಭಾರತೀಯ ರಾಷ್ಟ್ರೀಯ ವೃತ್ತಿಗಳ ವರ್ಗೀಕರಣ(Indian National Classification of Occupations 2004)ದ ಆಧಾರದ ಮೇಲೆ ಪರಿಶೀಲಿಸುತ್ತೇವೆ.

NCO ಅನ್ನು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (International Labour Organisation) ಅಳವಡಿಸಿಕೊಂಡ ವರ್ಗೀಕರಣ ಮಾದರಿಯಮೇಲೆ ರೂಪಿಸಲಾಗಿದ್ದು, ಇದನ್ನು ಭಾರತೀಯ ಪರಿಸ್ಥಿತಿಗಳಿಗೆ ಸೂಕ್ತವಾಗುವಂತೆ ಮಾರ್ಪಡಿಸಲಾಗಿದೆ.ಇದು ಕಾರ್ಮಿಕರನ್ನು ವಿವಿಧ ವರ್ಗಗಳಾಗಿವಿಂಗಡಿಸುತ್ತದೆ ಮತ್ತು ವಿಂಗಡನೆಗಳಿಗೆ ಸೂಕ್ತ ಸಂಕೇತಗಳನ್ನು ಕೊಡುತ್ತದೆ. ಈ ಸಂಕೇತಗಳು ನಾಲ್ಕು-ಅಂಕಿ ತನಕ ಮುಂದುವರಿಯುತ್ತವೆ. ಇಲ್ಲಿ ಮಾಡಿರುವ ವಿಶಾಲವಾದ ವರ್ಗೀಕರಣದಲ್ಲಿ 10 ಏಕ-ಅಂಕಿಯ ಸಂಕೇತಗಳಿವೆ: (1) ಶಾಸಕರು, ಹಿರಿಯ ಅಧಿಕಾರಿಗಳು ಮತ್ತು ವ್ಯವಸ್ಥಾಪಕರು; (2) ವೃತ್ತಿಪರರು; (3) ತಂತ್ರಜ್ಞರು ಮತ್ತು ಸಹಾಯಕ ವೃತ್ತಿಪರರು; (4) ಗುಮಾಸ್ತರು; (5) ಸೇವಾ ಕಾರ್ಯಕರ್ತರು ಮತ್ತು ಅಂಗಡಿ ಮತ್ತು ಮಾರುಕಟ್ಟೆ ಮಾರಾಟ ಕೆಲಸಗಾರರು; (6) ನುರಿತ ಕೃಷಿ ಮತ್ತು ಮೀನುಗಾರಿಕೆ ಕೆಲಸಗಾರರು; (7) ಕರಕುಶಲ ಮತ್ತು ಸಂಬಂಧಿತ ವ್ಯಾಪಾರದ ಕೆಲಸಗಾರರು; (8) ಕಾರ್ಖಾನೆ ಮತ್ತು ಯಂತ್ರ ನಿರ್ವಾಹಕರು ಮತ್ತು ಜೋಡಣೆಗಾರರು; (9) ಪ್ರಾಥಮಿಕ ಉದ್ಯೋಗಗಳು (ಉದಾ, ಜಾಡಮಾಲಿಗಳು, ಬೀದಿ ವ್ಯಾಪಾರಿಗಳು, ಕೂಲಿ ಕಾರ್ಮಿಕರು, ಇತ್ಯಾದಿ); ಮತ್ತು (10) ವೃತ್ತಿ ವರ್ಗೀಕರಣದ ವ್ಯಾಪ್ತಿಗೆ ಸೇರದ ಇತರ ಕೆಲಸಗಾರರು. ಈ ವರ್ಗೀಕರಣ ಯೋಜನೆಯು ಕಾರ್ಮಿಕರನ್ನು ಅವರು ನಿರ್ವಹಿಸುವ ಕೆಲಸಗಳ ಸಾಮ್ಯತೆಯ ಆಧಾರದ ಮೇಲೆ ಗುಂಪುಗಳಾಗಿ ವಿಂಗಡಿಸಲು ಪ್ರಯತ್ನಿಸುತ್ತದೆ ಎಂಬುದನ್ನು ನಾವು

ಗಮನಿಸಬೇಕು. ಅಷ್ಟೇ ಅಲ್ಲದೆಇದನ್ನು ಕಾರ್ಮಿಕರನ್ನು ಅವರಿಗಿರುವ ಕೌಶಲ್ಯಕ್ಕೆ ಸಂಬಂಧಪಟ್ಟಂತೆ ವಿಶಾಲ ಗುಂಪುಗಳಾಗಿ ಅಥವಾ ಸ್ಥಾನಮಾನ ಆಧಾರಿತ ಗುಂಪುಗಳಾಗಿ ವಿಂಗಡಿಸುವ ವಿಧಾನ ಎಂದು ಕೂಡ ಅರ್ಥೈಸಬಹುದು.ಉದಾಹರಣೆಗೆ, ವೃತ್ತಿಪರರು ಸಹಾಯಕ ವೃತ್ತಿಪರರಿಗಿಂತ ಹೆಚ್ಚಿನ ಸ್ಥಾನಮಾನವನ್ನು ಹೊಂದಿರುತ್ತಾರೆ, ಮತ್ತು ಸಹಾಯಕ ವೃತ್ತಿಪರರ ಸ್ಥಾನಮಾನವು ಕೌಶಲ್ಯರಹಿತ ಕಾರ್ಮಿಕರಿಗಿಂತ ಉನ್ನತ ಮಟ್ಟದಲ್ಲಿರುತ್ತದೆ. ನಾವು ಈ ಎಲ್ಲ 10 ವರ್ಗಗಳನ್ನು ಬಳಸಬಹುದು, ಆದರೆ ಇದು ಹಲವಾರು ಗುಂಪುಗಳನ್ನುಹುಟ್ಟುಹಾಕುವುದರಿಂದ, ಇದು ಅಂತರ್ಪೀಳಿಗೆಯ ನಡುವೆ ನಮಗೆ ಕೆಲವೇ ಕೆಲವು ಪರಿವರ್ತನೆಗಳ ದಾಖಲೆಗಳನ್ನು ಒದಗಿಸಲು ಸಮರ್ಥವಾಗುತ್ತದೆ. ಅಂದರೆ, ನಾವು ಕೆಳಗೆ ಚರ್ಚಿಸುವ ಪರಿವರ್ತನೆಯ ಮ್ಯಾಟ್ರಿಕ್ಸ್ ಗಳಲ್ಲಿ ಇವುಗಳ ಆಧಾರದಲ್ಲಿ ನಾವು ದತ್ತಾಂಶಗಳನ್ನು ದಾಖಲಿಸಿದರೆ, ನಮಗೆ ಹಲವು ಕಡೆ ಶೂನ್ಯನಮೂದುಗಳು ಎದುರಾಗಬಹುದು. ಆದ್ದರಿಂದ, ವಿಷಯವನ್ನು ಸರಳೀಕರಿಸಲು, ನಾವು ಇತರ ಕೆಲಸಗಾರರನ್ನು ಇನ್ನೂ ನಾಲ್ಕು ವರ್ಗಗಳಾಗಿ ವಿಂಗಡಿಸುತ್ತೇವೆ: (ಎ) ವೃತ್ತಿಪರರು, ಅಧಿಕಾರಿಗಳು ಮತ್ತು ತಾಂತ್ರಿಕ ಕೆಲಸಗಾರರು; (ಬಿ) ಗುಮಾಸ್ತರು, ಸೇವಾ ಕಾರ್ಯಕರ್ತರು, ನುರಿತ ಕೃಷಿ ಮತ್ತು ಮೀನುಗಾರಿಕೆ ಕೆಲಸಗಾರರು; (ಸಿ) ಕರಕುಶಲ, ವ್ಯಾಪಾರ, ಕಾರ್ಖಾನೆ ಕೆಲಸಗಾರರು ಮತ್ತು ಯಂತ್ರ ನಿರ್ವಾಹಕರು; ಮತ್ತು (ಡಿ) ಪ್ರಾಥಮಿಕ ಉದ್ಯೋಗಗಳು ಮತ್ತು ಇತರೆ.[16] ತಂದೆಯ ಉದ್ಯೋಗಕ್ಕಾಗಿ, NCO ಸಂಕೇತಗಳ ವಿವರಣೆಯಂತೆ ನಾವು ಮೇಲೆ ಕೊಟ್ಟಂತಹ ಸಂಕೇತಗಳನ್ನುಬಳಸಿಕೊಳ್ಳಬಹುದು.

ಚಲನಶೀಲತೆಯ ಅಧ್ಯಯನಕ್ಕೆ ಸಂಬಂಧಿಸಿದ ಸಾಹಿತ್ಯದಲ್ಲಿ ವರ್ಗೀಕರಣದ ಯೋಜನೆ(scheme)ಗಳ ಬಗ್ಗೆ ಒಮ್ಮತವಿಲ್ಲದಿರುವುದು ನಮಗೆ ಕಾಣಿಸುತ್ತದೆ. ಒಂದೇ ದೇಶದ ಸ್ಥಿತಿಗತಿಗಳ ಬಗ್ಗೆ ಬೇರೆ ಬೇರೆ ಲೇಖಕರು ಅಧ್ಯಯನ ನಡೆಸುವ ಸಂದರ್ಭದಲ್ಲಿ ಕೂಡ ಬೇರೆ ಬೇರೆ ಯೋಜನೆಗಳನ್ನು ಬಳಸಿದ್ದಾರೆ (ಉದಾ, Long and Ferrie 2005; Erikson and Goldthorpe 1992). ನಮ್ಮ ಯೋಜನೆಯು ಈಗಾಗಲೇ ಪ್ರಚಲಿತದಲ್ಲಿರುವ ಯೋಜನೆಗಳಲ್ಲಿ (e.g., Erikson and Goldthorpe 1992) ಬಳಸಿರುವ ಕೆಲವು ವರ್ಗೀಕರಣಗಳನ್ನು (ಉದಾಹರಣೆಗೆ, ರೈತರು ಮತ್ತು ಕೃಷಿ ಕಾರ್ಮಿಕರು) ಬಳಸಿಕೊಳ್ಳುತ್ತದೆ. ಹೆಚ್ಚು ಮುಖ್ಯವಾಗಿ, ಇದು ಭಾರತದಲ್ಲಿ ಈಗಾಗಲೇ ಇರುವ,ಸೈದ್ಧಾಂತಿಕಆಧಾರದೊಂದಿಗೆ ರಚಿಸಲ್ಪಟ್ಟ ಯೋಜನೆಗಳೊಂದಿಗೆ ಕೆಲವು ಸಾಮ್ಯತೆಗಳನ್ನು ಹೊಂದಿದೆ (Vakulabharanam 2010).[17] ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ನಮ್ಮ ಯೋಜನೆಯಲ್ಲಿ ಶ್ರೇಣೀಕರಣದ ಛಾಯೆ ಕಂಡುಬಂದರೂ,[18] ಎಲ್ಲ ವರ್ಗಗಳನ್ನು ಶ್ರೇಣೀಕರಣಗೊಳಿಸುವುದು ಕಷ್ಟ. ಉದಾ, ಕೃಷಿಯೇತರ ಕೆಲಸದಲ್ಲಿ ಸ್ವಂತವಾಗಿ ತೊಡಗಿಸಿಕೊಂಡಿರುವ ರೈತರು ಮತ್ತುಇತರ ವ್ಯಕ್ತಿಗಳು; ರೈತರು ಮತ್ತು ಗುಮಾಸ್ತರು. ಅದರೆ ಕೃಷಿ ಅಥವಾ ಕೃಷಿಯೇತರ ಉದ್ಯೋಗಗಳನ್ನು ಪರಿಗಣಿಸುವಾಗ, ಕೃಷಿ ಕಾರ್ಮಿಕರು ಮತ್ತು ಪ್ರಾಥಮಿಕ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವ ಜನರು ಸಮಾಜದಲ್ಲಿ ಅತ್ಯಂತ ಕೆಳಗಿನ ಸ್ತರದಲ್ಲಿ ಇದ್ದಾರೆ ಎಂಬುದನ್ನು ಸ್ಪಷ್ಟವಾಗಿ ಹೇಳಬಹುದು.

ನಾವು ರೈತರನ್ನು ಅವರ ಭೂ ಹಿಡುವಳಿಗಳ ಆಧಾರದ ಮೇಲೆ (ದೊಡ್ಡ, ಮಧ್ಯಮ, ಇತ್ಯಾದಿ)ವಿವಿಧ ಗುಂಪುಗಳಾಗಿ ಇನ್ನೂ ವಿಸ್ತರಿಸಿ ವರ್ಗೀಕರಿಸಲು ಸಾಧ್ಯವಾಗಿದ್ದರೆ ಉಪಯುಕ್ತವಾಗುತ್ತಿತ್ತು. ಆದರೆ, ದುರದೃಷ್ಟವಶಾತ್ ಇದು ಸಾಧ್ಯವಿಲ್ಲ ಏಕೆಂದರೆ (ನಾವು ಮೇಲೆ ಚರ್ಚಿಸಿದಂತೆ) ನಮಗೆ ಅನೇಕ ತಂದೆಯಂದಿರ ಭೂಹಿಡುವಳಿಗಳ ಬಗ್ಗೆ ಸೂಕ್ತ ಮಾಹಿತಿದೊರಕುವುದಿಲ್ಲ. ಈ ಮಾಹಿತಿಯ ಕೊರತೆ ನಮಗೆ ಕೇವಲ IHDS ನಲ್ಲಿ ಮಾತ್ರವಲ್ಲದೆ, ಇದೇ ರೀತಿಯ ಇತರ ಸಮೀಕ್ಷೆಗಳಲ್ಲೂ ಕಾಣಸಿಗುವುದಿಲ್ಲ, ಅಷ್ಟೇ ಏಕೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಕೈಗೊಂಡಿರುವ ಸಮೀಕ್ಷೆಗಳಲ್ಲೂ ಕೂಡ (ಉದಾ, Gibbons 2010)ಇದು ಅಲಭ್ಯವಾಗಿದೆ. ಇದರ ಹೊರತಾಗಿ NSSದತ್ತಾಂಶಗಳು ಕೆಲವೊಮ್ಮೆ ನಮ್ಮನ್ನು ದಿಕ್ಕು ತಪ್ಪಿಸುವ ಸಂದರ್ಭ ಕೂಡ ಇದೆ, ಹೇಗೆಂದರೆ, ಒಂದೇ ಮನೆಯಲ್ಲಿ ವಾಸಿಸುವ ತಂದೆ ಮತ್ತು ಪುತ್ರರು ಒಂದೇ ಪ್ರಮಾಣದ ಭೂಮಿಯನ್ನು ಹೊಂದಿರುತ್ತಾರೆ.

ಕೋಷ್ಟಕ 1ಗ್ರಾಮೀಣ, ನಗರ ಮತ್ತು ಅಖಿಲ ಭಾರತ ಮಟ್ಟದಲ್ಲಿ ಈ ವಿವಿಧ ಉದ್ಯೋಗ ವರ್ಗಗಳಲ್ಲಿ ತೊಡಗಿಸಿಕೊಂಡಿರುವ ಜನಸಂಖ್ಯೆಯ ಪ್ರಮಾಣವನ್ನು ಪ್ರಸ್ತುತಪಡಿಸುತ್ತದೆ.

ನಿರೀಕ್ಷಿಸಿದಂತೆ, ಗ್ರಾಮೀಣ ಪ್ರದೇಶಗಳಲ್ಲಿ (ಅಂಕಣ (iv) ಗಣನೀಯ ಪ್ರಮಾಣದಲ್ಲಿ (58.3%) ಜನರು (ಪುತ್ರರು) ಒಂದಾ ರೈತರಾಗಿರುತ್ತಾರೆ (32.7%) ಅಥವಾ ಕೃಷಿ ಕಾರ್ಮಿಕರಾಗಿರುತ್ತಾರೆ (25.6%) ಎಂಬುದನ್ನು ನಾವು ಗಮನಿಸಬಹುದು. ಅಖಿಲ ಭಾರತ ಮಟ್ಟದಲ್ಲಿ ಇದಕ್ಕೆ ಅನುಗುಣವಾದ ಅಂಕಿಅಂಶಗಳು (ಅಂಕಣ (ii)) ಕೊಟ್ಟಂತೆ 44.3% ಆಗಿವೆ.

**ಕೋಷ್ಟಕ 1: ಔದ್ಯೋಗಿಕ ವರ್ಗಗಳ ಅಧಾರದ ಮೇಲೆ ಜನರ ವಿತರಣೆ (ಶೇಕಡಾವಾರು): ಅಖಿಲ ಭಾರತ, ಗ್ರಾಮೀಣ ಮತ್ತು ನಗರ ಪ್ರದೇಶಗಳು**

| | **ಅಖಿಲ ಭಾರತ** | | **ಗ್ರಾಮೀಣ** | | **ನಗರ ಪ್ರದೇಶ** | |
|---|---|---|---|---|---|---|
| | **ತಂದೆಯಂದಿರು (i)** | **ಪುತ್ರರು (ii)** | **ತಂದೆಯಂದಿರು (iii)** | **ಪುತ್ರರು (iv)** | **ತಂದೆಯಂದಿರು (v)** | **ಪುತ್ರರು (vi)** |
| ಕೃಷಿಕರು (1) | 47.19 | 24.45 | 55.19 | 32.70 | 25.62 | 2.16 |
| ಕೃಷಿಯೇತರ ಸ್ವಂತ ಉದ್ಯೋಗದಲ್ಲಿ ತೊಡಗಿಸಿಕೊಂಡವರು (2) | 3.79 | 14.47 | 1.75 | 10.88 | 9.29 | 24.15 |
| ಕೃಷಿ ಕಾರ್ಮಿಕರು (3) | 22.57 | 19.83 | 25.87 | 25.64 | 13.66 | 4.15 |
| ವೃತ್ತಿಪರರು, ಅಧಿಕಾರಿಗಳು ಮತ್ತುಸಂಬಂಧಿತ ಕೆಲಸಗಾರರು (4) | 6.22 | 6.01 | 3.93 | 3.46 | 12.42 | 12.88 |
| ಗುಮಾಸ್ತರು, ಸೇವಾ ಕಾರ್ಯಕರ್ತರು, ನುರಿತ ಕೃಷಿ ಮತ್ತು ಮೀನುಗಾರಿಕೆ ಕೆಲಸಗಾರರುಮತ್ತು ಸಂಬಂಧಿತ ಕೆಲಸಗಾರರು (5) | 6.42 | 8.33 | 3.47 | 4.56 | 14.36 | 18.50 |
| ಕರಕುಶಲ, ವ್ಯಾಪಾರ, ಕಾರ್ಖಾನೆ ಕೆಲಸಗಾರರು ಮತ್ತು ಸಂಬಂಧಿತ ಕೆಲಸಗಾರರು(6) | 7.62 | 8.83 | 5.31 | 5.56 | 13.86 | 17.64 |
| ಪ್ರಾಥಮಿಕ ಉದ್ಯೋಗಗಳು ಮತ್ತು ಇತರರು(7) | 6.18 | 18.10 | 4.47 | 17.20 | 10.79 | 20.53 |

ಗ್ರಾಮೀಣ, ನಗರ ಮತ್ತು ಅಖಿಲ ಭಾರತ ಮಟ್ಟದಲ್ಲಿ ವ್ಯಕ್ತಿಗಳ ಸಂಖ್ಯೆ ಕ್ರಮವಾಗಿ 18,679, 9,591 ಮತ್ತು 28,270.
ಮೂಲ: IHDS (2004-05) ಆಧಾರದ ಮೇಲೆ ಲೇಖಕರ ಲೆಕ್ಕಾಚಾರ.

ಕೋಷ್ಟಕ 1ಗ್ರಾಮೀಣ, ನಗರ ಮತ್ತು ಅಖಿಲ ಭಾರತ ಮಟ್ಟದಲ್ಲಿ ವಿವಿಧ ಔದ್ಯೋಗಿಕ ವರ್ಗಗಳಿಗೆ ಸೇರಿದ ತಂದೆಯಂದಿರ ಪ್ರಮಾಣವನ್ನು ಸಹ ಪ್ರಸ್ತುತಪಡಿಸುತ್ತದೆ. ಉದಾಹರಣೆಗೆ, ಗ್ರಾಮೀಣ ಪ್ರದೇಶದ ತಂದೆಯಂದಿರ ಪೈಕಿ 81.1% ರೈತರಾಗಿದ್ದಾರೆ ಅಥವಾ ಕೃಷಿ ಕಾರ್ಮಿಕರಾಗಿದ್ದಾರೆ (ಕ್ರಮವಾಗಿ 55.2% ಮತ್ತು 25.9%) ಎಂಬುದನ್ನು ನಾವು ಗಮನಿಸಬಹುದು.

ಕೋಷ್ಟಕ 2 “ಪರಿವರ್ತನೆ” ಅಥವಾ "ಚಲನಶೀಲತೆ"ಯ ಮ್ಯಾಟ್ರಿಕ್ಸ್ ಅನ್ನು ಪ್ರಸ್ತುತಪಡಿಸುತ್ತದೆ. ಇದು ತಮ್ಮ ತಂದೆಯಂದಿರ ಔದ್ಯೋಗಿಕ ವರ್ಗಕ್ಕೆಯೇಸೇರಿದ ಇತರ ವಿವಿಧ ಉದ್ಯೋಗಗಳನ್ನು ಮುಂದುವರಿಸುತ್ತಿರುವವ್ಯಕ್ತಿಗಳ ಶೇಕಡಾವಾರು ಪ್ರಮಾಣವನ್ನು ಸೂಚಿಸುತ್ತದೆ. ಈ ಅಧ್ಯಯನ ಸಾಹಿತ್ಯದಲ್ಲಿ ಪ್ರಮಾಣಿತವಾಗಿ ಬಳಕೆಯಾಗಿರುವಂತೆ, ಈ ಶೇಕಡಾವಾರುಗಳನ್ನು ನಾವು ಷರತ್ತುಬದ್ಧ

ಸಂಭವನೀಯತೆ(conditional probabilities)ಗಳಾಗಿ ಅರ್ಥೈಸಬಹುದು, ಅಂದರೆ, ಒಬ್ಬ ವ್ಯಕ್ತಿಯ ತಂದೆ ಒಂದು ನಿರ್ದಿಷ್ಟ ವರ್ಗಕ್ಕೆ ಸೇರಿದ್ದಾನೆ ಎಂಬುದರ ಆಧಾರದ ಮೇಲೆ ಅವನ ಮಗ ಕೂಡ ಅದೇ ವರ್ಗಕ್ಕೆ ಸೇರುತ್ತಾನೆ ಎಂಬ ಸಂಭವನೀಯತೆ.[19]ಇಲ್ಲಿ ಪ್ರತಿ ಸಾಲಿನಲ್ಲಿನ ನಮೂದುಗಳ ಮೊತ್ತ 1 ಎಂಬುದನ್ನು ಗಮನಿಸಿ.

**ಕೋಷ್ಟಕ 2: ಔದ್ಯೋಗಿಕ ಪರಿವರ್ತನಾ ಮ್ಯಾಟ್ರಿಕ್ಸ್ : ಗ್ರಾಮೀಣಭಾರತ**

| ತಂದೆಯಂದಿರ ಔದ್ಯೋಗಿಕ ವರ್ಗಗಳು | ಪುತ್ರರ ಔದ್ಯೋಗಿಕ ವರ್ಗಗಳು(ಶೇಕಡಾವಾರು) | | | | | | |
|---|---|---|---|---|---|---|---|
| | 1 | 2 | 3 | 4 | 5 | 6 | 7 |
| (1) | 49.52 | 8.55 | 16.85 | 3.36 | 3.95 | 3.22 | 14.55 |
| (2) | 9.76 | 62.4 | 7.00 | 3.51 | 4.24 | 4.29 | 8.80 |
| (3) | 10.44 | 5.95 | 55.87 | 1.51 | 2.69 | 4.12 | 19.43 |
| (4) | 26.55 | 17.49 | 10.25 | 18.19 | 10.25 | 7.15 | 10.13 |
| (5) | 15.62 | 18.93 | 11.00 | 6.64 | 21.27 | 6.84 | 19.7 |
| (6) | 10.64 | 23.94 | 8.07 | 2.75 | 5.35 | 35.27 | 13.98 |
| (7) | 7.93 | 20.46 | 12.36 | 1.25 | 4.05 | 5.64 | 48.31 |

(1) ರೈತರು; (2) ಕೃಷಿಯೇತರ ಸ್ವಂತ ಉದ್ಯೋಗದಲ್ಲಿರುವವರು; (3) ಕೃಷಿ ಕಾರ್ಮಿಕರು; (4) ವೃತ್ತಿಪರರು, ಅಧಿಕಾರಿಗಳು ಮತ್ತು ಇತರೆ ಸಂಬಂಧಿತ ಉದ್ಯೋಗದಲ್ಲಿರುವವರು; (5) ಗುಮಾಸ್ತರು, ಸೇವಾ ಕಾರ್ಯಕರ್ತರು, ನುರಿತ ಕೃಷಿ ಮತ್ತು ಮೀನುಗಾರಿಕೆ ಕೆಲಸಗಾರರು ಮತ್ತು ಉದ್ಯೋಗದಲ್ಲಿರುವವರು; (6) ಕುಶಲಕರ್ಮಿಗಳು, ಕಾರ್ಖಾನೆ ಕೆಲಸಗಾರರು ಮತ್ತು ಇತರೆ ಸಂಬಂಧಿತ ಉದ್ಯೋಗದಲ್ಲಿರುವವರು; (7)ಪ್ರಾಥಮಿಕ ಉದ್ಯೋಗಗಳು ಮತ್ತು ಇತರೆ.

ಮೂಲ: IHDS (2004-05) ಆಧಾರದ ಮೇಲೆ ಲೇಖಕರು ಮಾಡಿದ ಲೆಕ್ಕಾಚಾರಗಳು.

ಒಂದು ಕುಟುಂಬವು ಪೀಳಿಗೆಯಿಂದ ಪೀಳಿಗೆಗೆ ಕ್ರ. ಸಂ.1ನ್ನು ಹೊರತುಪಡಿಸಿ (ವೃತ್ತಿಪರರು, ಅಧಿಕಾರಿಗಳು ಮತ್ತು ತಂತ್ರಜ್ಞರು), ಉಳಿದೆಲ್ಲ ವರ್ಗಗಳಲ್ಲಿ ಒಂದೇ ಉದ್ಯೋಗದಲ್ಲಿ ಗಣನೀಯ ಪ್ರಮಾಣದಲ್ಲಿ ತೊಡಗಿಸಿಕೊಂಡಿರುವುದು ನಮಗೆ ಕೋಷ್ಟಕ 2ರಿಂದ ಸ್ಪಷ್ಟವಾಗುತ್ತದೆ. ಉಳಿದೆಲ್ಲ ಔದ್ಯೋಗಿಕ ವಿಭಾಗಗಳಲ್ಲಿ, ಕರ್ಣೀಯ ನಮೂದು(diagonal entries)ಗಳ ಸಂಖ್ಯೆ ದೊಡ್ಡದಾಗಿದೆ. ಈ ವರ್ಗದಲ್ಲೂ ಕೂಡ  (ಅಂದರೆ, ವೃತ್ತಿಪರರು, ಇತ್ಯಾದಿ), ಕರ್ಣದಲ್ಲಿನ ನಮೂದು ಪ್ರಮಾಣದಲ್ಲಿ ಎರಡನೇ ಸ್ಥಾನದಲ್ಲಿದ್ದು, ಮೊದಲನೇ ಸ್ಥಾನಕ್ಕೆ ಅತ್ಯಂತ ನಿಕಟವಾಗಿದೆ. ಎಲ್ಲ ಉದ್ಯೋಗ ಕ್ಷೇತ್ರಗಳಲ್ಲೂ ಕೂಡ ಮಗನು ತಂದೆಯ ವೃತ್ತಿಯನ್ನೇ ಮುಂದುವರಿಸಿಕೊಂಡು ಹೋಗುತ್ತಿರುವುದನ್ನು ಇದು ಪ್ರತಿಬಿಂಬಿಸುತ್ತದೆ. ರೈತರು ಮತ್ತು ಕೃಷಿ ಕಾರ್ಮಿಕರು ಎಂಬ ಎರಡು ವರ್ಗಗಳು ನಿರ್ದಿಷ್ಟ ಪ್ರಾಮುಖ್ಯವನ್ನು ಹೊಂದಿವೆ. ರೈತರ ಅರ್ಧದಷ್ಟು ಮಕ್ಕಳು ರೈತರಾಗಿ ಮತ್ತು ಕೃಷಿ ಕಾರ್ಮಿಕರ ಅರ್ಧಕ್ಕಿಂತ ಹೆಚ್ಚು ಮಕ್ಕಳು (ಸುಮಾರು 56%) ಕೃಷಿ ಕಾರ್ಮಿಕರಾಗಿ ಉಳಿಯುತ್ತಾರೆ.

ನಾವು ಈಗ ನಗರ ಪ್ರದೇಶಗಳ ವಿಶ್ಲೇಷಣೆ ಮಾಡೋಣ. ಕೋಷ್ಟಕ 1 ರಿಂದ (ಅಂಕಣ (v) ಮತ್ತು (vi)), ನಮಗೆ ಕಾಣುವಂತೆ (ನಿರೀಕ್ಷಿಸಿದಂತೆ) ಒಂದು ಸಣ್ಣ ಪ್ರತಿಶತದಷ್ಟು ವ್ಯಕ್ತಿಗಳು ಮಾತ್ರ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ (ರೈತರು ಅಥವಾ ಕಾರ್ಮಿಕರು). ಕೃಷಿಯಲ್ಲಿ ತೊಡಗಿರುವ ತಂದೆಯಂದಿರ ಶೇಕಡಾವಾರು ಪ್ರಮಾಣವು ಎರಡು ಅಂಶಗಳಿಂದಾಗಿ ಸ್ವಲ್ಪ ಹೆಚ್ಚಾಗಿದೆ (ಪುತ್ರರ ಶೇಕಡಾವಾರು ಪ್ರಮಾಣಕ್ಕೆ ಹೋಲಿಸಿದರೆ): ಮೊದಲನೆಯದಾಗಿ ಕಾಲಕ್ರಮೇಣವಾಗಿ ಜನರು ಸಾಮಾನ್ಯವಾಗಿ ಕೃಷಿಕೆಲಸದಲ್ಲಿ ತೊಡಗಿಕೊಂಡಿರುವ ಮತ್ತು ನಗರ ಪ್ರದೇಶಗಳಲ್ಲಿ ಕೃಷಿಕೆಲಸದಲ್ಲಿ ತೊಡಗಿಕೊಂಡಿರುವ ಪ್ರಮಾಣದಲ್ಲಿ ಆಗಿರುವ  ಇಳಿಕೆ ಮತ್ತು ಎರಡನೆಯದಾಗಿ, ಹಳ್ಳಿಯಿಂದ ನಗರ ಪ್ರದೇಶಗಳಿಗೆ ನಡೆಯುತ್ತಿರುವ ವಲಸೆ- ಇವರಲ್ಲಿ ಕೆಲವು ತಂದೆಯಂದಿರುಗಳು ಗ್ರಾಮೀಣ ಪ್ರದೇಶಗಳಲ್ಲಿ ರೈತ/ಕಾರ್ಮಿಕರಾಗಿದ್ದರು, ಆದರೆ ಅವರ ಪುತ್ರರು ಕೃಷಿ ಕೆಲಸ ಕಡಮೆ ಇರುವ ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ.

ಕೋಷ್ಟಕ 3 (ಪು 61) ನಗರ ಪ್ರದೇಶಗಳ ಚಲನಶೀಲತೆಯ ಮ್ಯಾಟ್ರಿಕ್ಸ್ ಅನ್ನು ಪ್ರಸ್ತುತಪಡಿಸುತ್ತದೆ. ನಾವು ಕೋಷ್ಟಕದಲ್ಲಿ ಗಮನಿಸಬಹುದಾದಂತೆ, ನಗರ ಪ್ರದೇಶಗಳಲ್ಲಿಯೂ ಕೂಡ ತಂದೆ ಮತ್ತು ಪುತ್ರರು ಒಂದೇ ರೀತಿಯ ಕೆಲಸ ಮಾಡಿಕೊಂಡು ಇರುವಲ್ಲಿ ಹೆಚ್ಚಿನ ನಿರಂತರತೆ ಕಾಣಿಸುತ್ತದೆ. ನಾವು ರೈತರನ್ನು ಪಕ್ಕಕ್ಕಿಟ್ಟು ನೋಡಿದರೆ (ಮೇಲೆ ತಿಳಿಸಿದಂತೆ, ಅವರಶೇಕಡಾವಾರು ಪ್ರಮಾಣ ಅತ್ಯಲ್ಪ), ಕರ್ಣೀಯ ನಮೂದುಗಳು ದೊಡ್ಡ ಪ್ರಮಾಣದಲ್ಲಿವೆ. ಪ್ರಾಥಮಿಕ ವೃತ್ತಿಯಲ್ಲಿ ತೊಡಗಿರುವ ತಂದೆಯಂದಿರ ಸರಿಸುಮಾರು ಅರ್ಧದಷ್ಟು (47.2%) ಮಕ್ಕಳು ಅದೇ ವರ್ಗದಲ್ಲಿ ಮುಂದುವರಿಯುತ್ತಾರೆ ಮತ್ತು ಕೃಷಿ ಕಾರ್ಮಿಕರ ಅರ್ಧಕ್ಕಿಂತ ಹೆಚ್ಚು (54.4%)ಪುತ್ರರು ಕೃಷಿ ಕಾರ್ಮಿಕರಾಗಿ ಅಥವಾ ಪ್ರಾಥಮಿಕ ಉದ್ಯೋಗಗಳಲ್ಲಿ ಕೊನೆಗೊಳ್ಳುತ್ತಾರೆ ಎಂಬುದನ್ನು ಇಲ್ಲಿ ಎತ್ತಿ ತೋರಿಸುವುದು ಯೋಗ್ಯವಾಗಿದೆ.

ನಾವು ಮೇಲೆ ಚರ್ಚಿಸಿದ ಗ್ರಾಮೀಣಪ್ರದೇಶದಿಂದ ನಗರ ಪ್ರದೇಶದೆಡೆಗಿನ ವಲಸೆಯನ್ನು ಗಮನಿಸಿದರೆ, ನಾವು ಅಖಿಲ ಭಾರತ ಮಟ್ಟದ ದೃಷ್ಟಿಕೋನದ ಮೂಲಕ ಚಲನಶೀಲತೆಯನ್ನು ಗಮನಿಸುವುದು ಉತ್ತಮವಾಗಿದೆ. ಕೋಷ್ಟಕ 4 ಅಖಿಲ ಭಾರತ ಮಟ್ಟದ ಪರಿವರ್ತನೆಯ ಮ್ಯಾಟ್ರಿಕ್ಸ್ ಅನ್ನು ಪ್ರಸ್ತುತಪಡಿಸುತ್ತದೆ. ಕರ್ಣೀಯ ಅಂಶವು ಎಲ್ಲ ವರ್ಗಗಳಲ್ಲಿ ಅತಿ ದೊಡ್ಡದಾಗಿದೆ. ಇಲ್ಲಿ ನಾವು ಗಮನಿಸಬೇಕಾದ ಕೆಲವು ವಿಚಾರಗಳಿವೆ: ಕೃಷಿ ಕಾರ್ಮಿಕರ ಅರ್ಧಕ್ಕಿಂತ ಹೆಚ್ಚು ಮಕ್ಕಳು ಕೃಷಿ ಕಾರ್ಮಿಕರಾಗಿಯೇ ಉಳಿದಿದ್ದಾರೆ; ಪ್ರಾಥಮಿಕ ಉದ್ಯೋಗಗಳಲ್ಲಿ ತೊಡಗಿರುವ ವ್ಯಕ್ತಿಗಳ ಸುಮಾರು 48% ರಷ್ಟು ಮಕ್ಕಳು ಪ್ರಾಥಮಿಕ ಉದ್ಯೋಗಗಳಲ್ಲಿಯೇ ಉಳಿದಿದ್ದಾರೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಔದ್ಯೋಗಿಕ ಸ್ತರಗಳ ಅತ್ಯಂತ ಕೆಳಭಾಗದಲ್ಲಿರುವವರಲ್ಲಿ ಅತ್ಯಂತ ಕಡಮೆ ಚಲನಶೀಲತೆ ನಮಗೆ ಗೋಚರಿಸುತ್ತದೆ.

**ಕೋಷ್ಟಕ 3: ಔದ್ಯೋಗಿಕ ಪರಿವರ್ತನಾ ಮ್ಯಾಟ್ರಿಕ್ಸ್, ಭಾರತದ ನಗರ ಪ್ರದೇಶ**

| ತಂದೆಯಂದಿರ ಔದ್ಯೋಗಿಕ ವರ್ಗಗಳು | ಪುತ್ರರ ಔದ್ಯೋಗಿಕ ವರ್ಗಗಳು (ಶೇಕಡಾವಾರು) | | | | | | |
|---|---|---|---|---|---|---|---|
| | 1 | 2 | 3 | 4 | 5 | 6 | 7 |
| (1) | 6.78 | 19.52 | 2.52 | 15.06 | 20.50 | 16.99 | 18.62 |
| (2) | 0.30 | 59.60 | 0.40 | 10.16 | 14.85 | 7.99 | 6.71 |
| (3) | 1.13 | 11.12 | 22.05 | 5.75 | 13.38 | 14.27 | 32.31 |
| (4) | 0.53 | 21.72 | 0.77 | 31.56 | 22.46 | 11.95 | 11.02 |
| (5) | 0.91 | 22.19 | 0.56 | 14.15 | 30.74 | 15.72 | 15.74 |
| (6) | 0.08 | 26.85 | 1.06 | 6.14 | 12.39 | 39.03 | 14.45 |
| (7) | 0.28 | 23.00 | 1.21 | 4.58 | 10.36 | 13.36 | 47.21 |

ಈ ಪ್ರವೃತ್ತಿಯ ಹಿಂದಿನ ಕಾರಣಗಳು ಏನು? ಮೊದಲನೆಯದಾಗಿ, ಈ ಕುರಿತಂತೆ ಔದ್ಯೋಗಿಕ ಆಯ್ಕೆ ಮತ್ತು ಸಂಪತ್ತಿನ ಇತಿಮಿತಿಗಳನ್ನು ಕುರಿತ ಸಾಹಿತ್ಯದಲ್ಲಿ ಸೂಚಿಸಿದಂತೆ (Banerjee and Newman 1993; Bardhan et al 2000ಮತ್ತು ಇವುಗಳಲ್ಲಿರುವ ಉಲ್ಲೇಖಗಳು), ಹಣಕಾಸು ಮಾರುಕಟ್ಟೆಗಳಲ್ಲಿನ ಅಸಮರ್ಪಕತೆಗಳು ಮತ್ತು ಸಂಪತ್ತು/ಮೇಲಾಧಾರದ ಕೊರತೆಯು ಬಡವರು ಉತ್ತಮ ಉದ್ಯೋಗಗಳಿಗೆ ಹೋಗುವುದನ್ನು ತಡೆಯುತ್ತದೆ. ಎರಡನೆಯದಾಗಿ, ಮೇಲ್ಮುಖವಾದ ಚಲನಶೀಲತೆಗೆ ಇರುವ ಒಂದು ಮಾರ್ಗವೆಂದರೆ ಶಿಕ್ಷಣ; ಆದರೆ, ಗುಣಮಟ್ಟದ ಶಿಕ್ಷಣವನ್ನು ಪಡೆಯುವಲ್ಲಿ ಎದುರಾಗುವ ಅಡೆತಡೆಗಳು, ಉದಾ., ಶಿಕ್ಷಕರ ಅತಿಯಾದಗೈರುಹಾಜರಿ, ಇತ್ಯಾದಿ ಕಾರಣಗಳು ಭಾರತದಲ್ಲಿ, ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಶಿಕ್ಷಣದ ಗುಣಮಟ್ಟವನ್ನು ತೀರ ಕಳಪೆಯಾಗಿಸಿವೆ ಎಂಬುದನ್ನು ಈಗಾಗಲೇ ಸಾಕಷ್ಟು ಸಮಂಜಸವಾಗಿ ದಾಖಲಿಸಲಾಗಿದೆ (ಉದಾ., Dreze and Sen 2002; Motiram and Osberg 2011; The Probe Team 1999). ಖಾಸಗಿ ಶಿಕ್ಷಣವು ದುಬಾರಿಯಾಗಿದ್ದು, ಬಡಜನರ ಕೈಗೆ ಎಟುಕುವಂತಿಲ್ಲ. ಇದು ಚಲನಶೀಲತೆಯನ್ನು ಕಡಮೆ ಮಾಡುವ ಒಂದು ಪ್ರಮುಖ ಅಂಶ. ಮೂರನೆಯದಾಗಿ, ಚಲನಶೀಲತೆಗೆ ತಡೆಯಾಗುವ ಇನ್ನೊಂದು ಅಂಶವಾಗಿ ನಾವು ಒಂದೇ ರೀತಿಯ ಸಾಮಾಜಿಕ-ಆರ್ಥಿಕ ಸ್ಥಿತಿ ಅಥವಾ ಹಿನ್ನೆಲೆಯ ವ್ಯಕ್ತಿಗಳ ನಡುವಿನ ವಿವಾಹಗಳನ್ನು (assortative mating

(Weil 2009)) ಪರಿಗಣಿಸಬೇಕು. ಭಾರತದಲ್ಲಿ ಮದುವೆಗಳು ವಿಶೇಷವಾಗಿ ಜಾತಿ ಮತ್ತುಧಾರ್ಮಿಕ ಜಾಲಗಳ ಮಧ್ಯಸ್ಥಿಕೆಗಳ ಮೂಲಕ ನಡೆಯುವುದರಿಂದ, ನಮ್ಮಲ್ಲಿ ಸಮವರ್ಗೀಯ ಮದುವೆಗಳು ಅಧಿಕವಾಗಿವೆ ಎಂದು ವಾದಿಸಲುಗಣನೀಯ ಪುರಾವೆಗಳಿವೆ (ಉದಾ., Munshi and Rosenzweig 2009).

**ಕೋಷ್ಟಕ 4: ಔದ್ಯೋಗಿಕ ಪರಿವರ್ತನಾ ಮ್ಯಾಟ್ರಿಕ್ಸ್, ಅಖಿಲ ಭಾರತ ಮಟ್ಟದಲ್ಲಿ**

| ತಂದೆಯಂದಿರ ಔದ್ಯೋಗಿಕ ವರ್ಗಗಳು | ಪುತ್ರರ ಔದ್ಯೋಗಿಕ ವರ್ಗಗಳು (ಶೇಕಡಾವಾರು) | | | | | | |
|---|---|---|---|---|---|---|---|
| | 1 | 2 | 3 | 4 | 5 | 6 | 7 |
| (1) | 43.25 | 10.16 | 14.75 | 5.08 | 6.38 | 5.24 | 15.14 |
| (2) | 3.49 | 60.54 | 2.63 | 7.92 | 11.27 | 6.74 | 7.41 |
| (3) | 8.91 | 6.79 | 50.33 | 2.21 | 4.44 | 5.78 | 21.54 |
| (4) | 12.51 | 19.77 | 5.14 | 25.4 | 16.83 | 9.74 | 10.61 |
| (5) | 6.72 | 20.90 | 4.68 | 11.18 | 27.00 | 12.21 | 17.30 |
| (6) | 5.45 | 25.37 | 4.63 | 4.42 | 8.81 | 37.11 | 14.21 |
| (7) | 4.32 | 21.66 | 7.10 | 2.82 | 7.03 | 9.28 | 47.79 |

ಭಾರತೀಯ ಸನ್ನಿವೇಶದಲ್ಲಿ ನಾವು ವಿಶೇಷವಾಗಿ ಚಲನಶೀಲತೆಯ ಮೇಲೆ ಜಾತಿ ಬೀರುವ ಪರಿಣಾಮಗಳನ್ನು ಪರಿಗಣಿಸಬೇಕಾಗುತ್ತದೆ. ಹಾಗಾಗಿ ನಾವು ನಮ್ಮ ಅಧ್ಯಯನದಲ್ಲಿ "ಪರಿಶಿಷ್ಟ ಜಾತಿ ಮತ್ತು ಪಂಗಡಗಳು" (SC ಮತ್ತು ST) ಮತ್ತು "ಅನುಸೂಚಿತವಲ್ಲದ ಗುಂಪುಗಳು" (SCs/ST ಅಲ್ಲದವರು)- ಇವುಗಳಚಲನಶೀಲತೆಯನ್ನು ಪ್ರತ್ಯೇಕವಾಗಿ ಪರಿಶೀಲಿಸುತ್ತೇವೆ. SC/STಗಳು ಮತ್ತು SC/STಗಳಲ್ಲದ ಸಮುದಾಯಗಳ ಪರಿವರ್ತನೆಯ ಮ್ಯಾಟ್ರಿಕ್ಸ್‌ಗಳನ್ನು ಕ್ರಮವಾಗಿ ಕೋಷ್ಟಕ5 ಮತ್ತು 6 ರಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಎರಡೂ ವರ್ಗಗಳಲ್ಲೂ ನಾವು ಗಣನೀಯ ಪ್ರಮಾಣದಲ್ಲಿ ಅಂತರ್ಪೀಳಿಗೆ ನಡುವೆಒಂದೇ ಉದ್ಯೋಗದಮುಂದುವರಿಕೆಯನ್ನು ಹಿಂದಿನಂತೆ (ಕರ್ಣೀಯ ನಮೂದುಗಳಿಂದ) ಗಮನಿಸಬಹುದು. ಆದರೂ ಕೂಡ ನಾವು ಕೆಲವು ವ್ಯತ್ಯಾಸಗಳನ್ನು ಗಮನಿಸುವುದು ಮುಖ್ಯವಾಗಿದೆ. ಉನ್ನತ ಸ್ಥಾನಮಾನದ ಉದ್ಯೋಗಗಳಲ್ಲಿSC/STಗಳು SC/STಗಳಲ್ಲದವರಿಗಿಂತ ಕಡಮೆ ಮುಂದುವರಿಕೆಯನ್ನು ತೋರಿಸುತ್ತಾರೆ; ಉದಾ., ವೃತ್ತಿಪರರಲ್ಲಿ ನಾವು 4.4% ಅಂಕಗಳ ವ್ಯತ್ಯಾಸವನ್ನು ಕಾಣುತ್ತೇವೆ. ಇದಕ್ಕೆ ವ್ಯತಿರಿಕ್ತವಾಗಿ, ಔದ್ಯೋಗಿಕ ಶ್ರೇಣಿಯ ಕೆಳಸ್ತರದಲ್ಲಿರುವ (ಅಂದರೆ, ಕೃಷಿ ಕಾರ್ಮಿಕರು ಮತ್ತು ಪ್ರಾಥಮಿಕ ಉದ್ಯೋಗಗಳು)ಉದ್ಯೋಗಗಳಲ್ಲಿ SC/ST ಗಳ ಮುಂದುವರಿಕೆ SC/ST ಗಳಲ್ಲದವರಿಗೆ ಹೋಲಿಸಿದರೆ ಹೆಚ್ಚು;[20] ಉದಾ, ಕೃಷಿ ಕಾರ್ಮಿಕರಲ್ಲಿ 14.4% ಅಂಕಗಳ ವ್ಯತ್ಯಾಸ ಕಾಣಸಿಗುತ್ತದೆ.

**ಕೋಷ್ಟಕ 5: ಔದ್ಯೋಗಿಕ ಪರಿವರ್ತನಾ ಮ್ಯಾಟ್ರಿಕ್ಸ್: SC/ST ಸಮುದಾಯಕ್ಕೆ ಸೇರಿದವರು, ಅಖಿಲ ಭಾರತ**

| ತಂದೆಯಂದಿರ ಔದ್ಯೋಗಿಕ ವರ್ಗಗಳು | ಪುತ್ರರ ಔದ್ಯೋಗಿಕ ವರ್ಗಗಳು (ಶೇಕಡಾವಾರು) | | | | | | |
|---|---|---|---|---|---|---|---|
| | 1 | 2 | 3 | 4 | 5 | 6 | 7 |

| | | | | | | | |
|---|---|---|---|---|---|---|---|
| (1) | 36.31 | 6.92 | 21.76 | 3.96 | 5.49 | 4.77 | 20.79 |
| (2) | 1.10 | 56.85 | 4.30 | 7.81 | 9.33 | 7.33 | 13.28 |
| (3) | 7.06 | 3.70 | 57.25 | 1.92 | 3.11 | 4.83 | 22.13 |
| (4) | 9.09 | 10.8 | 13.14 | 21.73 | 15.72 | 9.71 | 19.82 |
| (5) | 4.54 | 13.79 | 9.00 | 6.25 | 27.56 | 11.92 | 26.95 |
| (6) | 3.81 | 20.02 | 8.84 | 5.07 | 8.86 | 27.76 | 25.64 |
| (7) | 3.68 | 14.18 | 7.73 | 3.12 | 6.17 | 9.65 | 55.47 |

(1) ರೈತರು; (2) ಕೃಷಿಯೇತರ ಸ್ವಂತ ಉದ್ಯೋಗದಲ್ಲಿರುವವರು; (3) ಕೃಷಿ ಕಾರ್ಮಿಕರು; (4) ವೃತ್ತಿಪರರು, ಅಧಿಕಾರಿಗಳು ಮತ್ತು ಇತರೆ ಸಂಬಂಧಿತ ಉದ್ಯೋಗದಲ್ಲಿರುವವರು; (5) ಗುಮಾಸ್ತರು, ಸೇವಾ ಕಾರ್ಯಕರ್ತರು, ನುರಿತ ಕೃಷಿ ಮತ್ತು ಮೀನುಗಾರಿಕೆ ಕೆಲಸಗಾರರು ಮತ್ತುಸಂಬಂಧಿತ ಉದ್ಯೋಗದಲ್ಲಿರುವವರು; (6) ಕುಶಲಕರ್ಮಿಗಳು, ಕಾರ್ಖಾನೆ ಕೆಲಸಗಾರರು ಮತ್ತು ಇತರೆ ಸಂಬಂಧಿತ ಉದ್ಯೋಗದಲ್ಲಿರುವವರು; (7)ಪ್ರಾಥಮಿಕ ಉದ್ಯೋಗಗಳು ಮತ್ತು ಇತರೆ. II. SCs/STs- ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು. III. ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವ SC/ST ಗಳ (ಪುತ್ರರು) ಶೇಕಡಾವಾರುಗಳು (1)-(7) ಕ್ರಮವಾಗಿ 18.38, 7.94, 32.52, 3.95, 6.18, 6.94 ಮತ್ತು 24.08.

ಮೂಲ: IHDS (2004-05) ಆಧಾರದ ಮೇಲೆ ಲೇಖಕರು ಮಾಡಿದ ಲೆಕ್ಕಾಚಾರಗಳು.

ಭಾರತೀಯ ಸಂದರ್ಭದಲ್ಲಿ (ಮತ್ತು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಚರ್ಚಿತವಾಗಿರುವಂತಹ) ಆಸಕ್ತಿದಾಯಕವಾದ ಮತ್ತೊಂದು ಪ್ರಮುಖ ವಿಷಯವೆಂದರೆ "ಕೆಳಮುಖ ಚಲನೆ" - ಅಂತರ್ಪೀಳಿಗೆ(ಅಂತರ್ವ್ಯಕ್ತಿ)ಯ ಸಂದರ್ಭದಲ್ಲಿ, ಇದು ಪುತ್ರರು (ವ್ಯಕ್ತಿಗಳು) ಅವರ ತಂದೆಗೆ ಹೋಲಿಸಿದರೆ, ಕಡಮೆ ಸಾಮಾಜಿಕ-ಆರ್ಥಿಕ ಸ್ಥಿತಿ(ಅವರ ಹಿಂದಿನ ಸ್ಥಿತಿ)ಗೆಇಳಿಯುವುದನ್ನು ಪ್ರತಿಬಿಂಬಿಸುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ, ವಿಶೇಷವಾಗಿ ಅಮೇರಿಕ ಸಂಯುಕ್ತ ಸಂಸ್ಥಾನ ಮತ್ತು ಇಂಗ್ಲೆಂಡಿನಲ್ಲಿ ಗಣನೀಯ ಪ್ರಮಾಣದಲ್ಲಿ ಕೆಳಮುಖ ಚಲನೆಯನ್ನು ದಾಖಲಾಗಿದ್ದು, ಅದು ಇನ್ನೂ ಹೆಚ್ಚುತ್ತಿದೆ ಎಂದು ವಾದಿಸಲಾಗಿದೆ (Acs 2011; Giddens 2009: 466). ವೈವಾಹಿಕ ಸ್ಥಿತಿ, ಲಿಂಗ ಮತ್ತು ಜನಾಂಗಕೆಳಮುಖ ಚಲನೆಗೆ ಪ್ರಮುಖ ಕಾರಣಗಳು ಎಂದು ಅಧ್ಯಯನದಿಂದ ತಿಳಿದುಬಂದಿದೆ. ಉದಾ., ಕಪ್ಪು ಜನಾಂಗದ ಪುರುಷರಲ್ಲಿ ಬಿಳಿಯ ಜನಾಂಗದ ಪುರುಷರಿಗಿಂತ ಹೆಚ್ಚಿನ ಕೆಳಮುಖ ಚಲನೆ ಗೋಚರಿಸುತ್ತದೆ(Acs 2011).

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ನಾವು ನಮ್ಮ ಅಧ್ಯಯನದಲ್ಲಿ ತಮ್ಮ ಹಿಂದಿನ ಉದ್ಯೋಗಗಳನ್ನು ಕಳೆದುಕೊಂಡು ಕೃಷಿ ಕಾರ್ಮಿಕರಾಗುವ ಅಥವಾ ಪ್ರಾಥಮಿಕ ವೃತ್ತಿಗಿಳಿಯುವ SC/ST ಸಮುದಾಯಕ್ಕೆ ಸೇರಿದ ಮತ್ತು ಸೇರದೆ ಇರುವ ವ್ಯಕ್ತಿಗಳ ಗಂಡುಮಕ್ಕಳ ಶೇಕಡಾವಾರು ಪ್ರಮಾಣವನ್ನು ಪರಿಶೀಲಿಸುತ್ತೇವೆ. ನಾವು (ಕೋಷ್ಟಕ5 ಮತ್ತು 6ರ ಅಂಕಣ (3) ಮತ್ತು (7)ನ್ನು ಹೋಲಿಸುವ ಮೂಲಕ) ತಂದೆಯಂದಿರ ಪ್ರತಿಯೊಂದು ಔದ್ಯೋಗಿಕ ವರ್ಗದಲ್ಲಿ SC/ST ಗಳಲ್ಲಿ (SCs/ST ಗಳಲ್ಲದವರಿಗೆ ಹೋಲಿಸಿದರೆ) ಪುತ್ರರು ಗಣನೀಯ ಪ್ರಮಾಣದಲ್ಲಿ ಕೃಷಿ ಕಾರ್ಮಿಕರಾಗುವ ಅಥವಾ ಪ್ರಾಥಮಿಕ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳುವುದನ್ನು ನೋಡುತ್ತೇವೆ. ಒಂದು ಕುತೂಹಲಕಾರಿ ಅಂಶ ಏಕೆಂದರೆ, ಗಂಡುಮಕ್ಕಳು ಕೃಷಿ ಕಾರ್ಮಿಕರಾಗುವ ರೈತ ಕುಟುಂಬಗಳ ಪೈಕಿ (ಇದು ಕುಟುಂಬದಲ್ಲಿಬೆಳೆ ನಷ್ಟ ಅಥವಾ ಅನಾರೋಗ್ಯದಂತಹ ಆಘಾತಗಳಿಂದಾಗಿರಬಹುದು) -ವಿಶೇಷವಾಗಿ SC/ST ಸಮುದಾಯಗಳಲ್ಲಿ ಅಂತರ್ಪೀಳಿಗೆಯ ಸಂದರ್ಭದಲ್ಲಿ ನೋಡುವುದಾದರೆ ಗಂಡುಮಕ್ಕಳು ತಮ್ಮ ತಂದೆ ಸ್ವತಃ ಮಾಡಿಕೊಂಡಿದ್ದಂತಹ ಬೇಸಾಯ ವೃತ್ತಿಯನ್ನು ಬಿಟ್ಟು ಕೃಷಿ ಕಾರ್ಮಿಕರಾಗಿ ಬದಲಾವಣೆ ಹೊಂದುವ ಸಾಧ್ಯತೆ SCs/ST ಅಲ್ಲದವರಿಗಿಂತ 9.5% ಹೆಚ್ಚಾಗಿದೆ. SC/STಸಮುದಾಯಕ್ಕೆ ಸೇರಿದ ರೈತರ ಮಕ್ಕಳು ಪ್ರಾಥಮಿಕ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳುವ ಸಾಧ್ಯತೆ ಕೂಡ 7.7%ರಷ್ಟು ಹೆಚ್ಚು.

**ಕೋಷ್ಟಕ 6: ಔದ್ಯೋಗಿಕ ಪರಿವರ್ತನಾ ಮ್ಯಾಟ್ರಿಕ್ಸ್ : SC/ST ಸಮುದಾಯಕ್ಕೆ ಸೇರದವರು, ಅಖಿಲ ಭಾರತ**

| ತಂದೆಯಂದಿರ ಔದ್ಯೋಗಿಕ ವರ್ಗಗಳು | ಪುತ್ರರ ಔದ್ಯೋಗಿಕ ವರ್ಗಗಳು (ಶೇಕಡಾವಾರು) | | | | | | |
|---|---|---|---|---|---|---|---|
| | **1** | **2** | **3** | **4** | **5** | **6** | **7** |
| (1) | 45.74 | 11.32 | 12.23 | 5.48 | 6.7 | 5.41 | 13.12 |
| (2) | 3.74 | 60.92 | 2.45 | 7.93 | 11.47 | 6.68 | 6.81 |

| | | | | | | | |
|---|---|---|---|---|---|---|---|
| (3) | 10.91 | 10.13 | 42.87 | 2.51 | 5.87 | 6.81 | 20.9 |
| (4) | 13.22 | 21.63 | 3.48 | 26.16 | 17.06 | 9.74 | 8.70 |
| (5) | 7.29 | 22.77 | 3.54 | 12.48 | 26.86 | 12.29 | 14.77 |
| (6) | 5.94 | 26.96 | 3.37 | 4.22 | 8.8 | 39.89 | 10.82 |
| (7) | 4.65 | 25.50 | 6.78 | 2.67 | 7.47 | 9.09 | 43.85 |

ಇಲ್ಲಿಯವರೆಗಿನ ಚರ್ಚೆಯಲ್ಲಿ, ಪರಿವರ್ತನೆಯ ಮ್ಯಾಟ್ರಿಕ್ಸ್‌ಗಳಲ್ಲಿನ ಕರ್ಣೀಯ ನಮೂದುಗಳ ಮೇಲೆ ನಮ್ಮ ನಿರ್ಣಯಗಳನ್ನು ಮಂಡಿಸಿದ್ದೇವೆ, ಹಾಗೆಯೇ ಅನೌಪಚಾರಿಕನೆಲೆಯಲ್ಲಿ ಸ್ಥಾಯಿತ್ವದ ಕಲ್ಪನೆ(notion of persistence)ಯನ್ನು ಕೂಡ ಆಧಾರವಾಗಿಟ್ಟುಕೊಂಡಿದ್ದೇವೆ. ಇದನ್ನು ಇನ್ನೂ ಹೆಚ್ಚು ಸಮಗ್ರವಾಗಿ ಪರಿಶೋಧಿಸಲು ಸಮೀಕ್ಷೆಯ ಮಾದರಿಯನ್ನು ಎರಡು ಗುಂಪುಗಳಾಗಿ ವಿಭಜಿಸಬಹುದು- ತಮ್ಮ ತಂದೆಯ ಉದ್ಯೋಗವನ್ನೇ ಮುಂದುವರಿಸುತ್ತಿರುವವರು ಮತ್ತು ತಂದೆಗಿಂತ ಭಿನ್ನವಾದ ಉದ್ಯೋಗದಲ್ಲಿ ತೊಡಗಿಕೊಂಡಿರುವವರು. ಅನಂತರ ನಾವು ಮಗನು ಸ್ವಂತ ಶಿಕ್ಷಣ, ಕುಟುಂಬದ ಗಾತ್ರ, ಜಾತಿ, ಇತ್ಯಾದಿಯಾಗಿ ವಿವರಿಸಬಹುದಾದ ಅಂಶಗಳ ಆಧಾರದ ಮೇರೆಗೆ ತಂದೆಗಿಂತ ಭಿನ್ನವಾದ ಶಿಕ್ಷಣ ಮತ್ತು ಉದ್ಯೋಗ ಪಡೆಯುವ ಸಾಧ್ಯತೆಯನ್ನು ಪ್ರತಿಗಮನ (regression)ವಿಧಾನದ ಮೂಲಕ ಲೆಕ್ಕಹಾಕಬಹುದು [ಪ್ರತಿಗಮನ ವಿಧಾನ ಎಂದರೆ ಸ್ವತಂತ್ರ ಮತ್ತು ಅವಲಂಬೀ ಚಲಗಳ ನಡುವಿನ ಸಂಬಂಧವನ್ನು ಅಳತೆ ಮಾಡುವ ವಿಧಾನ]. ಆದರೆ ಇದನ್ನು ಮಾಡುವಾಗ ನಮಗೆ ದತ್ತಾಂಶಗಳ ಇತಿಮಿತಿಗಳ ಕಾರಣಕ್ಕೆ (IHDSನಲ್ಲಿ ಲಭ್ಯವಾಗುವದತ್ತಾಂಶ ಮಾತ್ರವಲ್ಲದೆ, ಐತಿಹಾಸಿಕ ಮಾಹಿತಿಯ ಕೊರತೆ ಇರುವ ದತ್ತಾಂಶ ಸೇರಿದಂತೆ, ಉದಾ, NSS ದತ್ತಾಂಶ), ಹಲವು ಸಮಸ್ಯೆಗಳು ಎದುರಾಗುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸೂಕ್ತ ಮಾಹಿತಿಯ ಕೊರತೆ[21]ಅಥವಾ ದಿಕ್ಕು ತಪ್ಪಿಸುವ ಮಾಹಿತಿ[22]ಈ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಅಷ್ಟೇ ಅಲ್ಲದೆ, ದತ್ತಾಂಶಗಳನ್ನು ವಿಶ್ಲೇಷಿಸುವಾಗ ಹೊಸ ಅರ್ಥಗಳು ಹುಟ್ಟಿಕೊಳ್ಳುವ ಅಥವಾ ಪೂರ್ವಗ್ರಹದಿಂದ ಕೆಲವೊಂದು ದತ್ತಾಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಹೋಗುವ ಸಾಧ್ಯತೆ ಇರುತ್ತದೆ. ಅಷ್ಟೇ ಅಲ್ಲದೆ, ಈ ಪ್ರಕ್ರಿಯೆಯಲ್ಲಿ ತಂದೆ ಮತ್ತು ಮಕ್ಕಳ ಉದ್ಯೋಗವನ್ನು ಹೋಲಿಸುವ ಸಂದರ್ಭದಲ್ಲಿ ಗಂಡುಮಕ್ಕಳ ಉದ್ಯೋಗ ತಂದೆಯ ಉದ್ಯೋಗಕ್ಕೆ ಎಷ್ಟು "ಹತ್ತಿರ"ವಾಗಿದೆ ಅಥವಾ "ದೂರ'ವಾಗಿದೆ ಎಂಬುದನ್ನು ಗುರುತಿಸುವಲ್ಲಿ ಎಡವುವ ಸಾಧ್ಯತೆ ಇರುತ್ತದೆ. ಇಷ್ಟೆ ಅಲ್ಲದೆ, ಚಲನಶೀಲತೆಯನ್ನು ಅರ್ಥಮಾಡಿಕೊಳ್ಳುವಲ್ಲಿ ನಿರಂತರತೆಗೆ ಒಂದು ಸಹಜವಾದ ಆಕರ್ಷಣೆ ಇದ್ದರೂ ಸಹ ಅದು ಕೇವಲ ಒಂದು ಮಾನದಂಡವಷ್ಟೆ. ಉದಾಹರಣೆಗೆ, ಚಲನಶೀಲತೆಯನ್ನು ಅರ್ಥಮಾಡಿಕೊಳ್ಳಲು ನಾವು ಒಗ್ಗೂಡುವಿಕೆ (convergence) (Geweke et al 1986)ಯ ಪರಿಕಲ್ಪನೆಯನ್ನು ಸಹ ಬಳಸಿಕೊಳ್ಳಬಹುದು. ಚಲನಶೀಲತೆಯ ಮಾಪನಕ್ಕೆ ಸಂಬಂಧಿಸಿದ ಸಾಹಿತ್ಯದಲ್ಲಿಲೇಖಕರು ಹಲವಾರು ಮಾನದಂಡಗಳನ್ನು ಪರಿಗಣಿಸಿದ್ದಾರೆ ಮತ್ತು ಈ ಮಾನದಂಡಗಳ ಆಧಾರದ ಮೇಲೆ ಚಲನಶೀಲತೆಯ ಮಾಪನಗಳನ್ನು ಅಭಿವೃದ್ಧಿಪಡಿಸಿದ್ದಾರೆ.[23]

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನೋಡುವುದಾದರೆ, ಮೇಲೆ ಚರ್ಚಿಸಿದ ಇತಿಮಿತಿಗಳಿರುವ ಪ್ರತಿಗಮನವಿಶ್ಲೇಷಣೆಯನ್ನು ಬಳಸುವ ಬದಲು, ಚಲನಶೀಲತೆಯನ್ನು ಅರ್ಥಮಾಡಿಕೊಳ್ಳಲು ಇದಕ್ಕೆ ಸಂಬಂಧಿಸಿದ ಸಾಹಿತ್ಯದಲ್ಲಿ ಅಭಿವೃದ್ಧಿಪಡಿಸಿದ ಕ್ರಮಗಳನ್ನು ಬಳಸುತ್ತೇವೆ. ಈ ಸಾಹಿತ್ಯದ ವ್ಯಾಪ್ತಿ ದೊಡ್ಡದಾಗಿದ್ದು, ಅದು ಇನ್ನೂ ವಿಕಸನಗೊಳ್ಳುತ್ತಿರುವ ಹಂತದಲ್ಲೇ ಇರುವುದರಿಂದ ಅದರ ವಿಮರ್ಶೆ ಪ್ರಸ್ತುತ ಲೇಖನದ ವ್ಯಾಪ್ತಿಯನ್ನು ಮೀರಿದೆ. ಬದಲಿಗೆ, ನಾವು ಸಾಮಾನ್ಯವಾಗಿ ಬಳಸಲಾಗುವ ಕೆಲವು ಕ್ರಮಗಳ ಸಂಕ್ಷಿಪ್ತ ವಿವರಣೆಯನ್ನು (ನಿರ್ದಿಷ್ಟವಾಗಿ Formby et al 2004; Shorrocks 1978; Sommers and Conlisk 1979; Van De Gaer et al 2000ಆಧರಿಸಿದ) ಪ್ರಸ್ತುತಪಡಿಸುತ್ತೇವೆ.

Let $p_{ij}$ (i,j=1,…,m) be the entry in the $i^{th}$ row and $j^{th}$ column of the transition matrix (T), i.e, it is the probability that the son's occupational category is j given that his father's occupational category is i. m is the number of occupational categories.

ಪರಿವರ್ತನಾ ಮ್ಯಾಟ್ರಿಕ್ಸ್(transition matrix ((T)) ನಲ್ಲಿ iನ ಸಾಲು ಮತ್ತು jಕಲಮಿನಲ್ಲಿ $p_{ij}$(i,j=1,…,m)ನಮೂದಾಗಿರಲಿ. ಅಂದರೆ, ಅದು ತಂದೆಯ ಔದ್ಯೋಗಿಕ ವರ್ಗವು iಆಗಿರುವುದರಿಂದ ಮಗನ ಔದ್ಯೋಗಿಕ ವರ್ಗವು j ಆಗಿರುವ ಸಂಭವನೀಯತೆಯನ್ನು ಸೂಚಿಸುತ್ತದೆ. m ಎಂಬುದು ಔದ್ಯೋಗಿಕ ವರ್ಗಗಳ ಸಂಖ್ಯೆ.

The first measure,

$$M_1 = \frac{1}{m}\sum_{i=1}^{m}\sum_{\substack{j=1 \\ i\neq j}}^{m} p_{ij} = (1 - \frac{1}{m}\sum_{i=1}^{m} p_{ii})$$

is the probability that a son (or the expected proportion of sons) will leave the father's occupational category. It can also be interpreted as the normalised distance between the transition matrix and the identity matrix of order m. Note that the identity matrix (which comprises of a leading diagonal of 1's and the rest of the entries as 0's) represents perfect immobility since whatever the occupational category of the father be, the son falls in the same category (i e, with probability one). This measure has a limitation that we have already discussed (in the context of regression analysis) – it only looks at whether the son leaves the father's occupation or not without taking into account the "distance" between the occupations of the father and son. This limitation is taken care of by the next measure:

ಮೊದಲ ಮಾಪನವು

$$M_1 = \frac{1}{m}\sum_{i=1}^{m}\sum_{\substack{j=1 \\ i\neq j}}^{m} p_{ij} = (1 - \frac{1}{m}\sum_{i=1}^{m} p_{ii}) \quad (1)$$

ಮಗ (ಅಥವಾ ನಿರೀಕ್ಷಿತ ಪ್ರಮಾಣದಲ್ಲಿ ಗಂಡುಮಕ್ಕಳು), ತಂದೆಯ ಔದ್ಯೋಗಿಕ ವರ್ಗವನ್ನು ತೊರೆಯುವ ಸಂಭವನೀಯತೆಯಾಗಿದೆ. ಇದನ್ನು ಆರ್ಡರ್ m ನಪರಿವರ್ತನಾ ಮ್ಯಾಟ್ರಿಕ್ಸ್ ಮತ್ತು ಗುರುತಿನ ಮ್ಯಾಟ್ರಿಕ್ಸ್ ನಡುವಿನ ಸಾಮಾನ್ಯಅಂತರ ಎಂದು ಸಹ ಅರ್ಥೈಸಬಹುದು. ಗುರುತಿನ ಮ್ಯಾಟ್ರಿಕ್ಸ್ (ಇದು 1 ರ ಪ್ರಮುಖ ಕರ್ಣವನ್ನು ಮತ್ತು ಉಳಿದ ನಮೂದುಗಳಲ್ಲಿ ಸೊನ್ನೆಯನ್ನು ಒಳಗೊಂಡಿರುತ್ತದೆ), ತಂದೆಯ ಔದ್ಯೋಗಿಕ ವರ್ಗವು ಯಾವುದೇ ಆಗಿರಲಿ, ಮಗ ಅದೇ ವರ್ಗಕ್ಕೆ ಸೇರುತ್ತಾನೆ (ಅಂದರೆ, ಸಂಭವನೀಯತೆ1ರೊಂದಿಗೆ) ಎಂಬ ಕಾರಣಕ್ಕೆ ಪರಿಪೂರ್ಣ ನಿಶ್ಚಲತೆಯನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಗಮನಿಸಿ. ಈ ಮಾಪನವು ನಾವು ಈಗಾಗಲೇ ಚರ್ಚಿಸಿದ ಮಿತಿಯನ್ನು ಹೊಂದಿದೆ (ಪ್ರತಿಗಮನವಿಶ್ಲೇಷಣೆಯ ಸಂದರ್ಭದಲ್ಲಿ) - ಇದು ತಂದೆ ಮತ್ತು ಮಗನ ಉದ್ಯೋಗಗಳ ನಡುವಿನ "ಅಂತರ"ವನ್ನು ಗಣನೆಗೆ ತೆಗೆದುಕೊಳ್ಳದೆಯೇ

ಮಗನು ತಂದೆಯ ಉದ್ಯೋಗವನ್ನು ತೊರೆಯುತ್ತಾನೆಯೇ ಅಥವಾ ಇಲ್ಲವೇ ಎಂಬುದನ್ನು ಮಾತ್ರ ನೋಡುತ್ತದೆ. ಈ ಮಿತಿಯನ್ನು ಮುಂದಿನ ಮಾಪನವು ಸರಿದೂಗಿಸುತ್ತದೆ:

$$M_2 = \frac{1}{m(m-1)} \sum_{i=1}^{m} \sum_{j=i}^{m} p_{ij} |i-j| \qquad (2)$$

Note that there are a total of m(m-1) transitions possible between a father's occupation and a son's occupation. Also, for a given occupation of the father (i), the expected distance m between the occupations of the father and son is $\sum_{j=1}^{m} P_{ij} \mid i-j \mid$[24]

ತಂದೆಯ ಉದ್ಯೋಗ ಮತ್ತು ಮಗನ ಉದ್ಯೋಗದ ನಡುವೆ ಒಟ್ಟು m(m-1) ಪರಿವರ್ತನೆಗಳು ಸಾಧ್ಯ ಎಂಬುದನ್ನು ಗಮನಿಸಿ. ಅಲ್ಲದೆ, ತಂದೆಯ ಒಂದು ನಿರ್ದಿಷ್ಟ ಉದ್ಯೋಗಕ್ಕೆ ಸಂಬಂಧಿಸಿದಂತೆ (i), ತಂದೆ ಮತ್ತು ಮಗನ ಉದ್ಯೋಗಗಳ ನಡುವಿನ ನಿರೀಕ್ಷಿತ ಅಂತರವು $\sum_{j=1}^{m} P_{ij} |i-j|$ ಆಗಿರುತ್ತದೆ.[24]

Several measures based upon eigen values of the transition matrix have been proposed, eigen values being linked to the speed of convergence to the steady state for a Markov process. The speed of convergence can be interpreted as an indication of the mobility – the faster the convergence occurs, the higher is the mobility.[25] Let λi (i=1, …, m) denote the I th eigen value of the transition matrix in non-increasing order. It is worthwhile to mention that the largest eigen value is 1 since T is a matrix whose entries in each row add up to 1. One measure based on eigen values is:

$$M_3 = 1 - |\lambda_2| \quad (3)$$

ಪರಿವರ್ತನೆಯ ಮ್ಯಾಟ್ರಿಕ್ಸ್‌ನ ಐಜೆನ್ ಮೌಲ್ಯಗಳ ಆಧಾರದ ಮೇಲೆ ಹಲವಾರು ಮಾಪನಗಳನ್ನು ಪ್ರಸ್ತಾವಿಸಲಾಗಿದೆ, ಮಾರ್ಕೋವ್ ಪ್ರಕ್ರಿಯೆಯ ಸ್ಥಿರಸ್ಥಿತಿಯತ್ತ ಒಮ್ಮುಖವಾಗಿ ಹೋಗುವ ವೇಗಕ್ಕೆ ಐಜೆನ್ ಮೌಲ್ಯಗಳನ್ನು ಜೋಡಿಸಲಾಗಿದೆ. ಒಮ್ಮುಖದ ವೇಗವನ್ನು ಚಲನಶೀಲತೆಯ ಸೂಚಕವಾಗಿ ಅರ್ಥೈಸಬಹುದು -ಎಷ್ಟು ವೇಗವಾಗಿ ಅಭಿಗಮನ (ಒಮ್ಮುಖ)ಸಂಭವಿಸುತ್ತದೆಯೋ, ಅಷ್ಟೇ ಹೆಚ್ಚು ಚಲನಶೀಲತೆ ಇರುತ್ತದೆ.[25]Let $\lambda_i (i = 1, \dots, m)$ denote the i[th] eigen value of the transition matrix in non-increasing order.ಅತ್ಯಂತ ದೊಡ್ಡ ಐಜೆನ್ ಮೌಲ್ಯ 1, ಏಕೆಂದರೆT ಮ್ಯಾಟ್ರಿಕ್ಸ್ ನ ಪ್ರತಿ ಸಾಲಿನಲ್ಲಿನ ನಮೂದುಗಳ ಮೊತ್ತ1ಆಗಿದೆ ಎಂಬುದನ್ನು ನಾವು ಇಲ್ಲಿ ಹೇಳುವುದು ಉಚಿತ. ಐಜೆನ್ ಮೌಲ್ಯವನ್ನು ಆಧಾರವಾಗಿಟ್ಟುಕೊಂಡಿರುವ ಒಂದು ಮಾಪನ ಎಂದರೆ:

$$M_3 = 1 - |\lambda_2| \quad (3)$$

where $|\lambda_2|$ is the absolute value of the second largest eigen value. We can also consider the average of λ2, λ3,..., λm. Considering the geometric mean would give us:

$$M_4 = 1 - (|\prod_{i=2}^{m} \lambda_i |)^{1/(m-1)} = 1 - (det(T))^{1/(m-l)}$$

ಇಲ್ಲಿ |λ2 | ಎರಡನೆಯ ಅತಿ ದೊಡ್ಡ ಐಜೆನ್ ಮೌಲ್ಯದ ಸಂಪೂರ್ಣ ಮೌಲ್ಯವಾಗಿದೆ. ನಾವು $\lambda_2, \lambda_{3,...,}\lambda_m$.ನ ಸರಾಸರಿಯನ್ನು ಸಹ ಪರಿಗಣಿಸಬಹುದು. ಜ್ಯಾಮಿತೀಯ ಸರಾಸರಿಯನ್ನು ಪರಿಗಣಿಸಿದಾಗ ನಮಗೆ:

$$M_4 = 1 - (|\prod_{i=2}^{m} \lambda_i |)^{1/(m-1)} = 1 - (det(T))^{1/(m-l)} \quad (4)$$

where “det(T)” is the determinant of T. Considering the arithmetic mean would again give us a different measure:

$$M_5 = \left(1 - \frac{\sum_2^m |\lambda_i|}{m-1}\right) = \frac{(m-trace(T))}{m-1} \quad (5)$$

ಇಲ್ಲಿ "det(T)" ಎಂಬುದು T ಯ ನಿರ್ಣಾಯಕವಾಗಿದೆ. ಅಂಕಗಣಿತದ ಸರಾಸರಿಯನ್ನು ಪರಿಗಣಿಸಿದಾಗ ನಮಗೆ ಮತ್ತೆ ಬೇರೆಯೇ ಮಾಪನ ದೊರಕುತ್ತದೆ:

$$M_5 = \left(1 - \frac{\sum_2^m |\lambda_i|}{m-1}\right) = \frac{(m-trace(T))}{m-1} \quad (5)$$

Note that we are subtracting from 1 so that we can obtain a measure of mobility, rather than immobility.

ನಾವು 1 ರಿಂದ ಕಳೆಯುತ್ತಿದ್ದೇವೆ ಎಂಬುದನ್ನು ಗಮನಿಸಿ, ಇದರಿಂದ ನಮಗೆ ನಿಶ್ಚಲತೆಯ ಬದಲಿಗೆ ಚಲನಶೀಲತೆಯ ಪ್ರಮಾಣ ದೊರಕಬಹುದು.

ಕೋಷ್ಟಕ 7 ರಲ್ಲಿ (ಪು 63), ನಾವು ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಮಾತ್ರವಲ್ಲದೆ ಅಖಿಲ ಭಾರತ ಮಟ್ಟಕ್ಕೆ ಮೇಲೆ ಕೊಟ್ಟಿರುವ ಚಲನಶೀಲತೆಯ ಮಾಪನಕ್ರಮ(mobility measures)ಗಳನ್ನು ಪ್ರಸ್ತುತಪಡಿಸುತ್ತೇವೆ. $M_5$, $M_1$ ಅನ್ನು ಹೋಲುವುದರಿಂದ ಮತ್ತು ಅದೇ ಫಲಿತಾಂಶಗಳನ್ನು ನೀಡುವುದರಿಂದ (ಹೋಲಿಕೆಯಲ್ಲಿ), ನಾವು ಅದನ್ನು ಬಿಟ್ಟು, ಮೊದಲ ನಾಲ್ಕು ಅಳತೆಗಳ ಅಂದಾಜುಗಳನ್ನು ಮಾತ್ರ ಪ್ರಸ್ತುತಪಡಿಸುತ್ತೇವೆ. ಕೋಷ್ಟಕ 7ರಲ್ಲಿ ಕೊಟ್ಟಿರುವಂತೆ, ಮೇಲೆ ವಿವರಿಸಿದ ಎಲ್ಲ ಮಾಪನಕ್ರಮಗಳ ಪ್ರಕಾರ, ಗ್ರಾಮೀಣ ಪ್ರದೇಶಗಳಲ್ಲಿ ಚಲನಶೀಲತೆ ನಗರ ಪ್ರದೇಶಗಳಲ್ಲಿರುವುದಕ್ಕಿಂತ ಕಡಮೆಯಾಗಿದೆ ಎಂಬುದನ್ನು ನಾವು ಗಮನಿಸಬಹುದು. ಇದು ಆಶ್ಚರ್ಯವೇನಲ್ಲ, ಏಕೆಂದರೆ ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿ ಸಾಕಷ್ಟು ಔದ್ಯೋಗಿಕ ವೈವಿಧ್ಯ ಇದೆ. ಇದಲ್ಲದೆ, ಚಲನಶೀಲತೆಗೆ ಕಾರಣವಾಗುವ ಅಂಶಗಳು (ಉದಾಹರಣೆಗೆ,

ಶೈಕ್ಷಣಿಕ ಅವಕಾಶಗಳು ಮತ್ತು ಸಾಲದ ಲಭ್ಯತೆ; ಜನರನ್ನು ನಿರ್ದಿಷ್ಟವಾದ ಜಾತಿ ಮತ್ತು ಧಾರ್ಮಿಕ ಗುಂಪುಗಳನ್ನು ಕೆಲವೇ ಉದ್ಯೋಗಗಳಿಗೆ ಬಂಧಿಸುವ ಸಾಮಾಜಿಕ ನಿಯಮಗಳು ಸಡಿಲವಾಗಿರುವುದು, ಇತ್ಯಾದಿ) ನಗರ ಪ್ರದೇಶಗಳಲ್ಲಿ ಬಲವಾಗಿರಬಹುದು. SC/ST ಮತ್ತು SC/ST ಅಲ್ಲದ ವ್ಯಕ್ತಿಗಳ ನಡುವಿನ ಚಲನಶೀಲತೆಯ ಹೋಲಿಕೆಯು ಅಸ್ಪಷ್ಟವಾಗಿದೆ ಏಕೆಂದರೆ ಕೆಲವು ಮಾಪನಕ್ರಮಗಳು SC/ST ಅಲ್ಲದ ವ್ಯಕ್ತಿಗಳಲ್ಲಿ ಚಲನಶೀಲತೆ ಹೆಚ್ಚಾಗಿದೆ ಎಂದು ಸೂಚಿಸುತ್ತವೆ ಆದರೆ ಇತರ ಕೆಲವು ಮಾಪನಕ್ರಮಗಳು ಇದಕ್ಕೆ ವ್ಯತಿರಿಕ್ತ ಫಲಿತಾಂಶವನ್ನು ಸೂಚಿಸುತ್ತವೆ. SC/ST ಮತ್ತು SC/ST ಅಲ್ಲದ ವ್ಯಕ್ತಿಗಳ ನಡುವೆ ಪರಿವರ್ತನೆಯ ಮ್ಯಾಟ್ರಿಕ್ಸ್‌ಗಳ ಆಧಾರದ ಮೇಲೆ ನಡೆಸಿದ ಹಿಂದಿನ ಚರ್ಚೆಯ ಬೆಳಕಿನಲ್ಲಿ ಇದನ್ನು ಮತ್ತೆ ಪರಿಶೀಲಿಸಿದಾಗ ಇದು ಸರಿಯೆನ್ನಿಸುತ್ತದೆ. ನಾವು ಈಗಾಗಲೇ ಗಮನಿಸಿದಂತೆ, SC/ST ಸಮುದಾಯದ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಕೆಳಮುಖ ಚಲನೆ (ಅಂದರೆ, ಕೃಷಿ ಕಾರ್ಮಿಕ ಮತ್ತು ಪ್ರಾಥಮಿಕ ಉದ್ಯೋಗಗಳಿಗೆ) ಹೆಚ್ಚಾಗಿದ್ದರೆ, ಕೆಲವು ಉನ್ನತ ಮಟ್ಟದ ಉದ್ಯೋಗಗಳಲ್ಲಿ (ಉದಾಹರಣೆಗೆ, ವೃತ್ತಿಪರರು) ಅವರು ಮುಂದುವರಿಯುವುದು (ನಿರಂತರತೆ) ಕಡಮೆ ಇದೆ. ನಾವು ಗಮನಿಸಬೇಕಾದ ಆಸಕ್ತಿಯ ಮತ್ತೊಂದು ವಿಷಯವೆಂದರೆ ಹಿಂದುಳಿದ ರಾಜ್ಯಗಳು ಮತ್ತು ತುಲನಾತ್ಮಕವಾಗಿ ಅಭಿವೃದ್ಧಿ ಹೊಂದಿರುವರಾಜ್ಯಗಳ ನಡುವೆ ಗೋಚರಿಸುವ ವ್ಯತ್ಯಾಸ. ಆದ್ದರಿಂದ ನಾವು ಈ ಮಾಪನಕ್ರಮಗಳನ್ನು ಸಾಮಾನ್ಯವಾಗಿ ಹಿಂದುಳಿದಿರುವ ರಾಜ್ಯಗಳ ಗುಂಪು (ಬಿಹಾರ, ಜಾರ್ಖಂಡ್, ಛತ್ತೀಸ್‌ಗಢ, ಮಧ್ಯಪ್ರದೇಶ, ರಾಜಸ್ಥಾನ, ಉತ್ತರಾಖಂಡ, ಉತ್ತರ ಪ್ರದೇಶ ಮತ್ತು ಒರಿಸ್ಸಾ) ಮತ್ತು ಮುಂದುವರಿದಿರುವ ರಾಜ್ಯಗಳಿಗೆ ಅನ್ವಯಿಸುತ್ತೇವೆ. ಆದರೆ ಹೋಲಿಕೆಯಲ್ಲಿ ನಮಗೆ ಅಸ್ಪಷ್ಟತೆ ಗೋಚರಿಸುತ್ತದೆ.

**ಕೋಷ್ಟಕ 7:ಅಂತರ್ -ಔದ್ಯೋಗಿಕ ವರ್ಗಗಳ ಪರಿವರ್ತನೆಯ ಮ್ಯಾಟ್ರಿಕ್ಸ್‌ಗಾಗಿ ಚಲನಶೀಲತೆಯ ಸ್ಕೇಲಾರ್ ಸೂಚಕಗಳು**

| | | $M_1$ | $M_2$ | $M_3$ | $M_4$ |
|---|---|---|---|---|---|
| ವಿಭಾಗ | ಗ್ರಾಮೀಣ | 0.585 | 0.281 | 0.506 | 0.716 |
| | ನಗರ | 0.661 | 0.304 | 0.651 | 0.806 |
| ಜಾತಿ | SC/STಯೇತರ | 0.591 | 0.274 | 0.524 | 0.715 |
| | SC/ST | 0.596 | 0.271 | 0.455 | 0.724 |
| ರಾಜ್ಯಗಳು | ಹಿಂದುಳಿದ ರಾಜ್ಯಗಳು | 0.609 | 0.296 | 0.462 | 0.747 |
| | ಇತರ ರಾಜ್ಯಗಳು | 0.572 | 0.255 | 0.480 | 0.692 |
| ವಯಸ್ಸಿನ ಗುಂಪುಗಳು | 20-30 ವಯಸ್ಸಿನವರು | 0.624 | 0.291 | 0.501 | 0.783 |
| | 31 - 40 ವಯಸ್ಸಿನವರು | 0.613 | 0.281 | 0.527 | 0.746 |
| | 41 - 50 ವಯಸ್ಸಿನವರು | 0.587 | 0.270 | 0.450 | 0.713 |
| | 51 - 65 ವಯಸ್ಸಿನವರು | 0.547 | 0.259 | 0.452 | 0.661 |
| ಅಖಿಲ ಭಾರತ | | 0.584 | 0.270 | 0.483 | 0.708 |

(1) ಈ ಕ್ರಮಗಳ ವಿವರಣೆಗಾಗಿ, ಪುಟ 14-15 ನೋಡಿ. (2) ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು. (3)ಹಿಂದುಳಿದ ರಾಜ್ಯಗಳು - ಬಿಹಾರ, ಜಾರ್ಖಂಡ್, ಛತ್ತೀಸ್‌ಗಢ, ಮಧ್ಯಪ್ರದೇಶ, ರಾಜಸ್ಥಾನ, ಉತ್ತರಾಖಂಡ, ಉತ್ತರ ಪ್ರದೇಶ, ಒಡಿಶಾ

ಮೂಲ: IHDS (2004-05) ಆಧಾರದ ಮೇಲೆ ಲೇಖಕರ ಲೆಕ್ಕಾಚಾರಗಳು.

ನಾವು 20-65 ವರ್ಷ ವಯಸ್ಸಿನ ಪುರುಷರ ಮೇಲೆ ಗಮನ ಕೇಂದ್ರೀಕರಿಸಿರುವುದರಿಂದ, ನಮ್ಮ ಸಮೀಕ್ಷೆಯ ಮಾದರಿಯು ಬಹಳ ದೀರ್ಘಾವಧಿಯ ಅಂತರದಲ್ಲಿ ಜನಿಸಿದ ವ್ಯಕ್ತಿಗಳನ್ನು ಒಳಗೊಂಡಿದೆ - 1940ರಿಂದ 1980ರವರೆಗೆ (ಸಮೀಕ್ಷೆಯನ್ನು2004-05ರಲ್ಲಿ ಕೈಗೊಳ್ಳಲಾಗಿದೆ). ಆದ್ದರಿಂದ, ಗಂಡು ಮಕ್ಕಳನ್ನು ವಿವಿಧ ವಯೋಮಾನದ ಗುಂಪುಗಳಾಗಿ ವಿಂಗಡಿಸಿದ್ದೇವೆ: 20-30 ವರ್ಷಗಳು, 30-40 ವರ್ಷಗಳು, 40-50 ವರ್ಷಗಳು ಮತ್ತು 50-65 ವರ್ಷಗಳು (ಜನನ ಕ್ರಮವಾಗಿ 1970-80, 1960-70, 1950-60 ಮತ್ತು 1940-50) ಮತ್ತು ಪ್ರತಿ ಗುಂಪಿನ ಚಲನಶೀಲತೆಯನ್ನು ಪ್ರತ್ಯೇಕವಾಗಿ ಪರಿಗಣಿಸಿದ್ದೇವೆ. ಸ್ಥಳಾವಕಾಶದ ಇತಿಮಿತಿಯ ಕಾರಣಕ್ಕೆನಾವು ಈ ಗುಂಪುಗಳಿಗೆ ಅನ್ವಯಿಸಿದ ಪರಿವರ್ತನೆಯ ಮ್ಯಾಟ್ರಿಕ್ಸ್ ಅನ್ನು ಪ್ರಸ್ತುತಪಡಿಸಿಲ್ಲ, ಆದರೆ ಚಲನಶೀಲತೆಯ ಮಾಪನವನ್ನು ಕೋಷ್ಟಕ 7ರಲ್ಲಿ ಪ್ರಸ್ತುತಪಡಿಸಿದ್ದೇವೆ. 1970-80ರ ದಶಕದಲ್ಲಿ ಜನಿಸಿದವರು ತಮಗಿಂತ ಮೊದಲು ಜನಿಸಿದವರಿಗೆ ಹೋಲಿಸಿದರೆ ಹೆಚ್ಚಿನ ಚಲನಶೀಲತೆಯನ್ನು ಪ್ರದರ್ಶಿಸುತ್ತಾರೆ (ಚಲನಶೀಲತೆಯ ಎಲ್ಲ ಮಾಪನಗಳ ಪ್ರಕಾರ); 1960-70 ರ ದಶಕದಲ್ಲಿ ಜನಿಸಿದವರಲ್ಲೂ ಇದೇ ರೀತಿಯ ಫಲಿತಾಂಶ ಕಾಣಸಿಗುತ್ತದೆ. ಇದಕ್ಕೆ ಕಾಲಾಂತರದಲ್ಲಿ ಔದ್ಯೋಗಿಕ ಮತ್ತು ಇತರ (ಉದಾಹರಣೆಗೆ, ಸಾಲ ಸೌಲಭ್ಯ, ಇತ್ಯಾದಿ) ಅವಕಾಶಗಳಲ್ಲಿ ನಡೆದಿರಬಹುದಾದ ಸಾಮಾನ್ಯ ಸುಧಾರಣೆಕಾರಣ ಎಂದು ನಾವು ಇದನ್ನು ಅರ್ಥೈಸಬಹುದು.ಆದಾಗ್ಯೂ, ಈ ಪ್ರಕ್ರಿಯೆಯು ಯಾವಾಗ ಪ್ರಾರಂಭವಾಯಿತು, ಅಂದರೆ ಪ್ರಮುಖ ಬದಲಾವಣೆ ಯಾವಾಗದಿಂದ ಶುರುವಾಯಿತು ಎಂದು ನಿಖರವಾಗಿ ಪತ್ತೆಹಚ್ಚಲು ಸಾಧ್ಯವಿಲ್ಲ. ಅಲ್ಲದೆ, ಕೆಳಮಟ್ಟದ ಉದ್ಯೋಗಗಳಲ್ಲಿ ಜನರ ಮುಂದುವರಿಕೆಯು ಕಾಲಾಂತರದಲ್ಲಿ ಸ್ಥಿರವಾಗಿ ಕಡಮೆಯಾಗುತ್ತಾ ಬರುವುದನ್ನು ತೋರಿಸಿಲ್ಲ - ಈ ಗುಂಪಿನಲ್ಲಿಇರುವ ಪ್ರಾಥಮಿಕ ಉದ್ಯೋಗಗಳಲ್ಲಿ ತೊಡಗಿರುವ ತಂದೆಯಂದಿರ ಗಂಡು ಮಕ್ಕಳು ಕೂಡ ಅದೇ ಉದ್ಯೋಗದಲ್ಲಿ ಮುಂದುವರಿದಿರುವ ಶೇಕಡಾವಾರು ಪ್ರಮಾಣ ಕ್ರಮವಾಗಿ 56%, 51%, 45% ಮತ್ತು 44%; ಇದಕ್ಕೆ ಸಮಾನವಾಗಿ ಕೃಷಿ ಕಾರ್ಮಿಕರಿಗೆ ಅನ್ವಯವಾಗುವ ಅಂಕಿಅಂಶಗಳು ಕ್ರಮವಾಗಿ 45%, 52%, 51% ಮತ್ತು 50%.

**4. ಚರ್ಚೆ ಮತ್ತು ತೀರ್ಮಾನಗಳು**

ಪ್ರಸ್ತುತ ಅಧ್ಯಯನದಲ್ಲಿ, ಭಾರತದಲ್ಲಿನ ಔದ್ಯೋಗಿಕ ಚಲನಶೀಲತೆಯನ್ನು ದಾಖಲಿಸಲು ಮತ್ತು ವಿಶ್ಲೇಷಿಸಲು ನಾವು IHDS ದತ್ತಾಂಶವನ್ನು ಬಳಸಿದ್ದೇವೆ. ಈ ಉದ್ದೇಶಕ್ಕಾಗಿ ನಾವು ಪರಿವರ್ತನೆಯ ಮ್ಯಾಟ್ರಿಕ್ಸ್ ಮತ್ತು ಚಲನಶೀಲತೆಯ ಮಾಪನಗಳನ್ನು ಬಳಸಿದ್ದೇವೆ. ನಮ್ಮ ಅಧ್ಯಯನದಲ್ಲಿ ನಮಗೆ ಗಣನೀಯವಾದ ಔದ್ಯೋಗಿಕ ನಿಶ್ಚಲತೆ ಕಂಡುಬರುತ್ತದೆ, ಅದೂ ಕೂಡ ವಿಶೇಷವಾಗಿ ಕಡಮೆ-ಕೌಶಲ್ಯ ಮತ್ತು ಕಡಮೆ-ವೇತನದ ಉದ್ಯೋಗಗಳಲ್ಲಿ. ಗ್ರಾಮೀಣ ಪ್ರದೇಶಗಳಲ್ಲಿ ಚಲನಶೀಲತೆ ನಗರ ಪ್ರದೇಶಗಳಿಗಿಂತ ಕಡಮೆಯಾಗಿದೆ ಎಂದು ಕೂಡ ನಮ್ಮ ಅಧ್ಯಯನ ತೋರಿಸುತ್ತದೆ. SC/ST ಮತ್ತು SC/STಯೇತರ ಜಾತಿ ಗುಂಪುಗಳ ಹೋಲಿಕೆಯು ಅಸ್ಪಷ್ಟ ಫಲಿತಾಂಶವನ್ನುತೋರಿಸುತ್ತದೆ, ಅಂದರೆ, ಒಂದು ಗುಂಪಿನ ಚಲನಶೀಲತೆ ಇನ್ನೊಂದಕ್ಕಿಂತ ಹೆಚ್ಚಿದೆಯೇ ಇಲ್ಲವೇ ಎಂದು ನಾವು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಆದಾಗ್ಯೂ, SC/STಗಳಲ್ಲಿ ನಮಗೆ ಗಣನೀಯ (ಮತ್ತು ಹೆಚ್ಚಿನ) ಪ್ರಮಾಣದ ಕೆಳಮುಖ ಚಲನೆ ಗೋಚರಿಸುತ್ತದೆ. ವಿಶೇಷವಾಗಿ ಕಡಮೆ-ಕೌಶಲ್ಯ ಮತ್ತು ಕಡಮೆ-ವೇತನದ ಉದ್ಯೋಗಗಳಲ್ಲಿ ನಮಗೆ ಹೆಚ್ಚಿನ ಮಟ್ಟದ ನಿಶ್ಚಲತೆಯು ಕಂಡುಬರುವುದು ಭಾರತದಲ್ಲಿ ಅವಕಾಶದ ಗಣನೀಯ ಅಸಮಾನತೆ ಇದೆ ಎಂಬುದನ್ನು ಸೂಚಿಸುತ್ತದೆ.[26]

ಶ್ರೀಮಂತರ ಪ್ರಾತಿನಿಧ್ಯ IHDS ಸಮೀಕ್ಷೆಯಲ್ಲಿ ಕಡಮೆ ಇರುವುದರಿಂದ (NSSಸೇರಿದಂತೆ ಇತರ ರಾಷ್ಟ್ರೀಯ ಸಮೀಕ್ಷೆಗಳಂತೆ), ನಿಜವಾದ ನಿಶ್ಚಲತೆ ಮತ್ತು ಅವಕಾಶದ ಅಸಮಾನತೆ ನಾವು ದಾಖಲಿಸಿದ್ದಕ್ಕಿಂತ ಹೆಚ್ಚಾಗಿದೆ ಎಂದು ನಾವು ನಂಬುತ್ತೇವೆ. ನಾವು ಬಳಸಿದ ದತ್ತಾಂಶಗಳ ಮಿತಿಗಳನ್ನು ಗಮನದಲ್ಲಿಟ್ಟುಕೊಂಡು, ನಾವು ನಮ್ಮ ವಾದ ಸಮರ್ಥನೆಗಳಲ್ಲಿ ಹೆಚ್ಚು

ಜಾಗರೂಕರಾಗಿರಲು ಬಯಸುತ್ತೇವೆ. ಈ ವಿಶ್ಲೇಷಣೆಯುಭಾರತದಲ್ಲಿ ವರ್ಗ ಮತ್ತು ಔದ್ಯೋಗಿಕ ಚಲನಶೀಲತೆಯ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವ ನಮ್ಮ ಮೊದಲ ಪ್ರಯತ್ನ ಎಂದು ನಾವು ಹೇಳಲು ಬಯಸುತ್ತೇವೆ.

ನಮ್ಮ ಅಧ್ಯಯನವನ್ನು ಭಾರತದಲ್ಲಿ ಈಗಾಗಲೇ ನಡೆದಿರುವ ಔದ್ಯೋಗಿಕ ಚಲನಶೀಲತೆಯ ಕುರಿತಾಗಿನ ಇತರ ಅಧ್ಯಯನಗಳ ಜೊತೆಗೆ ಹೋಲಿಸಿ ನೋಡುವುದು ಆಸಕ್ತಿದಾಯಕವಾಗಬಹುದು. ಆದರೆ, ನಾವು ಆಗಲೇ ಹೇಳಿದಂತೆ, ನಮ್ಮಲ್ಲಿ ಇಂತಹ ಅಧ್ಯಯನಗಳ ಕೊರತೆಯಿದೆ. ಇದಕ್ಕೆ ಸಂಬಂಧಿಸಿದಂತಹ ಮತ್ತು ಇತ್ತೀಚೆಗೆ ನಡೆದ ಅಧ್ಯಯನವೊಂದು (Hnatkovska et al 2011) 1980ರ ದಶಕದಿಂದೀಚೆಗಿನ NSS ದತ್ತಾಂಶವನ್ನ ಆಧರಿಸಿ, ಅಂತರ್ಪೀಳಿಗೆಯ ನಡುವಿನ ಶೈಕ್ಷಣಿಕ, ಔದ್ಯೋಗಿಕ ಮತ್ತು ಆದಾಯದಲ್ಲಿನ  ಚಲನಶೀಲತೆಯನ್ನು ನೋಡುವ ಮೂಲಕ ಜಾತಿಯ ಸಮಸ್ಯೆಯ ಮೇಲೆ ತನ್ನ ಗಮನವನ್ನು ಹೆಚ್ಚಾಗಿ ಕೇಂದ್ರೀಕರಿಸಿದೆ. ಅದರೆ ನಮ್ಮ ಅಧ್ಯಯನ ವಸ್ತು, ವಿಧಾನ ಮತ್ತು ದತ್ತಂಶಗಳು ಅವರದಕ್ಕಿಂತ ಭಿನ್ನವಾಗಿವೆ. ಕಳೆದ ಎರಡು ದಶಕಗಳಲ್ಲಿ ದೇಶದಲ್ಲಿ ನಡೆದ ಪರಿವರ್ತನೆಗಳು ಚಲನಶೀಲತೆಗೆ ಜಾತಿ ಒಡ್ಡುವ ಅಡೆತಡೆಗಳನ್ನು ಒಡೆಯಲು ಕಾರಣವಾಗಿವೆ ಎಂಬವಿಶಾಲ ನಿರ್ಣಯಕ್ಕೆ ಅವರು ಬರುತ್ತಾರೆ.[27] ಅಂತರ್ಪೀಳಿಗೆಯ ನಡುವಿನ ಚಲನಶೀಲತೆಯಅಧ್ಯಯನಗಳಿಗೆ ಸಂಬಂಧಿಸಿದಂತೆ NSS ದತ್ತಾಂಶದ ಇತಿಮಿತಿಗಳನ್ನು ಗಮನಿಸಿದರೆ, ಮತ್ತು ಅವರ ಪ್ರತಿಗಮನಆಧಾರಿತ ವಿಧಾನ(regression-based methodology)ದ ಕಾರಣಕ್ಕೆ, ಅವರ ಅಧ್ಯಯನಗಳು ಕೇವಲ ಸೂಚಕಗಳಂತೆ ಮತ್ತು ತುಂಬ ಆಶಾವಾದಿಯಾಗಿರುವಂತೆ ನಮಗೆ ಕಾಣಿಸುತ್ತವೆ. ಅವರ ಅಧ್ಯಯನದಲ್ಲಿ ಪ್ರಸ್ತುತಪಡಿಸಲಾದ ಪರಿವರ್ತನೆಯ ಮ್ಯಾಟ್ರಿಕ್ಸ್ ಳು ಕೇವಲ ಮೂರು ಔದ್ಯೋಗಿಕ ವಿಭಾಗಗಳನ್ನು ಬಳಸುತ್ತವೆ, ಆದ್ದರಿಂದ ನಮ್ಮ ವಿಶ್ಲೇಷಣೆ ಮತ್ತು ನಾವು ಕಂಡುಕೊಂಡ ಅಂಶಗಳೊಂದಿಗೆ ಅವರ ಅಧ್ಯಯನದ ಫಲಿತಾಂಶಗಳ ಹೋಲಿಕೆ ಸಮಸ್ಯಾತ್ಮಕವಾಗಿದೆ. ಆದರೆ, ನಾವು ಇದನ್ನು ನಿರ್ಲಕ್ಷಿಸಿ, 2004-05ಕ್ಕೆ ಅವರು ಮಾಡಿರುವ ಅಂದಾಜುಗಳನ್ನು ಪರಿಶೀಲಿಸಿದರೆ (ಇದು ಸೂಕ್ತ ಸಂಬಂಧಿತ ಹೋಲಿಕೆ), ಅವರ ಕರ್ಣೀಯ ನಮೂದುಗಳು ಸಾಕಷ್ಟು ಹೆಚ್ಚಿರುವುದನ್ನು ನಾವು ಗಮನಿಸಬಹುದು;ಅದರಲ್ಲೂ ವಿಶೇಷವಾಗಿ ಕೆಳಸ್ತರದ ಔದ್ಯೋಗಿಕ ವರ್ಗಕ್ಕೆ - SC ಅಲ್ಲದವರಿಗೆ ಮತ್ತು SC/ST ಗಳಿಗೆ ಕ್ರಮವಾಗಿ77% ಮತ್ತು 79%. ಮೇಲಾಗಿ, SC/STಯೇತರರಿಗೆ ಹೋಲಿಸಿದರೆSC/STಗಳಿಗೆ ಅವರು ಮಾಡಿರುವ ಅಂದಾಜುಗಳು ಸಹ ಹೆಚ್ಚಿನ ಕೆಳಮುಖ ಚಲನೆಯನ್ನು (ಪುತ್ರರು ಅತ್ಯಂತ ಕೆಳಸ್ತರಕ್ಕೆ ಇಳಿಯುವುದನ್ನು) ತೋರಿಸುತ್ತವೆ.

ಇತರ ದೇಶಗಳಲ್ಲಿ ನಡೆದ ಅಧ್ಯಯನಕ್ಕೆ (ವಿಶೇಷವಾಗಿ ಅಭಿವೃದ್ಧಿ ಹೊಂದಿದ ಜಗತ್ತಿನ) ಹೋಲಿಸುವುದು ಕೂಡ, ನಮ್ಮ ದೇಶ ಮತ್ತು ಈ ದೇಶಗಳ ನಡುವಿನ ಗಮನಾರ್ಹವಾದ ಸಾಮಾಜಿಕ-ಆರ್ಥಿಕ ಮತ್ತು ಸಾಂಸ್ಥಿಕ ವ್ಯತ್ಯಾಸಗಳಿಂದಾಗಿ ಸಮಸ್ಯಾತ್ಮಕವಾಗಬಹುದು. ಆದಾಗ್ಯೂ, ನಮ್ಮ ಸಂಶೋಧನೆಗಳನ್ನು ಸೂಕ್ತ ದೃಷ್ಟಿಕೋನದಿಂದ ನೋಡಲು ನಾವು ಕೆಲವು ಇತರ ದೇಶಗಳ ಫಲಿತಾಂಶಗಳನ್ನು ಪ್ರಸ್ತುತಪಡಿಸುತ್ತೇವೆ. CogneauandMesple-Somps (2008, ಕೋಷ್ಟಕ 5) ಆಯ್ದ ಆಫ್ರಿಕನ್ ದೇಶಗಳಲ್ಲಿನ ಔದ್ಯೋಗಿಕ ಚಲನಶೀಲತೆಯನ್ನು ವ್ಯಕ್ತಿಗಳನ್ನು ರೈತರು, ರೈತರಲ್ಲದವರು ಮತ್ತು ನಿಷ್ಕ್ರಿಯ ವ್ಯಕ್ತಿಗಳು (ಉದಾ, ವಿದ್ಯಾರ್ಥಿಗಳು) ಎಂದು ವರ್ಗೀಕರಿಸಿ ವಿಶ್ಲೇಷಿಸುತ್ತಾರೆ. ಈ ದೇಶಗಳಲ್ಲಿ ರೈತರಾಗಿ ಕೊನೆಗೊಳ್ಳುವ ರೈತರ ಮಕ್ಕಳ ಪಾಲು ಭಾರತಕ್ಕಿಂತ ಹೆಚ್ಚಿದೆ (ಭಾರತದ 43.25% ಗೆ ಹೋಲಿಸಿದರೆ ಉಗಾಂಡಾದಲ್ಲಿ 71%). ಅಭಿವೃದ್ಧಿ ಹೊಂದಿದ ದೇಶಗಳಿಗೆ ಸಂಬಂಧಿಸಿದಂತೆ (ಉತ್ತರ ಅಮೆರಿಕ ಮತ್ತು ಇಂಗ್ಲೆಂಡ್ ಅಧ್ಯಯನಕ್ಕೆ, Long and Ferrie(2005, ಕೋಷ್ಟಕ 1) ನೋಡಿ,  ಇದು ಹಳೆಯ ದತ್ತಾಂಶವನ್ನು ಪ್ರಸ್ತುತಪಡಿಸುತ್ತದೆಯಾದರೂ, ನಮಗೆ ಇಲ್ಲಿ ರೈತರಾಗಿ ಮುಂದುವರಿಯುವ ರೈತರ ಮಕ್ಕಳಪಾಲು ಭಾರತಕ್ಕೆ ಹೋಲಿಸಿದರೆ ತುಂಬ ಕಡಮೆ (20.9%) ಎಂಬುದು ಗಮನಕ್ಕೆ ಬರುತ್ತದೆ. ಕೌಶಲ್ಯರಹಿತ ಕಾರ್ಮಿಕರಿಗೆ ಸಂಬಂಧಿಸಿದಂತೆ ಇದೇ ರೀತಿಯ ಫಲಿತಾಂಶವನ್ನು ಗಮನಿಸಬಹುದು. ಭಾರತದಲ್ಲಿನ ಔದ್ಯೋಗಿಕ ಚಲನಶೀಲತೆಯ ಕ್ರಮಾಂಕ ಬಡ ಹಿಂದುಳಿದ ದೇಶಗಳು (ಆಫ್ರಿಕಾದ) ಮತ್ತು ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳ ನಡುವೆ ಎಲ್ಲೋ ಇದೆ ಎಂದು ನಾವು ವಾದಿಸಬಹುದು.

ಪರಸ್ಪರ ಮತ್ತು ಅಂತರ್ಪೀಳಿಗೆಯ ಚಲನಶೀಲತೆಯ ವಿಶ್ಲೇಷಣೆಯು ಒಂದು ಮುಖ್ಯವಾದ ಕೆಲಸ ಎಂದು ನಾವು ನಂಬುತ್ತೇವೆ. ಈ ವಿಷಯವನ್ನು ಕುರಿತು ಭಾರತದಲ್ಲಿ ಹೆಚ್ಚಿನ ಅಧ್ಯಯನ ಕೈಗೊಳ್ಳಲು ಉತ್ತಮ ಗುಣಮಟ್ಟದ ದತ್ತಾಂಶದ ಕೊರತೆ ಕಾರಣ ಎಂದು ನಾವು ನಂಬುತ್ತೇವೆ. ನಮ್ಮ ಅಧ್ಯಯನವು ಜನರನ್ನು ಅಥವಾ ಪೀಳಿಗೆಗಳನ್ನು ಕಾಲಾಂತರದಲ್ಲಿ ಅನುಸರಿಸಿ ಉತ್ತಮ ಗುಣಮಟ್ಟದ ದತ್ತಾಂಶ ಸಂಗ್ರಹಿಸಿ, ಭವಿಷ್ಯದಲ್ಲಿ ಚಲನಶೀಲತೆಯ ಕುರಿತು ಹೆಚ್ಚಿನ ಅಧ್ಯಯನಗಳನ್ನು ಕೈಗೊಳ್ಳಲು ಸಾಕಷ್ಟು ಪ್ರೇರಣೆಒದಗಿಸಿದೆ ಎಂದು ನಾವು ನಂಬುತ್ತೇವೆ.

---

**ಟಿಪ್ಪಣಿಗಳು:**

1. ಭಾರತದ ಅಭಿವೃದ್ಧಿಯ ಒಂದು ಸಮಗ್ರ ನೋಟಕ್ಕಾಗಿ Balakrishnan (2010)ಪರಾಮರ್ಶಿಸಿ.
2. ಸಂಬಂಧಿತ ಅಧ್ಯಯನಗಳ ಪಟ್ಟಿದೀರ್ಘವಾಗಿದೆ, ಆದರೆ ಉಲ್ಲೇಖಿಸಬಹುದಾದ ಇತ್ತೀಚಿನಎರಡು ಅಧ್ಯಯನಗಳೆಂದರೆ, Bardhan (2010) ಮತ್ತುPanagariya (2008). ಕ್ರಮವಾಗಿ, Awakening Giants, Feet of Clay: Assessing the Economic Rise of Indiaಮತ್ತು China and India, The Emerging Giant.ಇವುಗಳ ಶೀರ್ಷಿಕೆಗಳಿಂದಲೇ ಅಧ್ಯಯನದ ವಿಷಯವಸ್ತು ಸ್ಪಷ್ಟವಾಗುತ್ತದೆ.
3. ಶೈಕ್ಷಣಿಕ ಮತ್ತು ಆಡಳಿತ ನೀತಿಗೆ ಸಂಬಂಧಿಸಿದ ವಲಯಗಳಲ್ಲಿ 'ಎಲ್ಲರನ್ನು ಒಳಗೊಂಡ ಅಭಿವೃದ್ಧಿ' (inclusive growth) ಎಂಬ ಅಂಶಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಗಮನ ಕೊಡುತ್ತಿರುವುದು ಈ ಕುರಿತಾಗಿನ ಕಾಳಜಿಯನ್ನುಪ್ರತಿಫಲಿಸುತ್ತದೆ. ಹನ್ನೊಂದನೇ ಪಂಚವಾರ್ಷಿಕ ಯೋಜನೆಯು (2007-12) 'ಎಲ್ಲರನ್ನು ಒಳಗೊಂಡ ಅಭಿವೃದ್ಧಿ'ಯನ್ನು ಒಂದು ಪ್ರಮುಖ ಉದ್ದೇಶವಾಗಿ (ಯೋಜನಾ ಆಯೋಗ 2011) ಪರಿಗಣಿಸಿತು. 'ಎಲ್ಲರನ್ನು ಒಳಗೊಂಡ ಅಭಿವೃದ್ಧಿ'ಯ ಶೈಕ್ಷಣಿಕ ಚರ್ಚೆಗಾಗಿ Dev (2008) ಪರಾಮರ್ಶಿಸಿ.
4. ಕೆಲವು ನಿರ್ದಿಷ್ಟ ಪ್ರದೇಶಗಳಮೇಲೆ ಗಮನ ಕೇಂದ್ರೀಕರಿಸಿ ನಡೆಸಿದ ಕೆಲವು ಹಳೆಯ ಅಧ್ಯಯನಗಳಿವೆ: ತಮಿಳುನಾಡಿನ ಗೋಕಿಲಾಪುರಂ ಗ್ರಾಮಕ್ಕೆ ಸಂಬಂಧಿಸಿದಂತೆ Swaminathan (1991), ಪೂನಾದ Horan(1974) ಮತ್ತು ನಾಗ್ಪುರ ಕುರಿತಂತೆ Driver (1962). ಅಂತರ್ಪೀಳೀಗೆಯ ನಡುವಿನ ಚಲನಶೀಲತೆಯುಹಲವಾರು ದೇಶಗಳಲ್ಲಿ ಸಂಶೋಧನೆ ಮತ್ತು ಅಧ್ಯಯನ ಕೈಗೊಳ್ಳಲು ಸಮೃದ್ಧವಾದ ಕ್ಷೇತ್ರವಾಗಿದೆ (ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳೆರಡರಲ್ಲೂ). ಉದಾ., Long and Ferrie (2005) (US ಮತ್ತು UK); Solon (1992, 2002) (US), Bowles et al (2005) (US); Behrman et al (2001) (ದಕ್ಷಿಣ ಅಮೆರಿಕ - ಬ್ರೆಜಿಲ್, ಕೊಲಂಬಿಯಾ, ಮೆಕ್ಸಿಕೊ ಮತ್ತು ಪೆರು), Jantti et al (2006) (ಪೂರ್ವ ಯುರೋಪಿನ ದೇಶಗಳು, US ಮತ್ತು UK), Cogneau and Mesple-Somps (2008) (ಆಫ್ರಿಕಾ - ಐವರಿ ಕೋಸ್ಟ್, ಘಾನಾ, ಗಿನೀ, ಮಡಗಾಸ್ಕರ್ ಮತ್ತು ಉಗಾಂಡಾ).
5. ಈ ನಿಟ್ಟಿನಲ್ಲಿ ನಾವು ಗಮನಿಸಬಹುದಾದ ಆಸಕ್ತಿದಾಯಕವಾದ ಉದಾಹರಣೆಯೆಂದರೆ ಯು.ಎಸ್.ಎ. ಹಲವಾರು ಲೇಖಕರು (ಉದಾಹರಣೆಗೆ, Long and Ferrie (2005) ಮತ್ತು ಅವರ ಅಧ್ಯಯನದಲ್ಲಿ ಬರುವ ಉಲ್ಲೇಖಗಳು) ಯುರೋಪಿಯನ್ ದೇಶಗಳಿಗೆ ಹೋಲಿಸಿದರೆ, ಸಮಾಜವಾದಿ ಪಕ್ಷಗಳ ಪುನರ್ವಿತರಣೆ ಮತ್ತು ಪ್ರಾಮುಖ್ಯವು ಹೆಚ್ಚಿನ ಚಲನಶೀಲತೆಯ ಕಾರಣಕ್ಕಾಗಿ ಕಡಮೆಯಾಗಿದೆ ಎಂದು ವಾದಿಸುತ್ತಾರೆ. ಆದರೆ ಈಗ ನಮಗೆ ಈ "ಅಮೆರಿಕ ಉಳಿದೆಲ್ಲ ರಾಷ್ಟ್ರಗಳಿಗಿಂಗ ಭಿನ್ನ" ಎಂಬುದು ಕೇವಲ ಅಭಿಪ್ರಾಯವಷ್ಟೆ -ಮತ್ತು ಅಲ್ಲಿ ನಿಜವಾದ ಚಲನಶೀಲತೆಯುಜನರು ಸಾಮಾನ್ಯವಾಗಿ ಅಂದುಕೊಳ್ಳುವುದಕ್ಕಿಂತ ಮತ್ತು ಈ ಹಿಂದಿನ ಪಾಂಡಿತ್ಯಪೂರ್ಣ ಅಧ್ಯಯನಗಳು (Bowles et al

2005) ತೋರಿಸಿಕೊಟ್ಟಿದ್ದಕ್ಕಿಂತ ಗಣನೀಯ ಪ್ರಮಾಣದಲ್ಲಿ ಕಡಮೆ ಇದೆ ಎಂಬುದನ್ನು ಸಾಧಿಸಲು ನಮಗೀಗ ಬಹಳಷ್ಟು ಪುರಾವೆಗಳು ಲಭ್ಯ ಇವೆ. ಈ ತಪ್ಪು ಗ್ರಹಿಕೆಯನ್ನು ಉತ್ತೇಜಿಸುವಲ್ಲಿ ಸಿದ್ಧಾಂತ, ಮಾಧ್ಯಮ ಮತ್ತು ಜನಪ್ರಿಯ ಸಂಸ್ಕೃತಿಯ ಪಾತ್ರ (ಉದಾಹರಣೆಗೆ, ಹೊರಾಷಿಯೋ ಆಲ್ಜರ್ ತರಹ ಬಡವನಾಗಿದ್ದವನು ಸಿರಿವಂತನಾದ ಕಥೆಗಳ ತರಹ ಕಥೆಗಳ ಪ್ರಚಾರದ ಮೂಲಕ; ಸಾಧಾರಣ ಕುಟುಂಬದಿಂದ ಬಂದಂತಹ ರೋನಾಲ್ಡ್ ರೇಗನ್ ಹೇಗೆ ಮೊದಲು ಕ್ಯಾಲಿಫೋರ್ನಿಯಾದ ಗವರ್ನರ್ ಆಗಿ ಅನಂತರ ಅಮೆರಿಕದ ಅಧ್ಯಕ್ಷರಾದರು, ಇತ್ಯಾದಿ ಪ್ರೇರಣಾತ್ಮಕ ಕಥೆಗಳ ಪ್ರಸರಣದ ಮೂಲಕ)ವನ್ನು ಅಲ್ಲಗಳೆಯಲಾಗುವುದಿಲ್ಲ.

6. ಉದಾಹರಣೆಗೆ, ವ್ಯಾಪಕವಾಗಿ ಉಲ್ಲೇಖಿಸಲಾಗುವ ಹಲವು ಸಣ್ಣ ಸಮಾಜಗಳ ಕುರಿತಾಗಿನ ಒಂದು ಪ್ರಾಯೋಗಿಕ ಅಧ್ಯಯನದಲ್ಲಿ (Henreich et al 2004)ಲೇಖಕರು ಜನರು ಯಾವ ರೀತಿಯಾಗಿ ತಮ್ಮ ಜೀವನೋಪಾಯವನ್ನು ಕಂಡುಕೊಂಡಿದ್ದಾರೆ ಎಂಬ ಆಧಾರದ ಮೇಲೆ ಅವರು ಯಾವ ರೀತಿಯಾಗಿತಮ್ಮ ಮಾತೇ ಕೊನೆಯದು ಅಥವಾ ತಾವು ಮಾತ್ರ ಸಾರ್ವಜನಿಕ ಒಳಿತಿನರಕ್ಷಕರು ಎಂಬ ಆಟ ಆಡುತ್ತಾರೆ ಎಂಬುದನ್ನು ವಿವರಿಸಬಹುದು ಎಂದು ಹೇಳುತ್ತಾರೆ.
7. "... ವರ್ಗ ವಿಭಜನೆಗಳು ಆಧುನಿಕ ಸಮಾಜಗಳಲ್ಲಿ ನಾವು ಕಾಣುವ ಆರ್ಥಿಕ ಅಸಮಾನತೆಗಳ ಮೂಲ ಕಾರಣವಾಗಿ ಉಳಿದಿವೆ. ಸಾಮಾಜಿಕ ವರ್ಗದ ಪ್ರಭಾವವು ನಮ್ಮ ಜೀವನದ ಮೇಲೆ ಅತಿ ಹೆಚ್ಚಿನ ಪ್ರಭಾವವನ್ನು ಬೀರುವುದನ್ನು ಮುಂದುವರಿಸಿದೆಮತ್ತು ನಾವು ಯಾವ ವರ್ಗಕ್ಕೆ ಸೇರಿದ್ದೇವೆಯೋ ಅದು ನಮ್ಮ ಜೀವಿತಾವಧಿ, ನಮ್ಮ ಒಟ್ಟಾರೆ ದೈಹಿಕ ಆರೋಗ್ಯ, ಉತ್ತಮ ಶಿಕ್ಷಣಾವಕಾಶ, ಉತ್ತಮ ಉದ್ಯೋಗಾವಕಾಶ, ಇತ್ಯಾದಿ ಅಂಶಗಳಿಗೆ ಸಂಬಂಧಿಸಿದಂತೆ ಉಂಟಾಗುವ ವಿವಿಧ ರೀತಿಯ ಅಸಮಾನತೆಗಳೊಂದಿಗೆ ನಿಕಟ ಸಂಬಂಧ ಹೊಂದಿದೆ" (Giddens 2009: 470).
8. ಹಾಗೆಯೇ Djurfeldt et al (2008)ಅನ್ನು ಸಹ ನೋಡಿ.ಇದು ತಮಿಳುನಾಡಿನ ಗ್ರಾಮೀಣ ಪ್ರದೇಶಗಳಲ್ಲಿ (ಇತರ ವಿಷಯಗಳನ್ನು ಒಳಗೊಂಡಂತೆ) ಅಂತರ್ಪೀಳಿಗೆಯ ನಡುವಿನ ಚಲನಶೀಲತೆಯನ್ನು ಕುರಿತಂತೆ ಕೈಗೊಂಡ ಇತ್ತೀಚಿನ ಅಧ್ಯಯನವಾಗಿದೆ.
9. ಈ ಅಧ್ಯಯನದಲ್ಲಿ ಅವರು ಮುಂದಿನ ಪೀಳಿಗೆಯು ಎಷ್ಟು ವರ್ಷಗಳ ಶಿಕ್ಷಣವನ್ನು ಪಡೆದುಕೊಳ್ಳುತ್ತದೆ ಎಂಬುದು ಪೋಷಕರ ಶಿಕ್ಷಣದೊಂದಿಗೆ ನೇರವಾಗಿ ಸಂಬಂಧ ಹೊಂದಿಲ್ಲ ಎಂಬುದನ್ನು ಸಂಖ್ಯಾಶಾಸ್ತ್ರೀಯವಾಗಿ ದಾಖಲಿಸುತ್ತಾರೆ - ಇದರ ಪ್ರಕಾರ ಶಿಕ್ಷಣದ ಅವಕಾಶ ಪಡೆದುಕೊಳ್ಳುವಲ್ಲಿ ಸಾರ್ವಜನಿಕ (ಖಾಸಗಿ ಅಲ್ಲ) ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇದು ಮುಂದುವರಿದು ಅನುಕ್ರಮವಾದ ಪ್ರೋಬಿಟ್ ಮಾದರಿಯನ್ನು ಬಳಸಿಕೊಂಡು, ಮಗು ಮಾಧ್ಯಮಿಕ/ಪ್ರೌಢ ಶಿಕ್ಷಣಪಡೆಯುವಲ್ಲಿ ತಾಯಿಯ ಶಿಕ್ಷಣದ ಪ್ರಭಾವವನ್ನು ಎತ್ತಿತೋರಿಸುತ್ತದೆ. ಇಲ್ಲಿ ಪ್ರೌಢೋತ್ತರ ಶಿಕ್ಷಣ ಪಡೆದುಕೊಳ್ಳುವಲ್ಲಿ ತಂದೆಯ ಶಿಕ್ಷಣ ಮುಖ್ಯವಾಗುವುದು ಗೋಚರಿಸುತ್ತದೆ.
10. “Der Apfel fälltnichtweitvom Stamm" ಅಂದರೆ ಸೇಬಿನ ಹಣ್ಣು ಸೇಬಿನ ಮರದ ಕೆಳಗೆಯೇ ಬೀಳುತ್ತದೆಎಂಬುದು ಒಂದು ಜರ್ಮನ್ ಗಾದೆ. ಇದನ್ನು ನಮಗೆ ಹೇಳಿದ ಆಂಡ್ರಿಯಾಸ್ ಮೆಟ್ಸ್‌ಕೆಗೆ ನಮ್ಮಧನ್ಯವಾದಗಳು. ಇತರ ಭಾಷೆಗಳಲ್ಲಿ ಕೂಡ ಇದೇ ಅರ್ಥ ಸೂಚಿಸುವ ಗಾದೆಗಳು ಪ್ರಚಲಿತದಲ್ಲಿವೆ.[ಕನ್ನಡದಲ್ಲಿ ಇದೇ ರೀತಿ ಅರ್ಥ ಹೊಮ್ಮಿಸುವ ಗಾದೆಗಳು ಪ್ರಚಲಿತದಲ್ಲಿವೆ. ಉದಾ., ತಂದೆಯಂತೆ ಮಗ, ನೂಲಿನಂತೆ ಸೀರೆ; ಅಪ್ಪ ನೆಟ್ಟ ಆಲಕ್ಕೆ ಜೋತು ಬೀಳುವುದು, ಇತ್ಯಾದಿ].
11. ಇಂತಹ ಹೋಲಿಕೆಗಳನ್ನು ಮಾಡುವಾಗ ಅದರಲ್ಲೂ ಮುಖ್ಯವಾಗಿ ಅಂತರ್ಪೀಳಿಗೆಯ ನಡುವಿನ ಚಲನಶೀಲತೆಯ ಹೋಲಿಕೆಯ ಸಂದರ್ಭದಲ್ಲಿ ನಾವು ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಬೇರೆ ಬೇರೆ ಕಾಲಾವಧಿಯಲ್ಲಿ ಮಾಡಿದ ಈ ಸಮೀಕ್ಷೆಗಳಲ್ಲಿ ಒಳಗೊಂಡ ಕೆಲವು ಪೀಳಿಗೆಗಳಲ್ಲಿ (ಅಂದರೆ, ಒಂದೇ ಕಾಲಘಟ್ಟದಲ್ಲಿ ಜನಿಸಿದವರು, ಇದು ಅವರಿಗೆ ಸಿಗುವ ಶೈಕ್ಷಣಿಕ ಅವಕಾಶಗಳು ಮತ್ತು ಆಯಾ ಕಾಲಘಟ್ಟದ ಕಾರ್ಮಿಕ ಮಾರುಕಟ್ಟೆ ಪರಿಸ್ಥಿತಿಗಳು ಅವರ ಮೇಲೆ ಬೀರುವ ಪರಿಣಾಮಗಳು) ಕೆಲವು ಸಾಮಾನ್ಯ ಅಂಶಗಳು ಮತ್ತು ಕೆಲವು ಭಿನ್ನತೆಗಳು ಇರುತ್ತವೆ. ಉದಾ., ನಾವು 20 ರಿಂದ 60 ವರ್ಷದೊಳಗಿನ ವ್ಯಕ್ತಿಗಳನ್ನು ಕೇಂದ್ರೀಕರಿಸಿ, 1983 ಮತ್ತು 2004-05 ರಲ್ಲಿ ಕೈಗೊಂಡ ಸಮೀಕ್ಷೆಗಳನ್ನು ಪರಿಗಣಿಸಿದರೆ, ಈ ಎರಡೂ ಮಾದರಿಗಳಲ್ಲಿ ನಮಗೆ1940, 1950 ಮತ್ತು 1960ರ ದಶಕಗಳಲ್ಲಿ ಜನಿಸಿದವರು ಇರುತ್ತಾರೆ.

ಹಿಂದಿನ ಸಮೀಕ್ಷೆಯಲ್ಲಿ ಮಾತ್ರ 1920 ಮತ್ತು 1930ರ ದಶಕಗಳಲ್ಲಿ ಜನಿಸಿದ ವ್ಯಕ್ತಿಗಳನ್ನು ಒಳಗೊಂಡಿದ್ದರೆ, ಅನಂತರದ ಸಮೀಕ್ಷೆ ಮಾತ್ರ 1970 ಮತ್ತು 1980ರ ದಶಕಗಳಲ್ಲಿ ಜನಿಸಿದ ವ್ಯಕ್ತಿಗಳನ್ನು ಒಳಗೊಂಡಿದೆ.

12. 2001ರ ಜನಗಣತಿಯ ಪ್ರಕಾರ, 1, 2 ಮತ್ತು 3ರಿಂದ 4 ಸದಸ್ಯರನ್ನು ಒಳಗೊಂಡ ಕುಟುಂಬಗಳ ಶೇಕಡಾವಾರು ಅನುಕ್ರಮವಾಗಿ 3.9%, 8.2% ಮತ್ತು 30.9%. ಇದಕ್ಕೆ ಅನುಗುಣವಾಗಿ 1981ರ ಜನಗಣತಿಯಲ್ಲಿ ದೊರಕಿದ ಅಂಕಿ-ಅಂಶಗಳು ಕ್ರಮವಾಗಿ 5.6%, 8.4% ಮತ್ತು 25.7%. ಈ ಅಂಕಿಅಂಶಗಳು ಸಾಮಾನ್ಯ ಕುಟುಂಬಗಳಿಗೆ(ಮನೆಮಠ ಇಲ್ಲದವರು ಅಥವಾ ನಿರಾಶ್ರಿತರ ತಾಣದಲ್ಲಿರುವವರು ಅಲ್ಲ)ಮಾತ್ರ ಅನ್ವಯವಾಗುವಂತಿದ್ದು, ಇವುಗಳನ್ನು 2001 ಮತ್ತು 1981 ನೇ ಇಸವಿಗೆ ಅನ್ವಯವಾಗುವಂತೆ ಅನುಕ್ರಮವಾಗಿ ಜನಗಣತಿ (2001a) ಮತ್ತು ಜನಗಣತಿ (1981) ರಿಂದ ಲೆಕ್ಕಹಾಕಲಾಗಿದೆ.

13. ಮಹಿಳೆಯರಿಗೆ ಸಂಬಂಧಪಟ್ಟಂತೆ ಔದ್ಯೋಗಿಕ ಚಲನಶೀಲತೆ ನಗಣ್ಯ ಎಂಬುದು ಇದರ ಅರ್ಥವಲ್ಲ. ಆದರೆ ನಮಗೆ ಲಭ್ಯವಿರುವ ದತ್ತಾಂಶಗಳ ಇತಿಮಿತಿಗಳು ಇದನ್ನು ವಿಶ್ಲೇಷಿಸಲು ಅವಕಾಶ ಕೊಡುವುದಿಲ್ಲ. ಅಷ್ಟೇ ಅಲ್ಲದೆ, ಭಾರತದಲ್ಲಿಹೆಚ್ಚಿನ ಮಹಿಳೆಯರು, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ, ಮನೆ ಕೆಲಸದಲ್ಲಿ ತೊಡಗಿಸಿಕೊಂಡಿರುತ್ತಾರೆ. ಹಾಗಾಗಿ ಚಲನಶೀಲತೆಯ ಪರಿಶೀಲನೆಯು ಇದನ್ನೇ ಪ್ರತಿಬಿಂಬಿಸುತ್ತದೆ ಎಂದುಕೊಳ್ಳಬಹುದು.

14. ಮುಂದಕ್ಕೆ ಈ ವಿಶ್ಲೇಷಣೆಯಲ್ಲಿ ಬಳಸಲಾದ ಸ್ಟಾಟಾ ಪ್ರೋಗ್ರಾಂ[ಸಂಖ್ಯಾ ಶಾಸ್ತ್ರೀಯ ಸಾಫ್ಟ್‌ವೇರ್] ಗಳನ್ನು ಈ ಕೆಳಗಿನ URLನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು: http://www.igidr.ac.in/faculty/sripad/research.htm

15. ರೈತರು: ಒಂದು ವರ್ಷದಲ್ಲಿ ತಮಗೆ ಸೇರಿದ ಜಮೀನಿನಲ್ಲಿ ಕಳೆದ ಸಮಯವು ಸ್ವಂತ ವ್ಯವಹಾರದಲ್ಲಿಅಥವಾ ಇತರರಿಗಾಗಿ ದುಡಿದ ಸಮಯಕ್ಕಿಂತ ಹೆಚ್ಚು ಅಥವಾ ಸಮಸಮವಾಗಿದೆ; ಕೃಷಿಯೇತರ ಸ್ವಂತ ಉದ್ಯೋಗದಲ್ಲಿರುವವರು: ಸ್ವಂತ ವ್ಯವಹಾರದಲ್ಲಿ ತೊಡಗಿಸಿದ ಸಮಯವು ಸ್ವಂತ ಜಮೀನಿನಲ್ಲಿ ತೊಡಗಿಸಿಕೊಂಡ ಸಮಯಕ್ಕಿಂತ ಅಥವಾ ಇತರರಿಗೆ ದುಡಿದ ಸಮಯಕ್ಕಿಂತ ಹೆಚ್ಚಾಗಿದೆ ಅಥವಾ ಸಮಸಮವಾಗಿದೆ; ಕೆಲಸಗಾರರು: ಇತರರಿಗಾಗಿ ಕೆಲಸ ಮಾಡಿದ ಸಮಯವು ಸ್ವಂತ ಜಮೀನಿನಲ್ಲಿ ಅಥವಾ ಸ್ವಂತ ವ್ಯಾಪಾರದಲ್ಲಿ ಕಳೆದ ಸಮಯಕ್ಕಿಂತ ಹೆಚ್ಚಾಗಿದೆ. ಗಮನಿಸಿ: ಒಂದೇ ಪ್ರಮಾಣದ ಸಮಯ ವ್ಯಯ ಮಾಡಿದ ಸಂದರ್ಭಗಳು ಎದುರಾದಾಗ ನಾವು ಅದನ್ನು ನಿರ್ದಿಷ್ಟ ರೀತಿಯಲ್ಲಿ ಮುರಿದಿದ್ದೇವೆ. ಸಮ ಸ್ಥಾನದಲ್ಲಿರುವ ವ್ಯಕ್ತಿಗಳ ಸಂಖ್ಯೆ (ಮತ್ತು ಪ್ರಮಾಣ) ಚಿಕ್ಕದಾಗಿದೆ ಮತ್ತು ನಾವು ಈ ಸಮಸ್ಥಾನವನ್ನು ಬೇರೆ ರೀತಿಯಲ್ಲಿ ಮುರಿದರೆ, ಫಲಿತಾಂಶಗಳು ಬದಲಾಗುವುದಿಲ್ಲ. ನಮಗೆ ಒಂದು ಸಣ್ಣ ಪ್ರಮಾಣದಲ್ಲಿ ಯಾವುದೇ ಕೆಲಸದಲ್ಲಿ (ಸ್ವಂತ ಜಮೀನು, ಸ್ವಂತ ವ್ಯಾಪಾರ, ಅಥವಾ ನೌಕರಿ)ಯಲ್ಲಿ ತೊಡಗಿಸಿಕೊಳ್ಳದೆ ಇರುವ ಜನರು ಎದುರಾಗಿದ್ದಾರೆ. ಇದನ್ನುಸೇರಿಸಿದರೆ ಫಲಿತಾಂಶಗಳು ಬದಲಾಗುವುದಿಲ್ಲವಾದರೂ ನಾವು ಸಮೀಕ್ಷೆಯ ವಿಶ್ಲೇಷಣೆಯಲ್ಲಿ ಇದನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

16. ದತ್ತಾಂಶಗಳ ಕಟ್ಟಿನಲ್ಲಿ (ಡೇಟಾ ಸೆಟ್), ಜನರು ತೊಡಗಿಸಿಕೊಂಡಿರುವಂತಹ ಕೆಲಸದ ವಿವರಣೆಯನ್ನು ಕೊಟ್ಟಿದ್ದೇವೆ ಮತ್ತು 'ಅನ್ಯ ಉದ್ಯೋಗಗಳು' ಎಂದಿರುವ ಹಲವೆಡೆ ನಮಗೆ ಜನರು ಪ್ರಾಥಮಿಕ ಉದ್ಯೋಗಗಳ ರೀತಿಯ ಉದ್ಯೋಗಳಲ್ಲಿ ತೊಡಗಿಸಿಕೊಂಡಿರುವುದು ಕಾಣಿಸುತ್ತದೆ.

17. IHDS ದತ್ತಾಂಶಗಳಲ್ಲಿನ ಇತಿಮಿತಿಗಳು ಮತ್ತು ತಾಂತ್ರಿಕ ಕಾರಣಗಳಿಗಾಗಿ (ಈಗಾಗಲೇ ಚರ್ಚಿಸಿದಂತೆ) ನಮಗೆ ನಿಖರವಾದ ಯೋಜನೆಯನ್ನು ಬಳಸಲು ಸಾಧ್ಯವಾಗಿಲ್ಲ.

18. ವೇತನ, ಕೌಶಲ್ಯ, ಸ್ಥಾನಮಾನ ಅಥವಾ "ಸಾಮಾಜಿಕ ವರ್ಗದ ಸ್ಥಾನಮಾನ" ಕ್ಕೆ ಸಂಬಂಧಿಸಿದಂತೆ.

19. ಇಲ್ಲಿ ನಾವು ನಿರ್ದಿಷ್ಟವಾಗಿ ಸ್ಪಷ್ಟಪಡಿಸಬೇಕಾದ ಒಂದು ಅಂಶವೆಂದರೆ, ಹಳ್ಳಿಗಳಿಂದ ನಗರಗಳ ಕಡೆಗೆ ಜನರ ವಲಸೆ ನಡೆಯುವುದರಿಂದ, ಗ್ರಾಮೀಣ ಪ್ರದೇಶದಲ್ಲಿನ ವ್ಯಕ್ತಿಯೊಬ್ಬರ ಮಗನು ನಗರ ಪ್ರದೇಶಕ್ಕೆ ವಲಸೆ ಹೋಗಿರುವ ಸಾಧ್ಯತೆ

ಇರುವುದರಿಂದ ಅವನನ್ನು ಮೇಲಿನ ಕೋಷ್ಟಕದಲ್ಲಿ ಪರಿಗಣಿಸಲಾಗಿಲ್ಲ. ಇನ್ನೊಂದರ್ಥದಲ್ಲಿ ಹೇಳುವುದಾದರೆ, ಚಲನಶೀಲತೆಯ ಮ್ಯಾಟ್ರಿಕ್ಸ್‌ನಲ್ಲಿ ನಮೂದಾಗಿರುವ ಚಲನಶೀಲತೆ ನಿಜವಾಗಿ ನಡೆದಿರುವ ಚಲನಶೀಲತೆಗಿಂತ ಕಡಮೆ ಪ್ರಮಾಣದಲ್ಲಿ ಇರಬಹುದು ಏಕೆಂದರೆ ಗ್ರಾಮೀಣ ಪ್ರದೇಶದ ರೈತನ ಮಗನೊಬ್ಬ ತನ್ನ ಊರನ್ನು ಬಿಟ್ಟು ನಗರಕ್ಕೆ ಬಂದು ಬೇರೆ ಉದ್ಯೋಗದಲ್ಲಿ ತೊಡಗಿಸಿಕೊಂಡಿರಬಹುದು - ಮತ್ತು ಅದು ಇಲ್ಲಿ ದಾಖಲಾಗದಿರುವ ಸಂಭವ ಇದೆ. ಇದನ್ನು ನಾವು ಲೆಕ್ಕ ಹಾಕುವಾಗ ಮಗನು ತಂದೆಯಂತೆಯೇ ಗ್ರಾಮೀಣ ಪ್ರದೇಶದಲ್ಲಿ ಜೀವನ ನಡೆಸುತ್ತಿದ್ದು ತಂದೆ ಸೇರಿರುವ ವರ್ಗದಲ್ಲಿಯೇ ಮುಂದುವರಿಯುವ ಸಂಭವನೀಯತೆಯ ಆಧಾರದ ಮೇಲಷ್ಟೆ ಪರಿಗಣಿಸಬಹುದು. ನಾವು ಅಖಿಲ ಭಾರತ ಮಟ್ಟಕ್ಕೆ ಸಂಬಂಧಿಸಿದಂತೆ ಚಲನಶೀಲತೆಯ ಮ್ಯಾಟ್ರಿಕ್ಸ್ ಅನ್ನು ಪ್ರಸ್ತುತಪಡಿಸಿದ್ದೇವೆ - ಇದು ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ವಲಸೆ ಬರುವ ಜನರ ಔದ್ಯೋಗಿಕ ಪರಿವರ್ತನೆಯನ್ನು ದಾಖಲಿಸುತ್ತದೆ.

20. ಇದರರ್ಥ, ಜನರು ಈ ಉದ್ಯೋಗಗಳನ್ನು ತೊರೆಯುವ ಸಾಧ್ಯತೆ/ಸಾಮರ್ಥ್ಯ ಕಡಮೆ.

21. ಸಮಾಶ್ರಯಣವನ್ನು ವಿವಿಧ ಸಮಯಗಳಲ್ಲಿ ಮತ್ತು ವಿವಿಧ ಭೌಗೋಳಿಕ ಪ್ರದೇಶಗಳಲ್ಲಿ ಶೈಕ್ಷಣಿಕ ಸಂಸ್ಥೆಗಳು ಮತ್ತು ಕಾರ್ಮಿಕ ಮಾರುಕಟ್ಟೆಯನ್ನು ಪ್ರವೇಶಿಸಿದ ವ್ಯಕ್ತಿಗಳನ್ನು ಒಳಗೊಂಡಿರುವ ಮಾದರಿಯನ್ನು ಬಳಸಿ ನಡೆಸಬೇಕು. ಸಮಯ ಮತ್ತು ಪ್ರದೇಶಗಳಿಗೆ ಕಲ್ಪಿತ/ಪರಿಣಾಮಗಳನ್ನು ಬಳಸುವುದು ಇದನ್ನು ನಿಯಂತ್ರಿಸುವಲ್ಲಿ ಅಸಮರ್ಪಕವಾಗಿರುತ್ತದೆ.

22. ಒಬ್ಬ ವ್ಯಕ್ತಿಯ ಉದ್ಯೋಗವು ಅವನು ಈ ಹಿಂದೆ ಕೆಲಸದಲ್ಲಿ ಇದ್ದಾಗಿನ ಅವನ ಕುಟುಂಬದ ಗಾತ್ರ ಮತ್ತು ಸಂಯೋಜನೆಯೊಂದಿಗೆ ಸಂಬಂಧಹೊಂದಿರಬಹುದು. ಸಮೀಕ್ಷಾ ಮಾದರಿಯು ಪ್ರಸ್ತುತ ಮನೆಯ ಗಾತ್ರ ಮತ್ತು ಕುಟುಂಬದ ಸಂಯೋಜನೆಯನ್ನು ಮಾತ್ರ ನೀಡುತ್ತದೆ, ಆದರೆ ಕಾಲಾಂತರದಲ್ಲಿ ಮನೆಯ ಗಾತ್ರ ಮತ್ತು ಸಂಯೋಜನೆಯು ಬದಲಾಗುವುದರಿಂದ ಈ ದಾಖಲೆ ನಿಖರವಾಗಿರದ ಸಾಧ್ಯತೆ ಹೆಚ್ಚಾಗಿರುತ್ತದೆ.

23. ಆದಾಯದ ಚಲನಶೀಲತೆಯ ಕುರಿತ ಅತ್ಯುತ್ತಮ ಸಮೀಕ್ಷಾ ಮಾಹಿತಿಗಾಗಿ Fields and Ok (1999)ಪರಾಮರ್ಶಿಸಿ. ಈ ಕೆಲವು ಕ್ರಮಗಳ ವಿವರಣೆಗಾಗಿ, Shorrocks (1978), Van De Gaer et al (2000) ಮತ್ತು Formby et al (2004) ನೋಡಿ. ಕೆಲವು ಲೇಖಕರು (ಉದಾಹರಣೆಗೆ, Shorrocks 1978) ಅಸಾಧ್ಯತೆಯ ಫಲಿತಾಂಶಗಳನ್ನುಪಡೆದಿದ್ದಾರೆ, ಅಂದರೆ, ಹೇಗೆ ವಿಭಿನ್ನ ಮಾನದಂಡಗಳು ಪರಸ್ಪರ ವಿರುದ್ಧವಾಗಿ ವರ್ತಿಸಬಹುದು ಎಂಬುದನ್ನು ಅವರು ತೋರಿಸಿದ್ದಾರೆ.

24. ಕೆಳಗೆ ಚರ್ಚಿಸಲಾದ $M_1$ ಮತ್ತು ಐಜೆನ್ ಮೌಲ್ಯ-ಆಧಾರಿತ ಅಳತೆಗಳಿಗಿಂತ ($M_3$ ಮತ್ತು $M_4$) ಭಿನ್ನವಾಗಿ, ಅಂತರ-ಆಧಾರಿತ ಮಾಪನವು ($M_2$) ಔದ್ಯೋಗಿಕ ವರ್ಗಗಳಿಗೆ ನೀಡಲಾದ ಹೆಸರುಗಳು/ಶ್ರೇಣಿಗಳ ಮೇಲೆ ಅವಲಂಬಿತವಾಗಿರುತ್ತದೆ (ಉದಾಹರಣೆಗೆ, ರೈತರು: 1, ಇತ್ಯಾದಿ). ನಾವು ಈ ಚಲನಶೀಲತೆಯ ಕ್ರಮಗಳನ್ನು ಗುಂಪುಗಳಾದ್ಯಂತ (ಜಾತಿ, ಸಮೂಹ, ಇತ್ಯಾದಿ) ಚಲನಶೀಲತೆಯನ್ನು ಹೋಲಿಸಲು ಮಾತ್ರ ಬಳಸುತ್ತಿದ್ದೇವೆ. ಆದ್ದರಿಂದ ಸಾಮಾನ್ಯವಾಗಿ ನಮ್ಮ ಫಲಿತಾಂಶಗಳು M2ನ ಈ ನಿರ್ದಿಷ್ಟ ಗುಣಲಕ್ಷಣದಿಂದ ಪ್ರಭಾವಿತವಾಗುವುದಿಲ್ಲ.

Suppose the distribution of occupations (i e, the percentage of individuals in various occupational categories) at a point in time t is given by x(t) (a 1×m matrix). The distribution of occupations in the next generation would be x(t+1)=x(t)T; two generations later it would be $x(t+2)= x(t+1)T^2=x(t)T2$, and so on. In the interests of space, we do not want to go into the technical details here, but under some conditions, this process will converge to a “steady state” distribution of occupations (x* ) (which does not change from one generation to the other) given by x* = x*T.

25. ಉದ್ಯೋಗಗಳ ವಿತರಣೆಯನ್ನು (ಅಂದರೆ, ವಿವಿಧ ಔದ್ಯೋಗಿಕ ವರ್ಗಗಳಲ್ಲಿನ ವ್ಯಕ್ತಿಗಳ ಶೇಕಡಾವಾರು) ಒಂದು ಸಮಯದಲ್ಲಿ t ಅನ್ನು x(t) (1×m ಮ್ಯಾಟ್ರಿಕ್ಸ್) ನಿಂದ ನೀಡಲಾಗಿದೆ ಎಂದು ಭಾವಿಸೋಣ. ಆಗ ಮುಂದಿನ ಪೀಳಿಗೆಯಲ್ಲಿ ಉದ್ಯೋಗಗಳ ವಿತರಣೆಯು x(t+1)=x(t)T ಆಗಿರುತ್ತದೆ; ಅದರ ಮುಂದಿನ ಎರಡು ತಲೆಮಾರುಗಳ ನಂತರ ಅದು $x(t+2)= x(t+1)T=x(t)T^2$, ಹೀಗೆ ಮುಂದುವರಿಯುತ್ತದೆ. ಸ್ಥಳಾವಕಾಶದ ಕೊರತೆಯಿಂದ, ನಾವು ಇಲ್ಲಿ ಅದರ ತಾಂತ್ರಿಕ

ವಿವರಗಳಿಗೆ ಹೋಗಲು ಬಯಸುವುದಿಲ್ಲ, ಆದರೆ ಕೆಲವು ಪರಿಸ್ಥಿತಿಗಳಲ್ಲಿ, ಈ ಪ್ರಕ್ರಿಯೆಯು ಉದ್ಯೋಗಗಳ ಒಂದು "ಸ್ಥಿರ ಸ್ಥಿತಿ" ವಿತರಣೆಯ ಕಡೆಗೆ ಒಮ್ಮುಖ ಚಲಿಸುತ್ತದೆ (x* ) (ಅಂದರೆ ಇದು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಬದಲಾಗುವುದಿಲ್ಲ) x* = x*T ಯಿಂದ ಪಡೆದುಕೊಂಡಂತೆ.

26. ಈ ಫಲಿತಾಂಶವನ್ನು Singh (2011)ಕೂಡ ಬೆಂಬಲಿಸುತ್ತಾರೆ.
27. SC/STಸಮುದಾಯಗಳು ಮತ್ತು SC/STಯೇತರ ಸಮುದಾಯಗಳಲ್ಲಿ ಅಂತರ್ಪೀಳಿಗೆಗಳ ನಡುವೆ ಶೈಕ್ಷಣಿಕ ಮತ್ತು ಆದಾಯ ಚಲನಶೀಲತೆಯ ದರಗಳು ಒಮ್ಮುಖವಾಗಿವೆ ಎಂದು ಅವರು ಕಂಡುಕೊಂಡಿದ್ದಾರೆ. SC/STಸಮುದಾಯಗಳು ಮತ್ತು SC/STಯೇತರ ಸಮುದಾಯಗಳಲ್ಲಿವೃತ್ತಿಬದಲಾವಣೆಯ ಪ್ರಮಾಣ ಕೂಡ ಒಂದೇ ಆಗಿದೆ.

**ಪರಾಮರ್ಶನ ಗ್ರಂಥಗಳು:**


Acs, Gregory (2011): “Downward Mobility from the Middle Class: Waking Up from the American Dream”, Pew Charitable Trusts, viewed on 15 December 2012 (http://www.pewtrusts.org/uploadedFiles/wwwpewtrustsorg/Reports/Economic_Mobility/Pew_Poll Project_Final_SP.pdf)

Asadullah, M N and G Yalonetzky (2012): “Inequality of Educational Opportunity in India: Changes over Time and across States”, World Development, 40 (6): 1151-63.

Balakrishnan, P, ed. (2010): Economic Growth in India: History and Prospect (New Delhi: Orient University Press).

Banerjee, A V and A F Newman (1993): “Occupational Choice and the Process of Development”, Journal of Political Economy, 101(2): 274-98.

Bardhan, P (2010): Awakening Giants, Feet of Clay: Assessing the Economic Rise of China and India (New Jersey: Princeton University Press).

Bardhan, P K, S Bowles and H Gintis (2000): “Wealth Inequality, Credit Constraints, and Economic Performance” in Anthony Atkinson and François Bourguignon (ed.), Handbook of Income Distribution (North-Holland: Dortrecht).

Behrman, J R, A Gaviria and M Szekely (2001): “Intergenerational Mobility in Latin America”, Working Paper No 452, Inter-American Development Bank/RES.

Björklund, A and M Jäntti (2000): “Intergenerational Mobility of Socio-Economic Status in Comparative Perspective”, Nordic Journal of Political Economy, 26(1): 3-32.

Bourguignon, F, F H G Ferreira and M Walton (2007): “Equity, Efficiency and Inequality Traps: A Research Agenda”, Journal of Economic Inequality, 5(2): 235-56.

Bowles, S, H Gintis and M Osbourne-Groves (2005): “Introduction: Intergenerational Inequality Matters” in Samuel Bowles, Herbert Gintis and Melissa Osbourne-Groves (ed.), Unequal Chances: Family Background and Economic Success (Princeton, NJ: Princeton University Press).

Bowles, S (2006): Microeconomics: Behavior, Institutions and Evolution (Princeton: Princeton University Press).

Census (1981): Household Tables (New Delhi: Registrar General and Census Commissioner of India). – (2001a): “Data Highlights”, viewed on 7 May 2012

(http://censusindia.gov.in/Data_Products/Data_Highlights/Data_Highlights_link/ data_highlights_hh1_2_3.pdf). – (2001b): “Household Size”, viewed on 7 May 2012 (http://censusindia.gov.in/Census_Data_ 2001/Census_data_finder/H_Series/Household_Size.htm).

Cogneau, D and S Mesple-Somps (2008): “Inequality of Opportunity for Income in Five Countries of Africa”, Working Paper No DT/2008-04, DIAL.

Chakravarty, S (1987): Development Planning: The Indian Experience (New Delhi: Oxford University Press).

Desai, S, A Dubey, B L Joshi, M Sen, A Shariff and R Vanneman (2010): Human Development in India: Challenges for a Society in Transition (New Delhi: Oxford University Press).

Dev, M S (2008): Inclusive Growth in India: Agriculture, Poverty and Human Development (New Delhi: Oxford University Press).

Djurfeldt, G, V Athreya, N Jayakumar, S Lindberg, A Rajagopal and R Vidyasagar (2008): “Agrarian Change and Social Mobility in Tamil Nadu”, Economic & Political Weekly, 43(45): 50-61.

Drèze, J and A K Sen, ed. (2002): India: Development and Participation (New Delhi: Oxford University Press).

Driver, E D (1962): “Caste and Occupational Structure in Central India”, Social Forces, 41 (1): 26-31. Erikson, R and J H Goldthorpe (1992): The Constant Flux: A Study of Class Mobility in Industrial Societies (Oxford: Clarendon Press).

Fields, G S and E A Ok (1999): “Measuring Movement of Incomes”, Economica, 66 (264): 455-72.

Formby, J, J Smith and B Zheng (2004): “Mobility Measurement, Transition Matrices and Statistical Inference”, Journal of Econometrics, 120 (1): 181-205.

Ganzeboom, Harry B G and D J Treiman (1996): “Internationally Comparable Measures of Occupational Status for the 1988 International Standard Classification of Occupations”, Social Science Research, 25 (2):201-39.

Geweke J, R Marshall and G A Zarkin (1986): “Exact Inference for Continuous Time Markov Chain Models”, Review of Economic Studies, 53(4): 653-69.

Gibbons, M (2010): “Income and Occupational Intergenerational Mobility in New Zealand”, Working Paper No 10 (06), The Treasury, Government of New Zealand. Giddens, A (2009): Sociology (6th edition) (Cambridge UK: Polity Press).

Guha, R (2011): “The Nation Consumed by the State”, Outlook, 31 January.

Henrich, J, R Boyd, S Bowles, C Camerer, E Fehr and H Gintis (2004): Foundations of Human Sociality: Economic Experiments and Ethnographic Evidence from Fifteen Small-Scale Societies (New York: Oxford University Press).

Hnatkovska, V, A Lahiri and S B Paul (2011): “Breaking the Caste Barrier: Intergenerational Mobility in India”, viewed on 1 December 2011 (http://faculty.arts.ubc.ca/alahiri/Intergeneration_4.pdf).

Horan, P M (1974): “The Structure of Occupational Mobility: Conceptualization and Analysis”, Social Forces, 53 (1): 33-45. Jalan, J and R Murgai (2008): “Intergenerational Mobility in Education in India”, paper presented at the 5th annual conference of the Indian Statistical Institute, Delhi, India, December.

Jäntti, M, B Bratsberg, K Røed, O Raaum, R Naylor, E Österbacka, A Björklund and T Eriksson (2006): "American Exceptionalism in a New Light: A Comparison of Intergenerational Earnings Mobility in the Nordic Countries, the United Kingdom and the United States", IZA Discussion Paper No 1938, Institute of Labour.

Jayadev, A, S Motiram and V Vakulabharanam (2007): "Patterns of Wealth Disparities in India during the Liberalisation Era", Economic & Political Weekly, 42 (38), pp 3853-63.

Krishna, P and G Setupathy (2011): "Trade and Inequality in India", paper presented at the Columbia–NCAER Conference on Trade, Poverty, Inequality and Democracy, New Delhi, India, March.

Kumar, S, A Heath and O Heath (2002a): "Determinants of Social Mobility in India", Economic & Political Weekly, 37 (29): 2983-87. – (2002b): "Changing Patterns of Social Mobility: Some Trends over Time", Economic & Political Weekly, 37 (40): 4091-96.

Long, J and J Ferrie (2005): "A Tale of Two Labor Markets: Intergenerational Occupational Mobility in Britain and the US since 1850", NBER Working Paper No w11253, The National Bureau of Economic Research.

Maitra, P and A Sharma (2009): "Parents and Children: Education across Generations in India",paper presented at the 6th annual conference of Indian Statistical Institute, Delhi, India, December.

Majumder, R (2010): "Intergenerational Mobility in Educational and Occupational Attainment: A Comparative Study of Social Classes in India", Margin-The Journal of Applied Economic Research, 4 (4): 463-94.

Motiram, S and L Osberg (2011): "Demand and Supply for Schooling in Rural India?", IGIDR Working Paper WP-2011-010.

Motiram, S and V Vakulabharanam (2011): "Poverty and Inequality in the Age of Economic Liberalisation" in D Nachane (ed.), India Development Report 2011 (New Delhi: Oxford University Press).

Motiram, S and N Sarma (2011): "Polarisation, Inequality and Growth: The Indian Experience", ECINEQ Working Paper 2011-225, Society for the Study of Economic Inequality.

Munshi, K and M Rosenzweig (2009): "Why Is Mobility in India So Low? Social Insurance, Inequality, and Growth?", NBER Working Paper No 14850, National Bureau of Economic Research. NCO (2004): "Revised Indian National Classification of Occupations (NCO) – 2004", Directorate Journal of Employment and Training, Ministry of Labour, Government of India, viewed on 1 March 2012 (http://dget.nic.in/nco/jobdescription/welcome.html).

Panagariya, A (2008): India: The Emerging Giant (New York: Oxford University Press).

Planning Commission (2011): "Inclusive Growth: Vision and Strategy", Planning Commission, Government of India, viewed on 15 January 2012 (http://planningcommission.nic.in/plans/ planrel/fiveyr/11th/11_v1/11v1_ch1.pdf).

Roemer, J E (1982): A General Theory of Exploitation and Class (Cambridge MA: Harvard University Press). – (1998): Equality of Opportunity (Cambridge MA: Harvard University Press). – (2006): "Economic Development as Opportunity Equalisation", Cowles Foundation Discussion Paper, No 1583, Yale University.

Sarkar, S and B S Mehta (2010): “Income Inequality in India: Pre- and Post-Reform Periods”, Economic & Political Weekly, XLV (37): 45-55.

Shorrocks, A F (1978): “Income Inequality and Income Mobility”, Journal of Economic Theory, 19 (2): 376-93.

Singh, A (2011): “Essays on Inequality of Opportunity in India”, PhD thesis, Indira Gandhi Institute of Development Research.

Solon, G (1992): “Intergenerational Income Mobility in the United States”, American Economic Review, 82 (3): 393-408. – (2002): “Cross-Country Differences in Intergenerational Earnings Mobility”, Journal of Economic Perspectives, 16(3): 59-66.

Sommers, P and J Conlisk (1979): “Eigen Value Immobility Measures for Markov Chains”, Journal of Mathematical Sociology, 6(2): 253-76. Swaminathan, M (1991): “Gainers and Losers: A Note on Land and Occupational Mobility in a South Indian Village, 1977-85”, Development and Change, 2(2): 261-78.

The Probe Team (1999): Public Report on Basic Education in India (New Delhi: Oxford University Press).

Van De Gaer, D, E Schokkaert and M Martinez (2000): “Three Meanings of Intergenerational Mobility”, Economica, 68 (272): 591-537.

Vakulabharanam, V (2010): “Does Class Matter? Class Structure and Worsening Inequality in India”, Economic & Political Weekly, 45 (29): 67-76.

Weil, D (2009): Economic Growth (New Delhi: Pearson Education).

Weisskopf, T (2011): “Why Worry about Inequality in the Booming Indian Economy”, Economic & Political Weekly, 46 (47): 41-51